ಗುರುವಾರ, ಏಪ್ರಿಲ್ 13, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 102 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,392 ▲	17,812 ▲	₹62,680 (ಬೆಂಗಳೂರು) ▲	₹77,500 (ಬೆಂಗಳೂರು) ▲	82.11 ▲

ಬಿಜೆಪಿಯ ವರಿಷ್ಠರಿಗೆ ತಲೆನೋವು • ರಾಜ್ಯದ ಹಲವೆಡೆ ಪ್ರತಿಭಟನೆಯ ಕಿಚ್ಚು • ಶುರುವಾದ ರಾಜೀನಾಮೆ ಪರ್ವ

ಬಂಡಾಯ ಭಾರಿ, ಗುಳೆಗೆ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ 189 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ ಬೆನ್ನಲ್ಲೇ, ರಾಜ್ಯದ ಹಲವು ಕಡೆಗಳಲ್ಲಿ ಬಂಡಾಯ ಭುಗಿಲೆದ್ದಿದೆ. ಪ್ರತಿಭಟನೆ, ಆಕ್ರೋಶ, ರಾಜೀನಾಮೆ ಪರ್ವ ಆರಂಭವಾಗಿದ್ದು, ಬಂಡಾಯ ಶಮನಕ್ಕೆ ಬಿಜೆಪಿಯ ಕೇಂದ್ರ ಮತ್ತು ರಾಜ್ಯದ ವರಿಷ್ಠರು ಹೆಣಗಾಡುವ ಸ್ಥಿತಿ ಬಂದೊದಗಿದೆ.

ನಿಷ್ಠುರ ಕ್ರಮ ತೆಗೆದುಕೊಳ್ಳುವಷ್ಟು ಬಲ ಇರುವ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಎಲ್ಲರೂ ತಲೆಬಾಗುತ್ತಾರೆ ಎಂಬ ಅಂದಾಜಿನಲ್ಲಿದ್ದ ಬಿಜೆಪಿ ನಾಯಕರು ಪಟ್ಟಿಯನ್ನು ಬಿಡುಗಡೆ ಮಾಡಿದ್ದರು. ವರಿಷ್ಠರು ನಿರೀಕ್ಷೆಯನ್ನೂ ಮಾಡದ ರೀತಿಯಲ್ಲಿ ಆಕ್ರೋಶ ಪುಟಿದೆದ್ದಿದೆ. ಬೀದರ್‌ನಿಂದ ಚಾಮರಾಜನಗರದವರೆಗೆ ಆಕಾಂಕ್ಷಿಗಳು ಸಿಡಿಮಿಡಿಗೊಂಡಿದ್ದು, ಬಿಜೆಪಿಯನ್ನು ಆತಂಕಕ್ಕೆ ದೂಡಿದೆ.

ಟಿಕೆಟ್ ಸಿಗದೇ ನಿರಾಶೆಗೊಂಡವರು ಅನ್ಯ ಪಕ್ಷಗಳತ್ತ ವಲಸೆ ಆರಂಭಿಸಿದ್ದಾರೆ. ಸಚಿವ ಎಸ್.ಅಂಗಾರ ಅವರು ಅಸಮಾಧಾನದಿಂದಲೇ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ವಿಧಾನಪರಿಷತ್ ಸದಸ್ಯ ಆರ್.ಶಂಕರ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ನಿವೃತ್ತಿಗೆ ಸೂಚನೆ ನೀಡಿದ ಬೆನ್ನಲ್ಲೇ ಬಂಡಾಯದ ಬಾವುಟ ಹಾರಿಸಿದ್ದ ಶಾಸಕ ಜಗದೀಶ ಶೆಟ್ಟರ್ ಅವರನ್ನು ಬುಧವಾರ ದೆಹಲಿಗೆ ಕರೆಸಿಕೊಂಡು ವರಿಷ್ಠರು ಮಾತುಕತೆ ನಡೆಸಿದರೆ, ಶಿವಮೊಗ್ಗದಲ್ಲಿ ಕೆ.ಎಸ್. ಈಶ್ವರಪ್ಪ ಅವರ ಬೆಂಬಲಿಗ ಪಾಲಿಕೆ ಸದಸ್ಯರು ರಾಜೀನಾಮೆಯನ್ನು ನೀಡುವ ಮೂಲಕ ಒತ್ತಡದ ತಂತ್ರವನ್ನು ಅನುಸರಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಕಾಂಗ್ರೆಸ್‌ಗೆ ಜಿಗಿಯಲು ಸಿದ್ಧತೆ ಮಾಡಿಕೊಂಡಿದ್ದು, ಬಿಜೆಪಿ ಪ್ರಾಥಮಿಕ ಸದಸ್ಯತ್ವ ಮತ್ತು ವಿಧಾನಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಪ್ರಕಟಿಸಿದ್ದಾರೆ.

> **ಅಸಮಾಧಾನಗೊಂಡ ಕೆಲವರ ಜೊತೆ ಮಾತಾಡುವ ಕೆಲಸ ನಡೆದಿದೆ. ಸವದಿ ಜತೆ ಮಾತಾಡಿದ್ದು, ದುಡುಕಿನ ನಿರ್ಧಾರ ಕೈಗೊಳ್ಳಬಾರದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ಬೇಸರಗೊಂಡವರನ್ನು ಕರೆದು ಮಾತನಾಡುತ್ತೇವೆ. ಒಂದೆರಡು ದಿನಗಳಲ್ಲಿ ಎಲ್ಲವೂ ಸರಿಯಾಗಲಿದೆ. ಒಂದಿಬ್ಬರು ಪಕ್ಷ ತೊರೆದರೆ ಯಾವುದೇ ಪರಿಣಾಮ ಬೀರುವುದಿಲ್ಲ**
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

6ನೇ ಪುಟ ನೋಡಿ

ನಿವೃತ್ತಿ ಘೋಷಣೆ



• **ಎಸ್.ಅಂಗಾರ,** ಸಚಿವ
ಅಂಗಾರ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಮೀಸಲು ಕ್ಷೇತ್ರದಿಂದ ಬಿಜೆಪಿಯಿಂದ ಆರು ಬಾರಿ ಶಾಸಕರಾಗಿದ್ದರು. ಈಗ ಬಂದರು ಮತ್ತು ಮೀನುಗಾರಿಕೆ ಸಚಿವರಾಗಿದ್ದಾರೆ.

ಅಸಮಾಧಾನದ ನುಡಿ

‘ಇಷ್ಟು ವರ್ಷ ಪಕ್ಷಕ್ಕಾಗಿ ಮತ್ತು ಸಮಾಜಕ್ಕಾಗಿ ಯಾವುದೇ ಕಪ್ಪು ಚುಕ್ಕಿ ಇಲ್ಲದೇ ಮಾಡಿರುವ ಕೆಲಸವನ್ನು ಗೌರವಿಸುವ ಕ್ರಮ ಇದಲ್ಲ. ಪ್ರಾಮಾಣಿಕ ರಾಜಕಾರಣಕ್ಕೆ ಈಗ ಬೆಲೆ ಇಲ್ಲ. ನನ್ನ ಪ್ರಾಮಾಣಿಕತೆಯೇ ಮುಳುವಾಗಿದೆ. ನಾನು ಇನ್ನು ರಾಜಕಾರಣದಲ್ಲಿ ಇರಲ್ಲ. ಚುನಾವಣಾ ಪ್ರಚಾರವನ್ನೂ ಮಾಡುವುದಿಲ್ಲ. ಹೊಸ ಅಭ್ಯರ್ಥಿ ಮತ್ತು ಅವರ ಗೆಲುವನ್ನು ಪಕ್ಷ ನೋಡಿಕೊಳ್ಳಬಹುದು. ಟಿಕೆಟ್ ಸಿಗದಿರುವ ಬಗ್ಗೆ ಅಸಮಾಧಾನವಿಲ್ಲ’

ರಾಜೀನಾಮೆ ಘೋಷಣೆ: ನಡೆ ಎತ್ತ?

ಲಕ್ಷ್ಮಣ ಸವದಿ	ವಿಧಾನಪರಿಷತ್ ಸದಸ್ಯ	ಕಾಂಗ್ರೆಸ್?
ಆರ್. ಶಂಕರ್	ವಿಧಾನಪರಿಷತ್ ಸದಸ್ಯ	ಪಕ್ಷೇತರರಾಗಿ ಸ್ಪರ್ಧೆ
ಗೂಳಿಹಟ್ಟಿ ಶೇಖರ್	ಶಾಸಕ(ಹೊಸದುರ್ಗ)	ಕಲ್ಯಾಣ ರಾಜ್ಯ ಪ್ರಗತಿ ಪಕ್ಷ?



ಲಕ್ಷ್ಮಣ ಸವದಿ

ಮಾಜಿ ಶಾಸಕರ ನಡೆ ಎತ್ತ?

ಎಸ್. ಐ. ಚಿಕ್ಕನಗೌಡರ	ಕುಂದಗೋಳ	ಪಕ್ಷೇತರರಾಗಿ ಸ್ಪರ್ಧೆ
ದೊಡ್ಡಪ್ಪಗೌಡ ಪಾಟೀಲ ನರಿಬೋಳ	ಜೇವರ್ಗಿ	?
ಸೊಗಡು ಶಿವಣ್ಣ	ತುಮಕೂರು ನಗರ	?
ಎಂ.ಕೆ. ಪಟ್ಟಣಶೆಟ್ಟಿ	ಬಾದಾಮಿ	?
ವಿಶ್ವನಾಥ ಪಾಟೀಲ	ಬೈಲಹೊಂಗಲ	?



ಚಿಕ್ಕನಗೌಡರ

ಮನವೊಲಿಸುವ ಯತ್ನ
• ಹೈಕಮಾಂಡ್ ಬುಲಾವ್ ಜಗದೀಶ ಶೆಟ್ಟರ್
• ರಾಜ್ಯನಾಯಕರಿಂದ ಚರ್ಚೆ ಲಕ್ಷ್ಮಣ ಸವದಿ

ಬೆಂಬಲಿಗರ ರಾಜೀನಾಮೆ
• **ಬೆಳಗಾವಿ:** ಜಿಲ್ಲಾ ಬಿಜೆಪಿ ಪದಾಧಿಕಾರಿಗಳ ರಾಜೀನಾಮೆ
• **ಶಿವಮೊಗ್ಗ:** ಪಾಲಿಕೆಯ 19 ಸದಸ್ಯರ ರಾಜೀನಾಮೆ



ಎಲ್ಲೆಲ್ಲಿ, ಯಾರ ಬೆಂಬಲಿಗರ ಸಿಟ್ಟು?
• **ಹುಬ್ಬಳ್ಳಿ:** ಜಗದೀಶ ಶೆಟ್ಟರ್, ಶಾಸಕ
• **ರಾಮದುರ್ಗ:** ಮಹಾದೇವಪ್ಪ ಯಾದವಾಡ, ಶಾಸಕ
• **ಅಥಣಿ:** ಲಕ್ಷ್ಮಣ ಸವದಿ, ಪರಿಷತ್ ಸದಸ್ಯ
• **ಚಾಮರಾಜನಗರ:** ಬಿಎಸ್‌ವೈ ಆಪ್ತ ರುದ್ರೇಶ್, ಟಿಕೆಟ್ ಆಕಾಂಕ್ಷಿ
• **ಬೈಲಹೊಂಗಲ:** ವಿಶ್ವನಾಥ ಪಾಟೀಲ, ಮಾಜಿ ಶಾಸಕ
• **ಕುಣಿಗಲ್:** ಎಸ್.ಪಿ.ಮುದ್ದಹನುಮೇಗೌಡ, ಮಾಜಿ ಸಂಸದ
• **ಶಹಾಪುರ:** ಗುರುಪಾಟೀಲ ಶಿರವಾಳ; ಮಾಜಿ ಶಾಸಕ

ಚುನಾವಣೆ: ಎಂದು ಏನೇನು?

ದಿನಾಂಕ	ವಿವರ
ಏಪ್ರಿಲ್ 13	ನಾಮಪತ್ರ ಸಲ್ಲಿಕೆ ಆರಂಭ
ಏಪ್ರಿಲ್ 20	ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ
ಏಪ್ರಿಲ್ 24	ನಾಮಪತ್ರ ವಾಪಸ್‌ಗೆ ಕೊನೆಯ ದಿನ
ಮೇ 10	ಮತದಾನ
ಮೇ 13	ಮತ ಎಣಿಕೆ

ಪ್ರಮುಖ ಪಕ್ಷ; ಅಭ್ಯರ್ಥಿ ಘೋಷಿಸಿರುವ ಕ್ಷೇತ್ರ — 212 (ಬಿಜೆಪಿ), 166 (ಕಾಂಗ್ರೆಸ್), 93 (ಜೆಡಿಎಸ್) · 224 ಒಟ್ಟು ಕ್ಷೇತ್ರ



ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಬುಧವಾರ ನಡೆದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ವಾಗತಿಸಿದರು —ಪಿಟಿಐ ಚಿತ್ರ

ಬಿಜೆಪಿ ವಿರುದ್ಧ ‘ಒಗ್ಗಟ್ಟು’ ಮುಂದುವರಿದ ಕಸರತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಹೋರಾಡಲು ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮೂಡಿಸುವ ತನ್ನ ಪ್ರಯತ್ನವನ್ನು ಕಾಂಗ್ರೆಸ್ ಮುಂದುವರಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸದಲ್ಲಿ ಬುಧವಾರ ನಡೆದ ಸಭೆಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ರಾಹುಲ್ ಗಾಂಧಿ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಪಾಲ್ಗೊಂಡು, ಮುಂದಿನ ರಾಜಕೀಯ ನಡೆ ಹಾಗೂ ಕಾರ್ಯತಂತ್ರ ಕುರಿತು ಚರ್ಚಿಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ‘ಈ ಐತಿಹಾಸಿಕ ಸಭೆಯಲ್ಲಿ ಹಲವಾರು ಮಹತ್ವದ ವಿಷಯಗಳ ಕುರಿತು ಚರ್ಚಿಸಲಾಯಿತು. ಎಲ್ಲ ಪಕ್ಷಗಳ ಒಗ್ಗಟ್ಟು ಸಾಧಿಸುವ ಮೂಲಕ ಮುಂಬರುವ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸಲು ನಿರ್ಧರಿಸಲಾಯಿತು. ಈ ಗುರಿ ಸಾಧನೆಗಾಗಿ ಎಲ್ಲ ಪಕ್ಷಗಳು ಶ್ರಮಿಸಲಿವೆ’ ಎಂದರು.

ನಿತೀಶ್‌ಕುಮಾರ್ ಮಾತನಾಡಿ, ‘ಈ ಮೈತ್ರಿಕೂಟದಲ್ಲಿ ಹೆಚ್ಚು ಹೆಚ್ಚು ಪಕ್ಷಗಳನ್ನು ಸೇರ್ಪಡೆಗೊಳಿಸಲು ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಒಗ್ಗಟ್ಟಿನಿಂದ ಬಿಜೆಪಿಯನ್ನು ಎದುರಿಸಬೇಕು ಎಂಬ ಬಗ್ಗೆ ಒಮ್ಮತ ಹೊಂದಿರುವವರೆಲ್ಲ ಒಟ್ಟಿಗೆ ಕುಳಿತು ಮಾತುಕತೆ ನಡೆಸುತ್ತೇವೆ. ಭವಿಷ್ಯದ ಕಾರ್ಯತಂತ್ರದ ಬಗ್ಗೆ ನಿರ್ಧರಿಸುತ್ತೇವೆ’ ಎಂದು ಹೇಳಿದರು.

‘ಒಂದೆಡೆ ಸೇರಿದ ನಂತರ ಎಷ್ಟು ಪಕ್ಷಗಳು ನಮ್ಮೊಂದಿಗೆ ಬರಲಿವೆ ಎಂಬುದು ನಿಮಗೆ ಗೊತ್ತಾಗುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಐತಿಹಾಸಿಕ ಹೆಜ್ಜೆ-ರಾಹುಲ್: ಖರ್ಗೆ ಅವರ ನಿವಾಸದಲ್ಲಿ ನಡೆದ ಕೆಲ ವಿರೋಧ ಪಕ್ಷಗಳ ನಾಯಕರೊಂದಿಗಿನ ಸಭೆಯನ್ನು ರಾಹುಲ್ ‘ಐತಿಹಾಸಿಕ ಹೆಜ್ಜೆ’ ಎಂದು ಬಣ್ಣಿಸಿದರು.

> **ಸಂವಿಧಾನ ಹಾಗೂ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತೇವೆ. ಜನರ ಭಾವನೆಗಳಿಗೆ ನಾವು ದನಿಯಾಗುವ ಮೂಲಕ ದೇಶಕ್ಕೆ ಹೊಸ ದಿಕ್ಕು ನೀಡುತ್ತೇವೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

11ನೇ ಪುಟ ನೋಡಿ

8ಕ್ಕೆ ಇಳಿಸಲು ಶಿಫಾರಸು; 16ಕ್ಕೆ ಹೆಚ್ಚಳ!

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರ ಸಂಖ್ಯೆ ಹೆಚ್ಚಿಸಿದ ರಾಜ್ಯ ಸರ್ಕಾರ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು ಮತ್ತು ಸದಸ್ಯರ ಒಟ್ಟು ಸಂಖ್ಯೆಯನ್ನು ಈಗಿರುವ 14ರಿಂದ 8ಕ್ಕೆ ಇಳಿಸುವಂತೆ ನಿವೃತ್ತ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗ ಶಿಫಾರಸು ಮಾಡಿದ್ದರೆ, ರಾಜ್ಯ ಸರ್ಕಾರ ಈ ಸಂಖ್ಯೆಯನ್ನು ಸದ್ದಿಲ್ಲದೆ 16ಕ್ಕೆ ಏರಿಸಿದೆ!

ಕೆಪಿಎಸ್‌ಸಿ ಒಟ್ಟು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ‘ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) ನಿಯಂತ್ರಣಗಳು–1957’ಕ್ಕೆ ತಿದ್ದುಪಡಿ ಮಾಡಿ ಮಾರ್ಚ್ 15ರಂದು ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಅಷ್ಟೇ ಅಲ್ಲ, ಈ ತಿದ್ದುಪಡಿಯ ಬೆನ್ನಲ್ಲೇ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಶಿಫಾರಸಿನಂತೆ ಮಾರ್ಚ್ 16ರಂದು ಹಾವೇರಿಯ ಶಕುಂತಲಾ ಎಸ್. ದುಂಡಿಗೌಡರ್ ಎಂಬುವರನ್ನು ಅಧಿಕಾರೇತರ ವರ್ಗದಿಂದ ಸದಸ್ಯರನ್ನಾಗಿ ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ.

‘ಶಕುಂತಲಾ ಎಸ್. ದುಂಡಿಗೌಡರ್ ಅವರನ್ನು ಕೆಪಿಎಸ್‌ಸಿ ಸದಸ್ಯರನ್ನಾಗಿ ನೇಮಿಸಲು ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಫೆ. 27ರಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಟಿಪ್ಪಣಿ ಕಳುಹಿಸಿದ್ದರು. ಆದರೆ, ಅಧಿಕಾರೇತರ ಸದಸ್ಯ ಸ್ಥಾನ ಖಾಲಿ ಇಲ್ಲದೇ ಇದ್ದುದರಿಂದ ಅವರ ನೇಮಕಾತಿಗೆ ಅವಕಾಶ ಇರಲಿಲ್ಲ. ಹೀಗಾಗಿ, ತಿದ್ದುಪಡಿ ಮೂಲಕ ಅಧಿಕಾರೇತರ ಸಂಖ್ಯೆಯನ್ನು ಹೆಚ್ಚಿಸಿ ಅವಕಾಶ ಕಲ್ಪಿಸಲಾಗಿದೆ’ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ಸಂವಿಧಾನದ ಪರಿಚ್ಛೇದ 318ರಲ್ಲಿ ಆಯೋಗದ ಸದಸ್ಯರ ಸಂಖ್ಯೆ ಮತ್ತು ಸಿಬ್ಬಂದಿಯ ಸೇವಾ ಷರತ್ತುಗಳನ್ನು ರಾಜ್ಯಪಾಲರು ನಿಯಮಗಳ ಮೂಲಕ ನಿರ್ಧರಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ, ನಿಯಮ 3ರಲ್ಲಿ ಸದಸ್ಯರ ಸಂಖ್ಯೆ 13 ಎಂದಿರುವುದನ್ನು 15 ಎಂದು ತಿದ್ದುಪಡಿ ಮಾಡಲಾಗಿದೆ.

ಎರಡನೇ ಬಾರಿ ತಿದ್ದುಪಡಿ

ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ನೇಮಕಾತಿ ಕುರಿತಂತೆ 1957ರ ಡಿ. 12ರಂದು ಹೊರಡಿಸಿದ್ದ ‘ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) ನಿಯಂತ್ರಣಗಳು– 1957’ ಅಧಿಸೂಚನೆಯ ನಿಯಮ 3ರಲ್ಲಿ ಆಯೋಗದ ಅಧ್ಯಕ್ಷರು ಹಾಗೂ ಇತರ 9 ಸದಸ್ಯರನ್ನು (ಒಟ್ಟು 10 ಒಳಗೊಂಡಿರುತ್ತದೆ ಎಂದು ನಮೂದಿಸಲಾಗಿದೆ. 2014ರ ಜುಲೈ16ರಂದು ಅದನ್ನು ತಿದ್ದುಪಡಿ ಮಾಡಿ ಸದಸ್ಯರ ಸಂಖ್ಯೆಯನ್ನು 13ಕ್ಕೆ (ಅಧ್ಯಕ್ಷರು ಸೇರಿ 14) ಹೆಚ್ಚಿಸಲಾಗಿತ್ತು. ಇದೀಗ ಎರಡನೇ ಬಾರಿ ತಿದ್ದುಪಡಿ ಮಾಡಲಾಗಿದೆ.

5ನೇ ಪುಟ ನೋಡಿ

ಬಿಜೆಪಿ: ಮತ್ತೆ ಆರು ಶಾಸಕರಿಗೆ ಟಿಕೆಟ್ ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭೆ ಚುನಾವಣೆಗೆ ಬಿಜೆಪಿಯು 23 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಪ್ರಕಟಿಸಿದ್ದು, ಮತ್ತೆ ಆರು ಶಾಸಕರಿಗೆ ಟಿಕೆಟ್ ನಿರಾಕರಿಸಿದೆ.

189 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಸೋಮವಾರ ರಾತ್ರಿ ಪ್ರಕಟಿಸಿತ್ತು. ಮೊದಲ ಪಟ್ಟಿಯಲ್ಲಿ ಎಂಟು ಶಾಸಕರಿಗೆ ಸ್ಪರ್ಧೆಯ ಅವಕಾಶ ನಿರಾಕರಿಸಲಾಗಿತ್ತು. ಇದೀಗ ಟಿಕೆಟ್ ಕೈ ತಪ್ಪಿದ ಶಾಸಕರ ಸಂಖ್ಯೆ 14ಕ್ಕೆ ಏರಿದೆ.

2ನೇ ಪುಟ ನೋಡಿ

ಬಟಿಂಡಾ: ರಾಜ್ಯದ ಇಬ್ಬರು ಯೋಧರು ಸೇರಿ ನಾಲ್ವರ ಹತ್ಯೆ

ಬಟಿಂಡಾ/ನವದೆಹಲಿ (ಪಿಟಿಐ): ಪಂಜಾಬ್‌ನ ಬಟಿಂಡಾ ಸೇನಾ ನೆಲೆಯಲ್ಲಿ ಬುಧವಾರ ನಸುಕಿನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಫಿರಂಗಿ ದಳದ ನಾಲ್ವರು ಯೋಧರು ಹತರಾಗಿದ್ದಾರೆ.

ಕರ್ನಾಟಕದ ಸಾಗರ್ ಬಣ್ಣೆ (25), ಸಂತೋಷ್ ಎಂ. ನಾಗರಾಳ್ (25), ತಮಿಳುನಾಡಿನ ಕಮಲೇಶ್ ಆರ್. (24) ಯೋಗೇಶ್ ಕುಮಾರ್ ಜೆ. (24) ಮೃತಪಟ್ಟಿದ್ದಾರೆ.

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ನೋಡಲ್ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮಾರ್ಗಸೂಚಿ ನಿರ್ವಹಣೆ ಹಾಗೂ ಮೇಲುಸ್ತುವಾರಿಗೆ ಆರೋಗ್ಯ ಇಲಾಖೆಯ ಐಡಿಎಸ್‌ಪಿ ಯೋಜನಾ ನಿರ್ದೇಶಕ ಡಾ. ರಮೇಶ್ ಕೌಲ್‌ಗುಡ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ಈ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ.

ಆತ್ಮತೃಷ ತಾಂತ್ರಿಕ–ಸಾಂಸ್ಕೃತಿಕ ಉತ್ಸವದ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್ ವಿಶ್ವ ವಿದ್ಯಾಲಯದ 'ಆತ್ಮತೃಷ ತಾಂತ್ರಿಕ–ಸಾಂಸ್ಕೃತಿಕ ಉತ್ಸವ'ವು ಏ.13ರಂದು ಪಿಇಎಸ್ ವಿ.ವಿ.ಯ ಆರ್.ಆರ್. ಆವರಣದಲ್ಲಿ ನಡೆಯಲಿದೆ.

ಉತ್ಸವವನ್ನು ಪಿಇಎಸ್ ವಿ.ವಿ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ, ಕುಚಿಪುಡಿ ಕಲಾವಿದೆ ವೈಜಯಂತಿ ಕಾಶಿ ಮತ್ತು ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್ ಉದ್ಘಾಟನೆ ಮಾಡಲಿದ್ದಾರೆ.

ಏ.13ರಂದು ವಿ.ವಿಯ ಕನ್ನಡ ಕೂಟವು ಆಯೋಜಿಸಿರುವ ಕನ್ನಡ ಹಬ್ಬ ಮತ್ತು ಅಪ್ಪು ನೆನಪು 2.0 ಕಾರ್ಯಕ್ರಮಗಳು ನಡೆಯಲಿವೆ. ಏಪ್ರಿಲ್ 14ರಂದು 'ಕಾಮಿಡಿ ನೈಟ್' ಕಾರ್ಯಕ್ರಮದಲ್ಲಿ ನಿರೂಪ್ ಮೋಹನ್ ಹಾಗೂ ಸಾಹಿಲ್ ಶಾ ಅವರ ನಗೆ ಚಟಾಕಿ ಹಾರಿಸಲಿದ್ದಾರೆ.

ಏ.15ರಂದು 'ಕಲ್–ನೈಟ್' ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲಿದ್ದಾರೆ. ಏ.16ರಂದು 'ಪ್ರೊ–ನೈಟ್' ಕಾರ್ಯಕ್ರಮದಲ್ಲಿ ಬಾಲಿವುಡ್ ಗಾಯಕಿ ಜಸ್ಲೀನ್ ರಾಯಲ್ ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ಮಹದೇವಪುರ: ಮುಳಬಾಗಿಲು ಶಾಸಕ ಎಚ್‌.ನಾಗೇಶ್ ಸ್ಪರ್ಧೆ; ಬದಲಾದ ತಂತ್ರಗಾರಿಕೆ

ಸ್ಥಳೀಯ ಪ್ರಾತಿನಿಧ್ಯಕ್ಕೆ ಬಿಜೆಪಿ ಚಿಂತನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರ ಮಹದೇವಪುರದಲ್ಲಿ 2008ರಿಂದ ಮೂರು ಬಾರಿ 'ಹ್ಯಾಟ್ರಿಕ್' ಗೆಲುವು ಪಡೆದಿದ್ದ ಬಿಜೆಪಿಯ ಅರವಿಂದ ಲಿಂಬಾವಳಿ ಅವರ ಪ್ರಾತಿನಿಧ್ಯಕ್ಕೆ ವಿರಾಮ ನೀಡಿ, ಸ್ಥಳೀಯರಿಗೆ ಟಿಕೆಟ್ ನೀಡಲು ಬಿಜೆಪಿ ಮುಂದಾಗಿದೆ.

2023ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ತನ್ನ 189 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿದ್ದು, ಅದರಲ್ಲಿ ಮಹದೇವಪುರ ಕ್ಷೇತ್ರದ ಅಭ್ಯರ್ಥಿಯ ಹೆಸರಿಲ್ಲ. ಒಂದು ಕಾಲದಲ್ಲಿ ಬಿಜೆಪಿಯ ಪ್ರಭಾವಿ ನಾಯಕ ಎನಿಸಿಕೊಂಡಿದ್ದ ಲಿಂಬಾವಳಿ ಅವರಿಗೆ ಟಿಕೆಟ್ 'ಕೈ'ತಪ್ಪಿದ್ದಕ್ಕೆ ಕ್ಷೇತ್ರದ ಕಾರ್ಯಕರ್ತರು ತಮ್ಮದೇ ವಿವರಣೆಗಳನ್ನು ಬಿಚ್ಚಿಟ್ಟರು.

ಮೂಲತಃ ಬಾಗಲಕೋಟೆಯ ಲಿಂಬಾವಳಿ ಅವರನ್ನು 2008ರಲ್ಲಿ ಮಹದೇವಪುರ ಕ್ಷೇತ್ರದಿಂದ ಕಣಕ್ಕಿಳಿಸಲಾಗಿತ್ತು. ಮೊದಲ ಪ್ರಯತ್ನದಲ್ಲೇ 13,358 ಮತಗಳ ಅಂತರದಿಂದ ಕಾಂಗ್ರೆಸ್‌ನ ಬಿ.ಶಿವಣ್ಣ ಎದುರು ಗೆಲುವು ಪಡೆದಿದ್ದರು. 2013ರಲ್ಲಿ 10,149 ಮತಗಳ ಅಂತರದಲ್ಲಿ, 2018ರಲ್ಲಿ 17,784 ಮತಗಳ ಅಂತರದಲ್ಲಿ ಕಾಂಗ್ರೆಸ್‌ನ ಎ.ಸಿ.ಶ್ರೀನಿವಾಸ್ ಅವರನ್ನು ಮಣಿಸಿದ್ದರು. ಸತತ ಸೋಲು ಕಂಡಿದ್ದ ಕಾಂಗ್ರೆಸ್ ಈ ಬಾರಿ ಶತಾಯಗತಾಯ ಕ್ಷೇತ್ರವನ್ನು ವಶಕ್ಕೆ ಪಡೆಯಲು ಹಲವು ತಂತ್ರಗಳನ್ನು ಎಣೆದಿದೆ. ಕಾಂಗ್ರೆಸ್ ಆಕಾಂಕ್ಷಿಗಳ ಪಟ್ಟಿಯಲ್ಲಿ 12 ಮಂದಿ ಇದ್ದರೂ, 2018ರಲ್ಲಿ ಮುಳಬಾಗಲು ಕ್ಷೇತ್ರದಿಂದ ಪಕ್ಷೇತರವಾಗಿ ಸ್ಪರ್ಧಿಸಿ ಗೆದಿದ್ದ ಶಾಸಕ ಎಚ್.ನಾಗೇಶ್ ಅವರನ್ನು ಮಹದೇವಪುರ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಸತತ ಮೂರು ಬಾರಿ ಆಯ್ಕೆಯಾಗುವ ಮೂಲಕ ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಗಿಹಿಡಿತ ಸಾಧಿಸಿದ್ದ ಶಾಸಕ ಅರವಿಂದ ಲಿಂಬಾವಳಿ ಸೋಲಿಸಲು ಕಾಂಗ್ರೆಸ್ ನಾಗೇಶ್ ಅವರನ್ನು ಕಣಕ್ಕೆ ಇಳಿಸುತ್ತಿದ್ದಂತೆ ತನ್ನ ತಂತ್ರಗಾರಿಕೆ ಬದಲಿಸಿರುವ ಬಿಜೆಪಿ ಲಿಂಗಾವಳಿ ಬದಲಿಗೆ ಸ್ಥಳೀಯ ನಾಯಕರಿಗೆ ಟಿಕೆಟ್ ನೀಡಲು ಚಿಂತನೆ ನಡೆಸಿದೆ. ಬೋವಿ ಸಮಾಜದ ಲಿಂಬಾವಳಿಗೆ ಮೂರು ಬಾರಿ ಅವಕಾಶ ನೀಡಿರುವ ಕಾರಣ ಈ ಬಾರಿ ದಲಿತ ಸಮುದಾಯದ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಮುಂದಾಗಿದೆ. ಈ ಕುರಿತು ಬುಧವಾರ ಸಚಿವ ಗೋವಿಂದ ಕಾರಜೋಳ ನಿವಾಸದಲ್ಲಿ ಮಹದೇವಪುರ ದಲಿತ ಮುಖಂಡರ ಸಭೆ ನಡೆಸಿ, 'ದಲಿತ ಸಮುದಾಯದವರೇ ಅಭ್ಯರ್ಥಿಯಾಗಲಿದ್ದಾರೆ' ಎಂದು ಸುಳಿವು ನೀಡಿದ್ದಾರೆ.

'ಲಿಂಬಾವಳಿ ಅವರು ಕ್ಷೇತ್ರದ ಮೇಲೆ ಹಿಡಿತ ಹೊಂದಿದ್ದರು. ಮೂರು ಬಾರಿ ಅವರ ಗೆಲುವಿಗೆ ಶ್ರಮಿಸಿದ್ದೆವು. ಈ ಬಾರಿ ದಲಿತ ಸಮುದಾಯದವರಿಗೆ ಟಿಕೆಟ್ ನೀಡುವುದಾಗಿ ಪಕ್ಷದ ವರಿಷ್ಠರು ಮಾಹಿತಿ ನೀಡಿದ್ದಾರೆ. ಯಾರಿಗೆ ಟಿಕೆಟ್ ನೀಡಿದರೂ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತವೆ' ಎಂದು ಬೆಂಗಳೂರು ಕೇಂದ್ರ ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಎಚ್.ವಿ.ಮಂಜುನಾಥ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರ ಯಲಹಂಕಕ್ಕೆ ಹೊಂದಿಕೊಂಡ ಪ್ರದೇಶದಿಂದ ಆರಂಭವಾಗಿ ಸರ್ಜಾಪುರ ರಸ್ತೆ ತನಕ ವಿಸ್ತರಿಸಿಕೊಂಡಿದೆ. ಗರುಡಾಚಾರ್ ಪಾಳ್ಯ, ಹೂಡಿ, ಕಾಡಗೋಡಿ, ವೈಟ್‌ಫೀಲ್ಡ್, ಹಗದೂರು, ದೊಡ್ಡನೆಕ್ಕುಂದಿ, ಮಾರತಹಳ್ಳಿ, ವರ್ತೂರು, ದೊಡ್ಡಕನ್ನಲಿ, ಬೆಳ್ಳಂದೂರು ಸುತ್ತಮುತ್ತಲ ಪ್ರದೇಶವನ್ನು ಒಳಗೊಂಡಿದೆ. ನಗರದ ಹೊರವಲಯದ 11 ಗ್ರಾಮ ಪಂಚಾಯಿತಿಗಳೂ ಈ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲೇ ಅತಿ ಹೆಚ್ಚು ಮತದಾರರನ್ನು ಹೊಂದಿರುವ ಎರಡನೇ ಕ್ಷೇತ್ರ ಇದಾಗಿದ್ದು, 5.72 ಲಕ್ಷ ಮತದಾರರಿದ್ದಾರೆ. ಇದುವರೆಗೂ ಕಾಂಗ್ರೆಸ್ ಮಾತ್ರ ತನ್ನ ಅಭ್ಯರ್ಥಿಯನ್ನು ಅಂತಿಮಗೊಳಿಸಿದ್ದು, ಜೆಡಿಎಸ್ ಸಹ ಅಭ್ಯರ್ಥಿಯ ಆಯ್ಕೆ ಅಂತಿಮಗೊಳಿಸಿಲ್ಲ.



ಕ್ಷೇತ್ರದಲ್ಲಿ ಪಕ್ಷ ಮೂರು ಬಾರಿ ಸತತ ಗೆಲುವು ಪಡೆದಿದೆ. ಈ ಬಾರಿ ದಲಿತ ಸಮುದಾಯದವರಿಗೆ ಟಿಕೆಟ್ ನೀಡುವುದಾಗಿ ವರಿಷ್ಠರು ಹೇಳಿದ್ದಾರೆ

ಎಚ್.ವಿ.ಮಂಜುನಾಥ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ, ಬೆಂಗಳೂರು ಕೇಂದ್ರ ಜಿಲ್ಲೆ.



ಒಳಮೀಸಲಾತಿ ಜಾರಿಗೆ ತರುವ ದಿಟ್ಟ ನಿರ್ಧಾರ ತೆಗೆದುಕೊಂಡ ಬಿಜೆಪಿ, ಈ ಬಾರಿ ಕ್ಷೇತ್ರದಲ್ಲಿ ದಲಿತರಿಗೆ ಅವಕಾಶ ನೀಡುವ ನಿರೀಕ್ಷೆ ಇದೆ.

ಹನುಮಂತು, ಉಪಾಧ್ಯಕ್ಷ, ಮಾದಿಗ ಮಹಾಸಭಾ



ಮುಳಬಾಗಿಲು ಶಾಸಕರಾಗಿ ನಾಗೇಶ್ ಮಾಡಿರುವ ಕೆಲಸಗಳ ಬಗ್ಗೆ ಕ್ಷೇತ್ರ ಜನರಿಗೆ ಅರಿವಿದೆ. ಸ್ಥಳೀಯರಾಗಿರುವ ಅವರಿಗೆ ಜನರಿಗೆ ಸ್ಪಂದಿಸಲಿದ್ದಾರೆ

ಬೆಳತೂರು ರಮೇಶ್, ಕಾಂಗ್ರೆಸ್ ಮುಖಂಡ, ಮಹದೇವಪುರ



ಪ್ರಜಾ ಮತ ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023

ಉಚಿತ ಆರೋಗ್ಯ ತಪಾಸಣೆ 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾರದಾ ಆಯುರ್ವೇದ ಸಂಸ್ಥೆಯು ಏಪ್ರಿಲ್ 15ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಬಸವನಗುಡಿ ಶಂಕರಪುರದ ಶಾರದಾ ಆಯುರ್ವೇದ ಆಸ್ಪತ್ರೆಯಲ್ಲಿ ಬೇಸಿಗೆ ಉಚಿತ ಆರೋಗ್ಯ ಶಿಬಿರ ಆಯೋಜಿಸಿದೆ.

ಜೀರ್ಣಕ್ರಿಯೆಗೆ ಸಂಬಂಧಪಟ್ಟ ರೋಗಗಳು, ಉದರ ಸಂಬಂಧಿ ಅನಾರೋಗ್ಯ ಸಮಸ್ಯೆ, ಸಂಧಿವಾತ ಸೇರಿ ಬೇಸಿಗೆ ಕಾಲದಲ್ಲಿ ಕಂಡು ಬರುವ ಅನಾರೋಗ್ಯ ಸಮಸ್ಯೆಗಳಿಗೆ ಪರಿಣಿತ ವೈದ್ಯರು ಚಿಕಿತ್ಸೆ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. **ಮಾಹಿತಿಗೆ:** 7019320348ಗೆ

ನಗರದಲ್ಲಿ ಇಂದು

ತಿಂಗಳ ಮಾತುಕತೆ: ನವೀನ್ ಸೂರಿಂಜೆ ಅವರ 'ಕುತ್ಲೂರು ಕಥನ': ಕೃತಿಯ ಕಥೆ: ಎಂ.ಡಿ. ಪಲ್ಲವಿ, ಅನುಭವ ಹಂಚಿಕೆ: ವಿಠ್ಠಲ ಮಲೆಕುಡಿಯ, ನವೀನ್ ಸೂರಿಂಜೆ, ಪ್ರತಿಕ್ರಿಯೆ: ನಾಗರಾಜ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಪುಸ್ತಕ ಪ್ರೀತಿ ಮಳಿಗೆ, ನೆಟ್ಟಕಲ್ಲಪ್ಪ ಸರ್ಕಲ್, ಬಸವನಗುಡಿ, ಸಂಜೆ 5

ಬಂಜಗೆರೆ ಜಯಪ್ರಕಾಶ ಅವರ 'ಮಧ್ಯಯುಗೀನ ಭಾರತ ಅಂತ್ಯಜರ ತತ್ತ್ವ ಚಿಂತನೆಗಳು' ಪುಸ್ತಕ ಬಿಡುಗಡೆ: ಬಸವರಾಜ ಕಲ್ಗುಡಿ, ಪ್ರಸ್ತಾವನೆ: ಪಾರ್ವತೀಶ ಬಿಳಿದಾಳೆ, ಅಧ್ಯಕ್ಷತೆ: ಎಚ್. ಮೋಹನ್ ಕುಮಾರ್, ಆಯೋಜನೆ: ಚಾರು ಪ್ರಕಾಶನ, ಸ್ಥಳ: ಸಂಸ ಬಯಲು ಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30ರಿಂದ

'ರಕ್ತದಾನ' ಕುರಿತು ಉಪನ್ಯಾಸ: ಸಿ.ಎಲ್. ಶಿವಮೂರ್ತಿ, ಅತಿಥಿಗಳು: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

'ಪೋಲೀ ಕಿಟ್ಟೀ' ನಾಟಕ ಪ್ರದರ್ಶನ: ರಚನೆ: ಟಿ.ಪಿ. ಕೈಲಾಸಂ, ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಪ್ರಗಲ್ಭ ಆರ್.ಎಸ್. ಮತ್ತು ತಂಡ, ಸಂಗೀತ ಕಛೇರಿ: ಗಾಯನ: ಜಯತೀರ್ಥ ಮೇವುಂಡಿ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಪಾಂಡುರಂಗ್ ಪವಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಪೂಜಾ ವಿ., ಗಾಯನ: ಶ್ರೀಕಾಂತಮ್ ನಾಗೇಂದ್ರ ಶಾಸ್ತ್ರಿ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಆನೂರು ಅನಂತ ಕೃಷ್ಣ ಶರ್ಮಾ, ಘಟ: ವಿದ್ಯಾಶಂಕರ ಬಿ.ಆರ್., ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಶ್ವತ್ಥ ನಾರಾಯಣನ್, ಪಿಟೀಲು: ಬಿ. ಅನಂತಕೃಷ್ಣನ್, ಮೃದಂಗ: ಸುಮೇಶ್ ನಾರಾಯಣನ್, ಖಂಜೀರಾ: ಸುನಾದ್ ಆನೂರು, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಟಿಕೆಟ್ ಕೈ ತಪ್ಪಿದವರು

ಮೂಡಿಗೆರೆ	ಎಂ.ಪಿ. ಕುಮಾರಸ್ವಾಮಿ
ಬೈಂದೂರು	ಸುಕುಮಾರ ಶೆಟ್ಟಿ
ಚನ್ನಗಿರಿ	ಮಾಡಾಳು ವಿರೂಪಾಕ್ಷಪ್ಪ
ಹಾವೇರಿ	ನೆಹರೂ ಓಲೇಕಾರ್
ಮಾಯಕೊಂಡ	ಪ್ರೊ.ಲಿಂಗಣ್ಣ
ಕಲಘಟಗಿ	ಸಿ.ಎಂ. ನಿಂಬಣ್ಣನವರ್

ಒಂದೆರಡು ಕ್ಷೇತ್ರಗಳಲ್ಲಿ ಗೊಂದಲ ಬಿಟ್ಟರೆ, ಉಳಿದ ಕ್ಷೇತ್ರಗಳಲ್ಲಿ ಪಕ್ಷವು ಉತ್ತಮ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದೆ

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ನಾಯಕ

ಬಿಜೆಪಿ 23 ಅಭ್ಯರ್ಥಿಗಳ 2ನೇ ಪಟ್ಟಿ

ಕ್ಷೇತ್ರ	ಅಭ್ಯರ್ಥಿ
ದೇವರ ಹಿಪ್ಪರಗಿ	ಸೋಮನಗೌಡ ಪಾಟೀಲ (ಸಾಸನೂರ)
ಬಸವನಬಾಗೇವಾಡಿ	ಎಸ್.ಕೆ.ಬೆಳ್ಳುಬ್ಬಿ
ಇಂಡಿ	ಕಾಸಗೌಡ ಬಿರಾದಾರ
ಗುರುಮಠಕಲ್	ಲಲಿತಾ ಅನಪುರ
ಬೀದರ್	ಈಶ್ವರ ಸಿಂಗ್ ಠಾಕೂರ್
ಭಾಲ್ಕಿ	ಪ್ರಕಾಶ್ ಖಂಡ್ರೆ
ಗಂಗಾವತಿ	ಪರಣ್ಣ ಮುನವಳ್ಳಿ
ಕಲಘಟಗಿ	ನಾಗರಾಜ್ ಛಬ್ಬಿ
ಹಾನಗಲ್	ಶಿವರಾಜ್ ಸಜ್ಜನರ
ಹಾವೇರಿ (ಎಸ್‌ಸಿ)	ಗವಿಸಿದ್ದಪ್ಪ ದ್ಯಾಮಣ್ಣನವರ
ಹರಪನಹಳ್ಳಿ	ಜಿ. ಕರುಣಾಕರ ರೆಡ್ಡಿ
ದಾವಣಗೆರೆ ಉತ್ತರ	ಲೋಕಿಕೆರೆ ನಾಗರಾಜ
ದಾವಣಗೆರೆ ದಕ್ಷಿಣ	ಅಜಯ್ ಕುಮಾರ್
ಮಾಯಕೊಂಡ (ಎಸ್‌ಸಿ)	ಬಸವರಾಜ ನಾಯಕ
ಚನ್ನಗಿರಿ	ಶಿವಕುಮಾರ್
ಬೈಂದೂರು	ಗುರುರಾಜ್ ಗಂಟಿಹೊಳೆ
ಮೂಡಿಗೆರೆ (ಎಸ್‌ಸಿ)	ದೀಪಕ್ ದೊಡ್ಡಯ್ಯ
ಗುಬ್ಬಿ	ಎಸ್.ಡಿ.ದಿಲೀಪ್ ಕುಮಾರ್
ಶಿಡ್ಲಘಟ್ಟ	ರಾಮಚಂದ್ರಗೌಡ
ಕೆಜಿಎಫ್ (ಎಸ್‌ಸಿ)	ಅಶ್ವಿನಿ ಸಂಪಂಗಿ
ಶ್ರವಣಬೆಳಗೊಳ	ಚಿದಾನಂದ
ಅರಸೀಕೆರೆ	ಜಿ.ವಿ.ಬಸವರಾಜು
ಎಚ್.ಡಿ.ಕೋಟೆ (ಎಸ್‌ಟಿ)	ಕೃಷ್ಣ ನಾಯಕ

ಸುಧಾ ಓದಿರಿ

ಬಿಜೆಪಿ: ಮತ್ತೆ ಆರು ಶಾಸಕರಿಗೆ ಟಿಕೆಟ್ ನಿರಾಕರಣೆ

ಒಂದನೇ ಪುಟದಿಂದ..

ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ, ದಾವಣಗೆರೆ ಶಾಸಕ ಎಸ್.ಎ. ರವೀಂದ್ರನಾಥ್ ಹಾಗೂ ಶಿವಮೊಗ್ಗದ ಶಾಸಕ ಕೆ.ಎಸ್. ಈಶ್ವರಪ್ಪ ಈಗಾಗಲೇ ಪ್ರಕಟಿಸಿದ್ದಾರೆ. ದಾವಣಗೆರೆ ಉತ್ತರದಲ್ಲಿ ಹೊಸ ಮುಖಕ್ಕೆ ಅವಕಾಶ ನೀಡಲಾಗಿದೆ. ಶಿವಮೊಗ್ಗದ ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಅಖೈರುಗೊಳಿಸಿಲ್ಲ. ಬಿ.ಎಸ್. ಯಡಿಯೂರಪ್ಪ ಆಪ್ತವಲಯದಲ್ಲಿ ಈ ಹಿಂದೆ ಗುರುತಿಸಿಕೊಂಡಿದ್ದ ಎನ್.ಆರ್. ಸಂತೋಷ್ ಅವರಿಗೂ ಟಿಕೆಟ್ ಸಿಕ್ಕಿಲ್ಲ. ಅವರು ಅರಸೀಕೆರೆ ಕ್ಷೇತ್ರದ ಆಕಾಂಕ್ಷಿಯಾಗಿದ್ದರು.

ಕಾಂಗ್ರೆಸ್‌ನ ಟಿಕೆಟ್ ಕೈ ತಪ್ಪಿದ ಕಾರಣಕ್ಕೆ ಭಾನುವಾರವಷ್ಟೇ ಬಿಜೆಪಿಗೆ ಸೇರ್ಪಡೆಯಾಗಿರುವ ವಿಧಾನ ಪರಿಷತ್‌ನ ಮಾಜಿ ಸದಸ್ಯ ನಾಗರಾಜ ಛಬ್ಬಿ ಅವರನ್ನು ಕಲಘಟಗಿ ಕ್ಷೇತ್ರದ ಅಭ್ಯರ್ಥಿಯಾಗಿ ಘೋಷಣೆ ಮಾಡಲಾಗಿದೆ. ಪಕ್ಷವು ಈವರೆಗೆ 212 ಕ್ಷೇತ್ರಗಳಿಗೆ ಅಭ್ಯರ್ಥಿಯನ್ನು ಘೋಷಿಸಿದಂತಾಗಿದೆ.

ಅಭ್ಯರ್ಥಿ ಪರ ಕೆಲಸ ಮಾಡಲ್ಲ: ನಾಗರಾಜು



ಎಂ.ವಿ. ನಾಗರಾಜು

ನೆಲಮಂಗಲ: '32 ವರ್ಷಗಳಿಂದ ಬಿಜೆಪಿ ಸಂಘಟನೆ ಮಾಡಿದ್ದೇನೆ. ಹಿಂದಿನಿಂದಲೂ ಬಿಜೆಪಿಗೆ ಕೆಲಸ ಮಾಡಿರುವ ನಾಲ್ವರು ಆಕಾಂಕ್ಷಿಗಳಿದ್ದರೂ ನೆಲಮಂಗಲ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಬಂದಂತಹ ಸಪ್ತಗಿರಿ ಶಂಕರ್‌ನಾಯಕ್ ಅವರಿಗೆ ಟಿಕೆಟ್ ಘೋಷಣೆ ಮಾಡಿದ್ದು, ಚುನಾವಣೆಯಲ್ಲಿ ಅವರ ಸೋಲು ಖಚಿತ' ಎಂದು ಟಿಕೆಟ್ ಆಕಾಂಕ್ಷಿ ಮಾಜಿ ಶಾಸಕ ಎಂ.ವಿ.ನಾಗರಾಜು ಆಕ್ರೋಶ ವ್ಯಕ್ತಪಡಿಸಿದರು.

'ನಾವು ಬಿಜೆಪಿಗೆ ನಿಷ್ಠರಾಗಿರುತ್ತೇವೆ. ಆದರೆ ಸಪ್ತಗಿರಿ ಅವರ ಪರವಾಗಿ ಕೆಲಸ ಮಾಡುವುದಿಲ್ಲ' ಎಂದು ಹೇಳಿದರು. 'ನಮ್ಮವರೇ ಆದ ರಾಷ್ಟ್ರೀಯ ಪರಿಷತ್ ಸದಸ್ಯ ದೊಡ್ಡಬೆಲೆ ಸುಬ್ಬಣ್ಣ ಹಾಗೂ ಸಂಘಟನಾ ಕಾರ್ಯದರ್ಶಿ ಕಾಂತರಾಜು ಅವರು ಹೈಕಮಾಂಡ್ ದಾರಿ ತಪ್ಪಿಸಿದ್ದಾರೆ' ಎಂದು ದೂರಿದರು.

'ಚುನಾವಣೆಗಳು ಜಾತಿ ಆಧಾರದಲ್ಲಿ ನಡೆಯುತ್ತವೆ. ಸಪ್ತಗಿರಿ ಶಂಕರ್‌ನಾಯಕ್ ಅವರ ಲಂಬಾಣಿ ಸಮುದಾಯದವರು. ಇಲ್ಲಿ ಕೇವಲ 1200 ಮತಗಳಿವೆ. ನನ್ನ ಭೋವಿ ಸಮುದಾಯದ 18 ಸಾವಿರ ಮತಗಳಿವೆ. ಮತ್ತೊಬ್ಬ ಆಕಾಂಕ್ಷಿ ಬಿ.ಹೊಂಬಯ್ಯ ಅವರ ಬಲಗೈ ಸಮುದಾಯ ಸುಮಾರು 35ಸಾವಿರ ಮತಗಳಿವೆ. ವಕೀಲ ದೊಡ್ಡೇರಿ ವೆಂಕಟೇಶ್, ಎಂ.ಎನ್.ರಾಮು ಆಕಾಂಕ್ಷಿಗಳಾಗಿದ್ದರು. ನಮ್ಮಲ್ಲಿ ಯಾರಿಗೇ ಕೊಟ್ಟಿದ್ದರೂ ಬೇಸರವಾಗುತ್ತಿರಲಿಲ್ಲ. ಯಾವ ಮಾನದಂಡದ ಆಧಾರದ ಮೇಲೆ ಸಪ್ತಗಿರಿ ಅವರಿಗೆ ಟಿಕೆಟ್ ಕೊಟ್ಟಿದ್ದಾರೋ ಗೊತ್ತಿಲ್ಲ. ಹೀಗಾಗಿ, ನಾವು ಯಾರೂ ಅವರನ್ನು ಬೆಂಬಲಿಸುವುದಿಲ್ಲ' ಎಂದರು.

'ಕಾಂಗ್ರೆಸ್ ಗೆಲುವು ಸುಲಭವಾಗಲಿ ಎಂದು ಬಿಜೆಪಿಗೆ ಇತ್ತೀಚೆಗೆ ಸೇರಿರುವ ಸಪ್ತಗಿರಿ ಶಂಕರ್‌ನಾಯಕ್ ಅವರಿಗೆ ಟಿಕೆಟ್ ಕೊಡಿಸಲಾಗಿದೆ. ಮತ್ತೊಮ್ಮೆ ಹೈಕಮಾಂಡ್ ಜೊತೆಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು. ಗುರುವಾರ ಬೆಳಿಗ್ಗೆ ಬಸವಣ್ಣದೇವರ ಮಠದಲ್ಲಿ ನಿಷ್ಠಾವಂತ ಕಾರ್ಯಕರ್ತರ ಸಭೆ ಕರೆದಿದ್ದು, ನಾವು ನಾಲ್ಕು ಜನರಲ್ಲೆ ಒಬ್ಬರು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು ಬಿಜೆಪಿಯಲ್ಲೆ ಇರುತ್ತೇವೆ' ಎಂದರು.

ಟಿಕೆಟ್ ವಂಚಿತರಿಂದ ಬೆಂಬಲಿಗರ ಸಭೆ; ಒಂದೆರಡು ದಿನ ಕಾದುನೋಡಲು ನಿರ್ಧಾರ

ಬಿಜೆಪಿ ಮುಖಂಡರಲ್ಲಿ ಅಸಮಾಧಾನದ ಬುಗ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದ ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳು, ಮುಖಂಡರು ಅಸಮಾಧಾನಗೊಂಡಿದ್ದು, ಎರಡು ದಿನಗಳಲ್ಲಿ ಮುಂದಿನ ಹೆಜ್ಜೆಯ ರೂಪುರೇಷೆ ತಿಳಿಸಲು ನಿರ್ಧರಿಸಿದ್ದಾರೆ.

ಪದ್ಮನಾಭನಗರ, ಬ್ಯಾಟರಾಯನಪುರ, ಬಸವನಗುಡಿ ವಿಧಾನಸಭೆ ಕ್ಷೇತ್ರಗಳಲ್ಲಿ ಅಸಮಾಧಾನ ಹೊರಬಿದ್ದಿದ್ದು, ಕೆಲವೆಡೆ ಪ್ರತಿಭಟನೆ, ಟೈಯರ್‌ಗೆ ಬೆಂಕಿ ಹಾಕಿರುವ ಘಟನೆಗಳೂ ನಡೆದಿವೆ. ಇನ್ನು ಕೆಲವು ಮುಖಂಡರ ಜೊತೆಗೆ ಪಕ್ಷದ ವರಿಷ್ಠ ಮಾತನಾಡಿ ದುಡುಕದಂತೆ ಮನವಿ ಮಾಡಿದ್ದಾರೆ. ಟಿಕೆಟ್ ವಂಚಿತರಲ್ಲಿ ಹಲವರು ತಮ್ಮ ಬೆಂಬಲಿಗರ ಜೊತೆ ಮಾತುಕತೆ ನಡೆದಿದ್ದು, ನಿರ್ಧಾರ ಪ್ರಕಟಿಸುವುದನ್ನು ಮುಂದೂಡಿದ್ದಾರೆ.

ಬೆಂಗಳೂರು ದಕ್ಷಿಣ ಬಿಜೆಪಿ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ಅಕ್ರಮಗಳನ್ನು ಹೊರಹಾಕುವಲ್ಲಿ ಹೆಚ್ಚು ಗಮನಸೆಳೆದಿದ್ದರು. ಮಾಜಿ ಕಾರ್ಪೊರೇಟರ್ ಕೂಡ ಆಗಿದ್ದ ಇವರಿಗೆ ಈ ಬಾರಿ ಜಯನಗರ, ಚಿಕ್ಕಪೇಟೆ ಅಥವಾ ಪದ್ಮನಾಭನಗರದಲ್ಲಿ ಟಿಕೆಟ್ ಸಿಗುವ ಖಾತರಿ ಇತ್ತು. ಬುಧವಾರ ರಾತ್ರಿ ಪಟ್ಟಿ ಪ್ರಕಟವಾದಾಗ ಯಾವ ಕ್ಷೇತ್ರವನ್ನೂ ನೀಡಿಲ್ಲ. ಇದರಿಂದ ಹತಾಶಗೊಂಡ ಬೆಂಬಲಿಗರು ರಾತ್ರಿಯೇ ಪ್ರತಿಭಟನೆ ಮಾಡಿದ್ದರು. ಆರ್. ಅಶೋಕ ಹಾಗೂ ಬಿ.ವೈ. ವಿಜಯೇಂದ್ರ ವಿರುದ್ಧ ಕಿಡಿ ಕಾರಿದ್ದರು.

ಎನ್.ಆರ್. ರಮೇಶ್ ಗುರುವಾರ ಪತ್ರಿಕಾ ಗೋಷ್ಠಿ ನಡೆಸಿ, 'ಮುಖ್ಯಮಂತ್ರಿ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ದುಡುಕಿ ನಿರ್ಧಾರ ಕೈಗೊಳ್ಳದಂತೆ ಹೇಳಿದ್ದಾರೆ. ಒಂದು ದಿನ ಕಾಯುವಂತೆ ಹೇಳಿದ್ದು, ಅದನ್ನು ಒಪ್ಪಿದ್ದೇನೆ. ಶುಕ್ರವಾರ ಮಧ್ಯಾಹ್ನದ ವೇಳೆಗೆ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ತಿಳಿಸಿದ್ದಾರೆ.

ಪಕ್ಷ ಸೂಕ್ತ ಸ್ಥಾನಮಾನ ನೀಡದಿದ್ದರೆ ಎನ್.ಆರ್. ರಮೇಶ್ ಅವರು ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಬಂಡಾಯ ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಾರೆ ಎಂದು ಬೆಂಬಲಿಗರು ಹೇಳಿದರು.

ಬ್ಯಾಟರಾಯನಪುರ ಕ್ಷೇತ್ರದಲ್ಲಿ ಹೊರಗಿನವರಾದ ತಮ್ಮೇಶ್ ಗೌಡ ಅಭ್ಯರ್ಥಿಯಾಗಿರುವುದು ಸ್ಥಳೀಯರಿಗೆ ಅಸಮಾಧಾನ ತರಿಸಿದೆ. ಟಿಕೆಟ್ ವಂಚಿತರಾಗಿರುವ ಕಳೆದ ಮೂರು ಬಾರಿ ಸ್ಪರ್ಧಿಸಿದ್ದ ಎ. ರವಿ, ಮಾಜಿ ಕಾರ್ಪೊರೇಟರ್ ಮುನೀಂದ್ರ ಕುಮಾರ್, ಸ್ಥಳೀಯ ಮುಖಂಡ ಚಕ್ರಪಾಣಿ ಬೆಂಬಲಿಗರ ಸಭೆ ನಡೆಸಿ, ಮುಂದಿನ ನಿರ್ಧಾರವನ್ನು ಕಾಯ್ದಿರಿಸಿದ್ದಾರೆ. ರವಿ ಬೆಂಬಲಿಗರ ಸಭೆಯಲ್ಲಿ ಕಣ್ಣೀರು ಹಾಕಿದರು. ಇನ್ನು, ತಮ್ಮೇಶ್ ಗೌಡ ತಮಗೆ ಟಿಕೆಟ್ ಲಭಿಸಿದ್ದಕ್ಕೆ ಬೆಂಬಲಿಗರೊಂದಿಗೆ ಬಂದು ವರಿಷ್ಠ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿನಂದಿಸಿದರು.



ಎ. ರವಿ



ಕೆ.ಎ. ಮುನೀಂದ್ರ ಕುಮಾರ್



ಕೆ.ಎನ್. ಚಕ್ರಪಾಣಿ

ಜೆಡಿಎಸ್‌ನಿಂದ ಬಿಜೆಪಿಗೆ ಬಂದು ಕಳೆದ ಎರಡು ಚುನಾವಣೆಯಲ್ಲಿ ಯಾವುದೇ ನಿರೀಕ್ಷೆ ಇಲ್ಲದೆ ಪಕ್ಷದ ಕೆಲಸ ಮಾಡಿದ್ದ ಚಕ್ರಪಾಣಿ ಅವರು, ಈ ಬಾರಿ ಪ್ರಬಲ ಆಕಾಂಕ್ಷಿಯಾಗಿದ್ದರು. ಸ್ಥಳೀಯರಾಗಿರುವ ಜೊತೆಗೆ ಕ್ಷೇತ್ರ ಪುನರ್‌ವಿಂಗಡಣೆಯಲ್ಲೂ ಅವರ ಪಾತ್ರವಿತ್ತು. ಪಕ್ಷದಲ್ಲಿ ಯಾವುದೇ ಪದಾಧಿಕಾರಿ ಸ್ಥಾನವನ್ನೂ ಅವರಿಗೆ ನೀಡಿರಲಿಲ್ಲ. ಜೊತೆಗೆ ಈ ಕ್ಷೇತ್ರದಲ್ಲಿ ಅವರಿಗೆ ಟಿಕೆಟ್ ಕೂಡ ಸಿಕ್ಕಿಲ್ಲ. ಹೀಗಾಗಿ ಅಸಮಾಧಾನ ಹೆಚ್ಚಾಗಿದೆ.

ಕಾಂಗ್ರೆಸ್ ಸೇರ್ಪಡೆ: ರಾಜಾಜಿನಗರ ಕ್ಷೇತ್ರದ ಬಿಜೆಪಿಯ ಮಾಜಿ ಕಾರ್ಪೊರೇಟರ್ ಪದ್ಮರಾಜ್, ಉಮೇಶ್ ಸೇರಿದಂತೆ ಸುಮಾರು 450 ನಾಯಕರು ಗುರುವಾರ ಕಾಂಗ್ರೆಸ್ ಸೇರಿಕೊಂಡರು.




ಬಿಜೆಪಿ ಟಿಕೆಟ್ ತಪ್ಪಿದರಿಂದ ರಮೇಶ್ ಎನ್‌ಆರ್‌ ಅಭಿಮಾನಿಗಳು ಬನಶಂಕರಿಯಲ್ಲಿರುವ ರಮೇಶ್ ನಿವಾಸದ ಮುಂದೆ ಪಕ್ಷದ ವಿರುದ್ಧ ಘೋಷಣೆ ಕೂಗಿದರು —ಪ್ರಜಾವಾಣಿ ಚಿತ್ರ

ಬೆಂಬಲಿಗರ ಸಭೆ

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಹೊರ ಬೀಳುತ್ತಿದ್ದಂತೆಯೇ ಟಿಕೆಟ್ ವಂಚಿತರ ಅಸಮಾಧಾನದ ಬುಗ್ಗೆ ಹೊರಹೊಮ್ಮಲಾರಂಭಿಸಿದೆ. ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳೇ ಅಧಿಕ ಆಕಾಂಕ್ಷಿಗಳಾಗಿದ್ದರು. ಅದರಲ್ಲೂ ಹಾಲಿ ಬಿಜೆಪಿ ಶಾಸಕರಿಲ್ಲದ ಕಡೆ ಹೆಚ್ಚಿದ್ದರು. ಬುಧವಾರ ಬೆಳಿಗ್ಗೆಯಿಂದಲೇ ಬೆಂಬಲಿಗರ ಜೊತೆಗೆ ಸಾಲುಸಾಲು ಸಭೆಗಳನ್ನು ನಡೆಸಿದ ಮುಖಂಡರು, ಮುಂದಿನ ನಿರ್ಧಾರ ಬಗ್ಗೆ ಚರ್ಚಿಸಿದರು. ಪಕ್ಷದ ವರಿಷ್ಠರಿಂದ ಸಂದೇಶ, ಸೂಚನೆ ಬರಬಹುದು.

ಒಂದೆರಡೆರಡು ದಿನ ಕಾಯಲು ಹಲವು ನಿರ್ಧರಿಸಿದ್ದಾರೆ. ಎಲ್ಲರೊಂದಿಗೆ ಮಾತನಾಡಿ ಬಂಡಾಯ, ಅಸಮಾಧಾನ ಬಗೆಹರಿಸುವುದು ಪಕ್ಷದ ವರಿಷ್ಠರಿಗೆ ಸವಾಲಾಗಿದೆ.

ಬಸವನಗುಡಿಯಲ್ಲಿ ಬಂಡಾಯ



ಕಟ್ಟೆ ಸತ್ಯ ನಾರಾಯಣ

ಬಸವನಗುಡಿ ವಿಧಾನಸಭೆ ಕ್ಷೇತ್ರದಲ್ಲಿ ಮಾಜಿ ಮೇಯರ್ ಕಟ್ಟೆ ಸತ್ಯ ನಾರಾಯಣ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವು ದಾಗಿ ಹೇಳಿದ್ದಾರೆ. ಐದು ಬಾರಿ ಕಾರ್ಪೊರೇಟರ್ ಆಗಿದ್ದ ಸತ್ಯ, ಮೇಯರ್ ಕೂಡ ಆಗಿದ್ದರು. ಹಿಂದಿನ ಚುನಾವಣೆಯಲ್ಲೇ ಅವರಿಗೆ ಟಿಕೆಟ್ ನೀಡುವುದಾಗಿ ಹೇಳಲಾಗಿತ್ತು. ಆದರೆ ಅದೂ ಆಗದೆ, ಅವರ ವಾರ್ಡ್ ಅನ್ನೂ ಮಹಿಳಾ ಮೀಸಲು ಮಾಡಲಾಗಿದೆ. ಹೀಗಾಗಿ ಪಕ್ಷ ಹಾಗೂ ಶಾಸಕ ರವಿಸುಬ್ರಮಣ್ಯ ಅವರ ಮೇಲೆ ಸತ್ಯ ಅಸಮಾಧಾನಗೊಂಡಿದ್ದಾರೆ.

'ದಶಕಗಳಿಂದ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿದಿದ್ದೇವೆ. ಆದರೆ, ಪಕ್ಷ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. ಇನ್ನು ಮುಂದೆಯೂ ನಿರೀಕ್ಷೆ ಮಾಡದಂತಾಗಿದೆ. ಹೀಗಾಗಿ ಬಂಡಾಯ ಅಥವಾ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆ' ಎಂದು ಸತ್ಯನಾರಾಯಣ ತಿಳಿಸಿದರು.

1,250 ಕಾರ್ಯಕರ್ತರ ರಾಜೀನಾಮೆ



ರಮೇಶ್ ಎನ್‌ ಆರ್‌

ಎನ್.ಆರ್. ರಮೇಶ್ ಅವರಿಗೆ ಬಿಜೆಪಿ ಟಿಕೆಟ್ ನೀಡದಿರುವುದನ್ನು ವಿರೋಧಿಸಿ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಯಡಿಯೂರು ವಾರ್ಡ್, ಕರೇಸಂದ್ರ ವಾರ್ಡ್ ಮತ್ತು ಗಣೇಶಮಂದಿರ ವಾರ್ಡಿನ 1,250ಕ್ಕೂ ಹೆಚ್ಚು ಮಂದಿ ಪಕ್ಷದ ಪ್ರಾಥಮಿಕ ಸದಸ್ಯತ್ವ ಸ್ಥಾನಕ್ಕೆ ಸಾಮೂಹಿಕ ರಾಜೀನಾಮೆ ನೀಡಿದ್ದೇವೆ. ಪತ್ರವನ್ನು ರಾಜ್ಯ ಘಟಕದ ಅಧ್ಯಕ್ಷರಿಗೆ ಕಳುಹಿಸಿದ್ದೇವೆ ಎಂದು ಯಡಿಯೂರು ವಾರ್ಡ್ ಬಿಜೆಪಿ ಘಟಕ ಅಧ್ಯಕ್ಷ ಎಸ್. ಜಿ. ಮಂಜೇಗೌಡ ತಿಳಿಸಿದರು.

ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಸ್ಥಳೀಯವಾಗಿ ಕೆಲಸ ಮಾಡುತ್ತಿದ್ದ ಬಿಜೆಪಿ ಕಾರ್ಯಕರ್ತ ಸುನೀಲ್ ವೆಂಕಟೇಶ್ ಮತ್ತು ಸೈಲೆಂಟ್ ಸುನಿಲ್ ಅವರಿಗೆ ಟಿಕೆಟ್ ಕೈತಪ್ಪಿದ್ದಕ್ಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಶೋಕ ಸೋಲುತ್ತಾರೆ: ಡಿಕೆಶಿ

'ಅಶೋಕ ವಿರುದ್ಧ ಅನೇಕ ಅಸಮಾಧಾನಗಳಿವೆ. ಹೀಗಾಗಿ ಪದ್ಮನಾಭನಗರದಲ್ಲಿ ಅಶೋಕ ಸೋಲನುಭವಿಸಿ, ನಮ್ಮ ಅಭ್ಯರ್ಥಿ ರಘುನಾಥ ನಾಯ್ಡು ಗೆಲುವು ದಾಖಲಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಪದ್ಮನಾಭನಗರದಲ್ಲಿ ಅಶೋಕ್ ವಿರುದ್ಧ ದುರ್ಬಲ ಅಭ್ಯರ್ಥಿ ಕಣಕ್ಕಿಳಿಸಿದ್ದು, ಒಪ್ಪಂದ ಮಾಡಿಕೊಳ್ಳಲಾಗಿದೆಯಾ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಯಾರ ಜತೆಗೂ ಒಪ್ಪಂದ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಕಳೆದ ಬಾರಿ ಚುನಾವಣೆಯಲ್ಲಿ ಜೆಡಿಎಸ್‌ನಿಂದ ನಾಯ್ಡು ಸಮುದಾಯದವರನ್ನು ಹಾಕಿದ್ದರು. ನಾವು ಒಕ್ಕಲಿಗ ಸಮುದಾಯದವರನ್ನು ಕಣಕ್ಕಿಳಿಸಿದ್ದೆವು. ಆದರೆ ನಮ್ಮ ತಂತ್ರ ಫಲ ನೀಡಲಿಲ್ಲ. ನಾಯ್ಡು ಸಮುದಾಯದ ಅಭ್ಯರ್ಥಿ ಎರಡನೇ ಸ್ಥಾನ ಪಡೆದು ನಮ್ಮ ಅಭ್ಯರ್ಥಿ ಮೂರನೇ ಸ್ಥಾನ ಪಡೆದಿದ್ದರು' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಅತಿ ಹೆಚ್ಚು ನಾಯ್ಡು ಸಮುದಾಯದ ಜನರು ಇರುವುದು ಪದ್ಮನಾಭನಗರದಲ್ಲಿ. ಪಕ್ಷದ ಅಭ್ಯರ್ಥಿಯಾಗಿರುವ ರಘುನಾಥ ನಾಯ್ಡು ಪಕ್ಷದ ಪ್ರಮುಖ ಕಾರ್ಯಕರ್ತ. ಯಾರೂ ಇಲ್ಲದ ಸಂದರ್ಭದಲ್ಲೂ ಆತ ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದ್ದಾರೆ. ಈ ಕ್ಷೇತ್ರದಲ್ಲಿ ಕನಕಪುರದಿಂದ ಬಂದು ನೆಲೆಸಿರುವ ಮತದಾರರೂ ಇದ್ದಾರೆ. ಅಲ್ಪಸಂಖ್ಯಾತರು ಇದ್ದಾರೆ' ಎಂದು ತಿಳಿಸಿದರು.

ಪದ್ಮನಾಭನಗರದಲ್ಲಿ ಬೇರೆ ಅಭ್ಯರ್ಥಿ ಹಾಕುತ್ತೀರಾ, ಸುರೇಶ್ ಅವರನ್ನು ಕಣಕ್ಕಿಳಿಸುತ್ತೀರಾ ಎಂದು ಕೇಳಿದ ಪ್ರಶ್ನೆಗೆ, 'ಸುರೇಶ್ ಅವರಿಗೆ ಟಿಕೆಟ್ ನೀಡಬೇಕು ಎಂಬ ಒತ್ತಡ ಇದೆ. ಆದರೆ ಪಕ್ಷ ಈಗಾಗಲೇ ರಘುನಾಥ ನಾಯ್ಡು ಅವರಿಗೆ ಟಿಕೆಟ್ ನೀಡಿದ್ದು, ಅವರೇ ಸ್ಪರ್ಧಿಸುತ್ತಾರೆ' ಎಂದು ತಿಳಿಸಿದ್ದಾರೆ.



ತಾವರೆಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣ್ಣಸಿದ್ದಯ್ಯ, ಕಾಂಗ್ರೆಸ್ ಮುಖಂಡರಾದ ವೆಂಕಟೇಗೌಡ, ರಂಗಸ್ವಾಮಯ್ಯ ಮತ್ತಿತರರನ್ನು ಬಿಜೆಪಿಗೆ ಎಸ್‌.ಟಿ.ಸೋಮಶೇಖರ್ ಸೇರ್ಪಡೆ ಮಾಡಿಕೊಂಡರು.

ಪಕ್ಷಕ್ಕೆ ನಿಷ್ಠೆಯಿಂದ ದುಡಿಯಿರಿ: ಸೋಮಶೇಖರ್

ರಾಜರಾಜೇಶ್ವರಿನಗರ: 'ಚುನಾವಣೆ ಸಂದರ್ಭದಲ್ಲಿ ಕೆಲ ಮುಖಂಡರು ಮೈಮೇಲೆ ದೆವ್ವ ಬಂದಂತೆ ವರ್ತಿಸುತ್ತಾರೆ. ಈ ರೀತಿ ನಡೆದುಕೊಳ್ಳುವುದನ್ನು ಬಿಟ್ಟು, ಪಕ್ಷಕ್ಕಾಗಿ ದುಡಿಯಬೇಕು' ಎಂದು ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆಗಿರುವ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ತಾವರೆಕೆರೆ ಹೋಬಳಿಯ ಬ್ಯಾಲಾಳುನಲ್ಲಿ ತಾವರೆಕೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣ್ಣಸಿದ್ದಯ್ಯ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ವೆಂಕಟಮ್ಮ ರೇವಣ್ಣಸಿದ್ದಯ್ಯ, ಗ್ರಾಮ ಪಂಚಾಯಿತಿ ಸದಸ್ಯರಾದ ರಂಗಸ್ವಾಮಯ್ಯ, ಅನಿತಾ ವೆಂಕಟೇಗೌಡ ಸೇರಿದಂತೆ ಹಲವು ಮುಖಂಡರನ್ನು ಬಿಜೆಪಿಗೆ ಬರಮಾಡಿಕೊಂಡು ಮಾತನಾಡಿದರು.

'ಕೆಲವರು ನಾನು ಬಿಜೆಪಿ ಬಿಟ್ಟು, ಕಾಂಗ್ರೆಸ್ ಸೇರುತ್ತೇನೆ ಅಂದುಕೊಂಡಿದ್ದರು. ಒಬ್ಬ ವ್ಯಕ್ತಿ ಪದೇ ಪದೇ ಪಕ್ಷ ಬಿಡುವುದು ಸರಿ ಅಲ್ಲ. ನಾನು ಪಕ್ಷಕ್ಕೆ ನಿಷ್ಠೆಯಿಂದ ಇರುತ್ತೇನೆ. ಕಾಂಗ್ರೆಸ್‌ನಲ್ಲಿದ್ದಾಗ ಮನಮೋಹನ್ ಸಿಂಗ್, ಈಗ ಬಿಜೆಪಿಯಲ್ಲಿ ನರೇಂದ್ರ ಮೋದಿ ಅವರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದೇನೆ. ಇದರಿಂದ ಯಶಸ್ವಿ ನಾಯಕನಾಗಲು ಸಾಧ್ಯವಾಯಿತು. ಅಭಿವೃದ್ಧಿ ಕಾರ್ಯಕ್ರಮಗಳು ನನ್ನ ಕೈಹಿಡಿಯಲಿವೆ' ಎಂದು ವಿಶ್ವಾಸ ವ್ಯಕ್ತಪಡಿಸದರು.

'ಪ್ರಣಾಳಿಕೆ ಶೇ 80ರಷ್ಟು ಪೂರ್ಣ'

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ವಿಧಾನಸಭೆ ಚುನಾವಣೆ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದರೆ, ಭ್ರಷ್ಟಾಚಾರರಹಿತ ಉತ್ತಮ ಆಡಳಿತ. ಜೊತೆಗೆ, ರಾಜ್ಯವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿಸುವುದು ನಮ್ಮ ಭರವಸೆ' ಎಂದು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಹೇಳಿದರು.

ಪ್ರಣಾಳಿಕೆ ಸಿದ್ಧಪಡಿಸಲು ರೂಪಿಸಿದ ವಾರ್ ರೂಂನಲ್ಲಿ ಸಮಿತಿಯ ಸಹ ಅಧ್ಯಕ್ಷರಾದ ಕೆ.ಇ. ರಾಧಾಕೃಷ್ಣ ಮತ್ತು ಮಧು ಬಂಗಾರಪ್ಪ ಜೊತೆ, 'ನಮ್ಮ ನಿಮ್ಮ ಕಾಂಗ್ರೆಸ್ ಪ್ರಣಾಳಿಕೆ' ಎಂಬ ಟೀಸರ್ ಬಿಡುಗಡೆ ಮಾಡಿ ಮಾತನಾಡಿದರು.

'ನಾಲ್ಕು ತಿಂಗಳಿನಿಂದ ತಯಾರಿ ನಡೆಯುತ್ತಿದೆ. ಶೇ 80ರಷ್ಟು ಪ್ರಕ್ರಿಯೆ ಮುಗಿದಿದೆ. ಶೀಘ್ರವೇ ಪಕ್ಷದ ನಾಯಕರು ಬಿಡುಗಡೆ ಮಾಡಲಿದ್ದಾರೆ' ಎಂದರು.

'ಜನ ಸಮುದಾಯದ ನಡುವೆ ತೆರಳಿ ಜ್ವಲಂತ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ಪಡೆದಿದ್ದೇವೆ. ಸರ್ಕಾರಿ ನೌಕರರ ಸಂಘಟನೆ, ಉದ್ಯಮಿಗಳು, ಮೀನುಗಾರರು, ಮಹಿಳೆಯರು, ಚಾಲಕರು, ಲಕ್ಷಾಂತರ ಜನರನ್ನು ಪ್ರತಿನಿಧಿಸುವ ಸಂಘ, ಸಂಸ್ಥೆಗಳ ಪ್ರಮುಖರ ಜೊತೆ ಚರ್ಚಿಸಿದ್ದೇವೆ. ಜನ ಪರವಾದ ಒಳ್ಳೆಯ ಆಡಳಿತ ನೀಡಬೇಕು ಎನ್ನುವುದು ಉದ್ದೇಶ' ಎಂದರು.

'ಪ್ರಣಾಳಿಕೆಯಲ್ಲಿ ಕೃಷಿ ಕ್ಷೇತ್ರವನ್ನು ಆದ್ಯತೆ ಮೇಲೆ ತೆಗೆದುಕೊಂಡಿದ್ದು, ಅಲ್ಲಿನ ಜ್ವಲಂತ ಸಮಸ್ಯೆಗೂ ಪರಿಹಾರ ವಿದೆ' ಎಂದರು.

'ಮೀಸಲು ನೀತಿ ಪರಿಷ್ಕರಣೆ ಕುರಿತ ಅಂಶವೂ ಪ್ರಣಾಳಿಕೆಯಲ್ಲಿ ಇರಲಿದೆ. ಮುಸ್ಲಿಂ ಸಮುದಾಯದ ಮೀಸಲು ತೆಗೆದು ಹಾಕಿರುವ ಬಗ್ಗೆಯೂ ನಾವು ಚರ್ಚಿಸಿದ್ದೇವೆ. ಸಂವಿಧಾನದ ಚೌಕಟ್ಟಿನೊಳಗೆ ಸಾಧ್ಯವಾಗುವುದನ್ನು ಮಾಡುತ್ತೇವೆ. ಮೀಸಲಾತಿ ಹೆಚ್ಚಿಸಿ ತಮಿಳುನಾಡಿನಲ್ಲಿ ತೆಗೆದುಕೊಂಡ ತೀರ್ಮಾನ ಸಂವಿಧಾನದ ಒಂಬತ್ತನೇ ಶೆಡ್ಯೂಲ್‌ನ ಅಡಿ ಬರಬಹುದಾದರೆ, ನಮ್ಮ ರಾಜ್ಯದಲ್ಲಿ ತೆಗೆದುಕೊಂಡ ತೀರ್ಮಾನ ಏಕೆ ಬರಬಾರದು' ಎನ್ನುವ ಮೂಲಕ ಮೀಸಲಾತಿ ಒಟ್ಟು ಪ್ರಮಾಣ ಹೆಚ್ಚಿಸುವ ಪ್ರಸ್ತಾವದ ಬಗ್ಗೆಯೂ ಸುಳಿವು ನೀಡಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಬಿಜೆಪಿಯವರು ನಮ್ಮ ನಾಯಕರನ್ನು ಗುರಿ ಮಾಡಿದ್ದಾರೆ. ನಾವು ಬಿಜೆಪಿಯನ್ನೇ ಗುರಿ ಮಾಡಿದ್ದೇವೆ. ಜನರು ಕೂಡ ಬಿಜೆಪಿಯನ್ನು ಕಿತ್ತೊಗೆಯಲು ಗುರಿ ಮಾಡಿದ್ದಾರೆ' ಎಂದರು.



ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ (ಮಧ್ಯದಲ್ಲಿ) ಜೊತೆ ಸಹ ಅಧ್ಯಕ್ಷರಾದ ಮಧು ಬಂಗಾರಪ್ಪ ಮತ್ತು ಕೆ.ಇ. ರಾಧಾಕೃಷ್ಣ

ಚಿತ್ರಾವಳಿ



ನಗರದ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ಬಿಜೆಪಿ ಮುಖಂಡ ಎಚ್‌.ಎಸ್‌. ಪದ್ಮರಾಜ್ ಮತ್ತು ನೂರಾರು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅಖಿಲ ಭಾರತ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಪುಟ್ಟಣ್ಣ, ಮಾಜಿ ಮೇಯರ್ ಜಿ. ಪದ್ಮಾವತಿ ಇದ್ದರು.



ಬಸವನಗುಡಿ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯು.ಬಿ. ವೆಂಕಟೇಶ್ ಅವರು ತ್ಯಾಗರಾಜನಗರದಲ್ಲಿ ಬುಧವಾರ ಮನೆ ಮನೆಗೆ ತೆರಳಿ ಮತ ಯಾಚಿಸಿದರು. —ಪ್ರಜಾವಾಣಿ ಚಿತ್ರ

ಹಾಸನ ಟಿಕೆಟ್: ದೇವೇಗೌಡರ ನಿರ್ಧಾರಕ್ಕೆ ಬದ್ಧ–ರೇವಣ್ಣ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): 'ಹಾಸನ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಆಯ್ಕೆಯ ವಿಷಯದಲ್ಲಿ ಎಚ್.ಡಿ. ದೇವೇಗೌಡರ ತೀರ್ಮಾನವೇ ಅಂತಿಮ' ಎಂದು ಶಾಸಕ ಎಚ್. ಡಿ. ರೇವಣ್ಣ ಸ್ಪಷ್ಟಪಡಿಸಿದರು.

'ಹಾಸನದಲ್ಲಿ ಭವಾನಿ ರೇವಣ್ಣ ಏಕೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಾರೆ' ಎಂದು ಪ್ರಶ್ನಿಸಿದ ಅವರು, 'ದೇವೇಗೌಡರ ನಿರ್ಧಾರಕ್ಕೆ ಬದ್ಧ. ಅವರು ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಕೊಟ್ಟರೂ ಒಪ್ಪಿಗೆ ಇದೆ. ಹಾಸನ ಟಿಕೆಟ್ ಸಂಬಂಧ ನಾನು, ಕುಮಾರಸ್ವಾಮಿ ಮಾತನಾಡಿಕೊಂಡಿದ್ದೇವೆ. ಶಕುನಿಗಳ ಮಾತಿಗೆ ತಲೆ ಕೆಡಿಸಿಕೊಳ್ಳಲ್ಲ' ಎಂದು ಸ್ಪಷ್ಟಪಡಿಸಿದರು. ಬಿರುಸಿನ ಪ್ರಚಾರ ನಡೆಸಿರುವ ಅವರ ಜೊತೆಗೆ ಭವಾನಿ ಕೂಡ ಮತಯಾಚನೆ ಮಾಡುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿ

ನಟಿ ಶ್ರುತಿ ವಿರುದ್ಧ ಆಯೋಗ ದೂರು

ಹಿರೇಕೆರೂರು: ಪಟ್ಟಣದಲ್ಲಿ ಏ.6ರಂದು ಬಿಜೆಪಿಯ ಕೇಸರಿ ಮಹಿಳಾ ಬ್ರಿಗೇಡ್ ವತಿಯಿಂದ ಏರ್ಪಡಿಸಿದ್ದ 'ಮಹಿಳಾ ಸಂಗಮ' ಕಾರ್ಯಕ್ರಮದಲ್ಲಿ ಚಿತ್ರನಟಿ ಶ್ರುತಿ ಮಾಡಿದ ಭಾಷಣ, ರಾಜಕೀಯ ಪಕ್ಷಗಳ ಕಾರ್ಯಕರ್ತರ ಗುಂಪುಗಳ ನಡುವೆ ದ್ವೇಷ ಮತ್ತು ವೈಮನಸ್ಸು ಭಾವನೆಗಳನ್ನುಂಟು ಮಾಡುವ ಹೇಳಿಕೆಯಾಗಿದೆ ಎಂದು ಆರೋಪಿಸಿ, ಚುನಾವಣಾ ಆಯೋಗ ಪ್ರಕರಣ ದಾಖಲಿಸಿದೆ.

ಬಿಜೆಪಿಯ ತಾರಾ ಪ್ರಚಾರಕಿಯಾಗಿ ಆಗಮಿಸಿದ್ದ ನಟಿ ಶ್ರುತಿ ತಮ್ಮ ಭಾಷಣದಲ್ಲಿ 'ನಿಮ್ಮ ವಂಶ ಉದ್ಧಾರವಾಗಲು ಯಾರಿಗೆ ಮತ ನೀಡಬೇಕು, ಬೇರೆಯವರಿಗೆ ಮತ ಹಾಕಿದರೆ ಯಾರ ವಂಶ ಉದ್ಧಾರವಾಗುತ್ತದೆ' ಎಂಬ ಬಗ್ಗೆ ನೀಡಿರುವ ಹೇಳಿಕೆಯು ವೈರತ್ವ ಉಂಟು ಮಾಡುವ ಮತ್ತು ಭೀತಿಯನ್ನು ಹುಟ್ಟಿಸುವ ಹೇಳಿಕೆಯಾಗಿದೆ ಎಂದು ಎಂಸಿಸಿ ನೋಡಲ್ ಅಧಿಕಾರಿ ಪಂಪಾಪತಿ ನಾಯಕ್ ವಿಡಿಯೊ ದಾಖಲೆ ಸಹಿತ ಹಿರೇಕೆರೂರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕೆಪಿಸಿಸಿ ವಕ್ತಾರ ಲಕ್ಷ್ಮಣ ನಟಿಯ ಹೇಳಿಕೆ ವಿರುದ್ಧ ರಾಜ್ಯ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದರು.


ನಾಮಪತ್ರ: ಐವರಿಗಷ್ಟೇ ಪ್ರವೇಶ

ಬೆಂಗಳೂರು: ವಿಧಾನಸಭಾ ಚುನಾವಣೆಯ ನಾಮಪತ್ರ ಸಲ್ಲಿಕೆ ಗುರುವಾರದಿಂದ ಆರಂಭವಾಗುತ್ತಿದ್ದು, ಅಭ್ಯರ್ಥಿಯೂ ಸೇರಿದಂತೆ ಐದು ಮಂದಿ ಮಾತ್ರ ಚುನಾವಣಾಧಿಕಾರಿ ಕಚೇರಿಯೊಳಕ್ಕೆ ಪ್ರವೇಶಿಸಲು ಅವಕಾಶವಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಏ. 20ರವರೆಗೂ ನಾಮಪತ್ರ ಸಲ್ಲಿಕೆಗೆ ಅವಕಾಶವಿದೆ. ಅಂಬೇಡ್ಕರ್ ಜಯಂತಿ (ಏಪ್ರಿಲ್ 14) ಹಾಗೂ ಭಾನುವಾರದಂದು ನಾಮಪತ್ರ ಸಲ್ಲಿಸಲು ಅವಕಾಶವಿರುವುದಿಲ್ಲ. ಉಳಿದ ದಿನಗಳಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ನಾಮಪತ್ರ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ನಾಮಪತ್ರ ಸಲ್ಲಿಸಲು ಬರುವವರಿಗೆ ಕಚೇರಿಯ 100 ಮೀಟರ್‌ವರೆಗೆ ಮೂರು ವಾಹನಗಳ ಪ್ರವೇಶಕ್ಕೆ ಅವಕಾಶ ವಿದೆ. ಏ.21ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಏ.24 ರಂದು ಮಧ್ಯಾಹ್ನ 3 ಗಂಟೆಯೊಳಗೆ ನಾಮಪತ್ರ ಹಿಂಪಡೆಯಲು ಅವಕಾಶವಿದೆ ಎಂದು ತಿಳಿಸಿದ್ದಾರೆ.

ಸ್ಪರ್ಧಾ ವಾಣಿ



ಕೇರಳದ ರಾಮ್‌ಸರ್ ತಾಣಗಳು

ಯು.ಟಿ. ಆಯಿಶ ಫರ್ಝಾನ

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಪ್ರಚಲಿತ

ಕೇರಳದ ವೆಂಬನಾಡ್ ಮತ್ತು ಅಷ್ಟಮುಡಿ ಸರೋವರಗಳು ರಾಮ್‌ಸರ್ ವೆಟ್‌ಲ್ಯಾಂಡ್ಸ್(ಜೌಗು ಪ್ರದೇಶ ಅಥವಾ ತರಿಭೂಮಿ) ಎಂಬ ಮನ್ನಣೆಗೆ ಪಾತ್ರವಾಗಿವೆ. ಈ ಜೌಗುಪ್ರದೇಶಗಳನ್ನು ರಕ್ಷಿಸುವಲ್ಲಿ ವಿಫಲವಾದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (NGT), ಕೇರಳ ಸರ್ಕಾರಕ್ಕೆ ₹10 ಕೋಟಿ ರೂಪಾಯಿ ದಂಡ ವಿಧಿಸಿದೆ. ತ್ಯಾಜ್ಯಗಳು, ಪ್ಲಾಸ್ಟಿಕ್ ತ್ಯಾಜ್ಯಗಳು, ಮನೆ ತ್ಯಾಜ್ಯಗಳು ಮತ್ತು ಕಸಾಯಿಖಾನೆ ತ್ಯಾಜ್ಯವನ್ನು ನದಿಗೆ ಎಸೆಯುತ್ತಿರುವ ಕಾರಣ, ಮೇಲೆ ಉಲ್ಲೇಖಿಸಿರುವ ಎರಡೂ ಜೌಗುಪ್ರದೇಶಗಳು ಕಲುಷಿತಗೊಂಡಿವೆ ಎನ್ನುವುದು ಕೇರಳ ಸರಕಾರದ ಮೇಲಿನ ಅಪಾದನೆಯಾಗಿದೆ. ಈ ರಾಮ್‌ಸರ್ ವೆಟ್‌ಲ್ಯಾಂಡ್ಸ್ ಪಟ್ಟಿಯಲ್ಲಿರುವ ಎರಡು ಸರೋವರಗಳ ವೈಶಿಷ್ಟ್ಯ ಏನು? ಈ ಕುರಿತ ವಿವರ ಇಲ್ಲಿದೆ.

ವೆಂಬನಾಡ್ ಸರೋವರ

- ಇದು ಕೇರಳದ ಅತಿ ದೊಡ್ಡ ಜೌಗು ಭೂ ಪ್ರದೇಶ. ಪಶ್ಚಿಮ ಬಂಗಾಳದ ಸುಂದರ್‌ಬನದ ನಂತರ ದೇಶದಲ್ಲೇ ಎರಡನೇ ಅತಿ ದೊಡ್ಡ ಜೌಗು ಭೂ ಪ್ರದೇಶವಾಗಿದೆ.



ವೆಂಬನಾಡ್ ಸರೋವರ

- ಸುಮಾರು 10 ನದಿಗಳು ಕೂಡಿಕೊಂಡು ವೆಂಬನಾಡ್ ಸರೋವರ ರೂಪುಗೊಂಡಿದೆ.
- ಇವುಗಳಲ್ಲಿ, ನಾಲ್ಕು ನದಿಗಳು (ಮೀನಚಿಲ್, ಮಣಿಮಾಲಾ, ಪಂಪಾ ಮತ್ತು ಅಚನ್‌ಕೋಯಿಲ್) ವೆಂಬನಾಡ್ ಸರೋವರವನ್ನು ಸಮೃದ್ಧಗೊಳಿಸುವಲ್ಲಿ ತಮ್ಮದೇ ಆದ ವಿಶೇಷ ಪಾತ್ರವಹಿಸಿವೆ.
- ಇದು ತಣ್ಣೀರ್ ಮುಕ್ಕಂ ಬಂಡ್‌ನಿಂದ ಅಲಪ್ಪುಳದವರೆಗೆ ಸುಮಾರು 60 ಕಿ.ಮೀಗಳಷ್ಟು ಚಾಚಿಕೊಂಡಿದೆ.
- ವೆಂಬನಾಡ್ ಸರೋವರದಲ್ಲಿ ಪ್ರತಿ ವರ್ಷ ಆಗಸ್ಟ್ ತಿಂಗಳಿನಲ್ಲಿ ನಡೆಯುವ ವೆಲ್ಲಂ ಕಳಿ (ನೆಹರೂ ಟ್ರೋಫಿ ಬೋಟ್ ರೇಸ್)ಸ್ಪರ್ಧೆಯು ಹಾವಿನಂತೆ ಉದ್ದವಾಗಿರುವ ದೋಣಿ ಸ್ಪರ್ಧೆ(Snake boat race)ಯಾಗಿದೆ. ವೆಲ್ಲಂ ಎಂದರೆ ಮಲಯಾಳಂ ಭಾಷೆಯಲ್ಲಿ ನೀರು ಎಂದರ್ಥ.
- ಕೊಮಾರಕಮ್ ಪಕ್ಷಿಧಾಮವು ವೆಂಬನಾಡ್ ಸರೋವರದ ದಡದಲ್ಲಿದ್ದು ಇದನ್ನು 2002ರಲ್ಲಿ ಅಂತರರಾಷ್ಟ್ರೀಯ ರಾಮ್ಸರ್ ಸೈಟ್(ಜೌಗುತಾಣ) ಎಂದು ಘೋಷಿಸಲಾಯಿತು.
- ವೆಂಬನಾಡ್ - ಕೋಲ್ ಪ್ರದೇಶವು ಮ್ಯಾಂಗ್ರೋವ್ ಕಾಡುಗಳು, ವಿವಿಧ ಜಾತಿಯ ಪಕ್ಷಿಗಳು, ಮೀನುಗಳು, ಸರೀಸೃಪಗಳು ಮತ್ತು ಉಭಯಚರಗಳು ಸೇರಿದಂತೆ ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿಗಳ ನೆಲೆವೀಡಾಗಿದೆ.
- ಈ ಸರೋವರದಲ್ಲಿ ಸುಮಾರು 150 ಜಾತಿಯ ಮೀನುಗಳಿವೆ. ಸರೋವರದ ನದಿಮುಖದ ಸ್ವರೂಪವು ಸಮೃದ್ಧ ಜೌಗು ತಾಣಗಳಿಂದ ಕೂಡಿದ್ದು ಸಿಗಡಿಗಳಿಗೆ ಉತ್ತಮ ಆವಾಸಸ್ಥಾನವಾಗಿದೆ.
- ಮಲ್ಲೆಟ್ ಮೀನು, ಕ್ಯಾಟ್ ಫಿಶ್ ಮತ್ತು ಪರ್ಲ್ ಫಿಶ್ ಕೂಡ ಇಲ್ಲಿ ಹೇರಳವಾಗಿ ಸಿಗುತ್ತವೆ. ಸಿಹಿನೀರಿನ ಸಿಗಡಿಗಳು, ಕಾಟ್ಲಾ, ರೋಹು (ಲ್ಯಾಬಿಯೋ ರೋಹಿತಾ) ಮತ್ತು ನಂದನ್ (ಅಂಬಾಸಿಸ್ ಥಾಮಸಿ)ಮುಂತಾದವು ಇಲ್ಲಿ ಕಂಡುಬರುವ ವಾಣಿಜ್ಯ ಮೌಲ್ಯದ ಇತರ ಕೆಲವು ಮೀನುಗಳಾಗಿವೆ.
- ವೆಂಬನಾಡ್ ಸರೋವರದಲ್ಲಿ ನಡೆಯುವ ಸುಣ್ಣದ ಚಿಪ್ಪಿನ ಮೀನುಗಾರಿಕೆಯು ಜನಪ್ರಿಯ ಮತ್ಸ್ಯ ಉದ್ದಿಮೆಯಾಗಿದೆ ಇಲ್ಲಿ ಆಳವಿಲ್ಲದ ನೀರಿನಲ್ಲಿ ಹೇರಳವಾಗಿರುವ ಕಪ್ಪು ಕ್ಲಾಮ್ (ವಿಲ್ಲೋರಿಟಾ ಸೈಪ್ರಿನಾಯ್ಡ್ಸ್) ಗಳು ದೊರೆಯುವುದರಿಂದ, ಈ ಪ್ರದೇಶ ಪ್ರಸ್ತುತ ಸುಣ್ಣದ ಚಿಪ್ಪಿನ ಮೀನುಗಾರಿಕೆಯು ಬೃಹತ್ ಉದ್ದಿಮೆಯಾಗಿ ಬೆಳೆದುನಿಂತಿದೆ.
- ಈ ಚಿಪ್ಪುಗಳನ್ನು ಸಿಮೆಂಟ್, ರಸಗೊಬ್ಬರಗಳು ಮತ್ತು ಔಷಧೀಯ ಉತ್ಪಾದನೆಗೆ ಕಚ್ಚಾ ವಸ್ತುವಾಗಿ ಬಳಸಲಾಗುತ್ತದೆ.
- ವೆಂಬನಾಡ್ ಪರಿಸರದ ಮೇಲೆ ನಡೆದ ಬೃಹತ್ ಅತಿಕ್ರಮಣ ಮತ್ತು ವಿನಾಶದಿಂದ ಸರೋವರದ ನೀರಿನ ಧಾರಣಾ ಸಾಮರ್ಥ್ಯ 120 ವರ್ಷಗಳಲ್ಲಿ ಶೇ 85ರಷ್ಟು ಕಡಿಮೆಯಾಗಿದೆ.

ಅಷ್ಟಮುಡಿ ಸರೋವರ

- ಇದು ಕೇರಳ ರಾಜ್ಯದ ಕೊಲ್ಲಂ ಜಿಲ್ಲೆಯಲ್ಲಿದೆ.
- ಇದು ಕೇರಳದ ಪ್ರಸಿದ್ಧ ಹಿನ್ನೀರು ಪ್ರದೇಶಗಳ ಪ್ರವೇಶ ದ್ವಾರವಾಗಿದೆ. ಇಲ್ಲಿರುವ ಹೌಸ್‌ಬೋಟ್ ಸವಾರಿಗಳು ದೇಶದಾದ್ಯಂತ ಪ್ರವಾಸಿಗರನ್ನು ಆಕರ್ಷಿಸುವ ಅತ್ಯಂತ ಪ್ರಸಿದ್ಧ ವಿಹಾರತಾಣವಾಗಿದೆ.



ಅಷ್ಟಮುಡಿ ಸರೋವರ

- ಸರೋವರವು 61 ಚದರ ಕಿಲೋಮೀಟರ್ ವಿಸ್ತೀರ್ಣವಿದೆ. ಎಂಟು ಶಾಖೆಗಳು ಅಥವಾ ಕಾಲುವೆಗಳನ್ನು ಹೊಂದಿರುವ ಕಾರಣ ಇದಕ್ಕೆ ಅಷ್ಟಮುಡಿ ಎಂದು ಹೆಸರಿಸಲಾಗಿದೆ.
- ಆಗಸ್ಟ್ 19, 2002 ರಂದು ರಾಮ್‌ಸರ್ ಕನ್ವೆನ್ಷನ್ ಅಡಿ ಈ ಸರೋವರವನ್ನು ಅಂತರರಾಷ್ಟ್ರೀಯ ಪ್ರಾಮುಖ್ಯತೆಯ ಜೌಗು ಪ್ರದೇಶವೆಂದು ಘೋಷಿಸಲಾಗಿತ್ತು. ❖

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT)

National Green Tribunal

ಕೈಗಾರಿಕೀಕರಣದ ನಂತರ ನಡೆದ ತ್ವರಿತ ಆರ್ಥಿಕ ಚಟುವಟಿಕೆಗಳು ವ್ಯಾಪಕ ಪರಿಸರ ನಿರ್ಲಕ್ಷ್ಯಕ್ಕೆ ಕಾರಣವಾದವು. ಹಾಗೆ ಮೂಡಿದ ಜಾಗತಿಕ ಎಚ್ಚರದ ಪರಿಣಾಮ ಜೂನ್ 1992 ರ ರಿಯೋ ಡಿ ಜನೈರೋ ಶೃಂಗಸಭೆಯಲ್ಲಿ ಮಾಲಿನ್ಯಕಾರಕಗಳು ಮತ್ತು ಇತರ ಪರಿಸರ ಹಾನಿಗಳಿಂದಾದ ಸಂತ್ರಸ್ತರಿಗೆ ನ್ಯಾಯಾಂಗ ಮತ್ತು ಆಡಳಿತಾತ್ಮಕ ಪರಿಹಾರವನ್ನು ಒದಗಿಸಲು ಭಾರತವು ನಿರ್ಧಾರ ತೆಗೆದುಕೊಂಡಿತು. ಅದರ ಪರಿಣಾಮ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ಕಾಯ್ದೆ 2010 ರೂಪುಗೊಂಡಿತು. 18 ಅಕ್ಟೋಬರ್ 2010 ರಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಕಾಯಿದೆ 2010 ರ ಅಡಿಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ಸ್ಥಾಪಿಸಲಾಯಿತು. ಈ ನ್ಯಾಯಮಂಡಳಿಯ ಸ್ಥಾಪನೆಯೊಂದಿಗೆ, ಭಾರತವು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ನಂತರ 'ವಿಶೇಷ ಪರಿಸರ ನ್ಯಾಯಮಂಡಳಿ' ಸ್ಥಾಪಿಸಿದ ವಿಶ್ವದ ಮೂರನೇ ರಾಷ್ಟ್ರವಾಗಿದೆ ಮತ್ತು ಮೊದಲ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ.

ಸಹಕಾರ ಇಲಾಖೆಯಲ್ಲಿ ನೂರು ನಿರೀಕ್ಷಕರ ಹುದ್ದೆಗಳು

ಮಂಜುನಾಥ್ ಭದ್ರಶೆಟ್ಟಿ

ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಕರ್ನಾಟಕ ಸಹಕಾರ ಇಲಾಖೆಯಲ್ಲಿನ ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿಗೆ ಚಾಲನೆ ನೀಡಿದೆ. ಸಹಕಾರ ಇಲಾಖೆಯ 100 'ಸಹಕಾರ ಸಂಘಗಳ ನಿರೀಕ್ಷಕರ' (Co-operative Inspectors-CI) ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಇದರಲ್ಲಿ ಕರ್ನಾಟಕ ಉಳಿಕೆ ಮೂಲ ವೃಂದದ 47 ಹುದ್ದೆಗಳು ಹಾಗೂ ಕಲ್ಯಾಣ ಕರ್ನಾಟಕ ವೃಂದದ 53 ಹುದ್ದೆಗಳು ಸೇರಿ ಒಟ್ಟು 100 ಹುದ್ದೆಗಳಿವೆ. ಎರಡಕ್ಕೂ ಪ್ರತ್ಯೇಕ ಅಧಿಸೂಚನೆ ಹೊರಡಿಸಲಾಗಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ಮಾರ್ಚ್ 30ರಿಂದ ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು ಇದೇ ಏಪ್ರಿಲ್ 30 ಅರ್ಜಿ ಸಲ್ಲಿಸಲು ಕಡೆಯ ದಿನವಾಗಿದೆ. ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು.

ಸಾಮಾನ್ಯ ಅಭ್ಯರ್ಥಿಗಳಿಗೆ ಶುಲ್ಕ ₹600, 2ಎ, 2ಬಿ 3ಎ, 3ಬಿ ಅಭ್ಯರ್ಥಿಗಳಿಗೆ ₹300 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ₹50 ಇದ್ದು ಎಸ್‌ಸಿ, ಎಸ್‌ಟಿ, ಅಂಗವಿಕಲ ಹಾಗೂ ಪ್ರವರ್ಗ 1ರ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ವಯೋಮಿತಿ : ಅರ್ಜಿ ಸಲ್ಲಿಸಲು ವಯೋಮಿತಿ ಕನಿಷ್ಠ 18 ವರ್ಷ– ಗರಿಷ್ಠ 35 ವರ್ಷಗಳು. 2ಎ, 2ಬಿ 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ 38 ವರ್ಷ ಹಾಗೂ ಎಸ್‌ಸಿ, ಎಸ್‌ಟಿ, ಅಂಗವಿಕಲ ಹಾಗೂ ಪ್ರವರ್ಗ 1ರ ಅಭ್ಯರ್ಥಿಗಳಿಗೆ 40 ವರ್ಷದವರೆಗೆ ವಯೋಮಿತಿ ವಿಸ್ತರಿಸಲಾಗಿದೆ.

ವಿದ್ಯಾರ್ಹತೆ : ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಿ.ಎಸ್ಸಿ (ಕೃಷಿ), ಬಿ.ಎಸ್ಸಿ (ಮಾರ್ಕೆಟಿಂಗ್), ಬಿ.ಎಸ್ಸಿ ಕೋಆಪ್‌ರೇಟಿವ್, ಬಿ.ಕಾಂ, ಬಿಬಿಎ/ಬಿಬಿಎಂ ಪದವಿಗಳಲ್ಲಿ ಯಾವುದಾದರೂ ಒಂದನ್ನು ಬೇಸಿಕ್ ವಿದ್ಯಾರ್ಹತೆಯಾಗಿ ಹೊಂದಿರಬೇಕು.

ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಗರಿಷ್ಠ ₹52 ಸಾವಿರದವರೆಗೆ ವೇತನ ಶ್ರೇಣಿ ಇದೆ. ಸರ್ಕಾರ ಕಾಲಕಾಲಕ್ಕೆ ನೀಡುವ ಇತರೆ ಭತ್ಯೆಗಳು ಸೇರುತ್ತವೆ.

ಆಯ್ಕೆ ವಿಧಾನ ಹೇಗೆ?: ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಸಂದರ್ಶನ ಇರುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗೆ ಪದವಿ ಮಟ್ಟದ ಪಠ್ಯಮಗಳನ್ನು ಆಧರಿಸಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲಾಗಿರುತ್ತದೆ.

ಅದಕ್ಕೂ ಮುನ್ನ ಅಭ್ಯರ್ಥಿಗಳು ಕನ್ನಡ ಕಡ್ಡಾಯ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು. ಈಗಾಗಲೇ ಕೆಪಿಎಸ್‌ಸಿಯ ಕನ್ನಡ ಕಡ್ಡಾಯ ಪರೀಕ್ಷೆ ಪಾಸಾದವರು ಮತ್ತೆ ಇದನ್ನು ಬರೆಯುವ ಅಗತ್ಯ ಇಲ್ಲ.

ಸ್ಪರ್ಧಾತ್ಮಕ ಪರೀಕ್ಷೆ : ಸ್ಪರ್ಧಾತ್ಮಕ ಪರೀಕ್ಷೆಗೆ ಎರಡು ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಯಲ್ಲಿ 100 ಅಂಕಗಳ 100 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಮೊದಲ ಪತ್ರಿಕೆಗೆ ಒಂದೂವರೆ ಗಂಟೆ, ಎರಡನೇ ಪತ್ರಿಕೆ 2 ಗಂಟೆ ಸಮಯ ನಿಗದಿಪಡಿಸಲಾಗಿದೆ.

ಪ್ರತಿ ನಾಲ್ಕು ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ. ಅಭ್ಯರ್ಥಿಗಳು ಎರಡೂ ಪತ್ರಿಕೆಗಳಿಗೂ ಹಾಜರಾಗುವುದು ಕಡ್ಡಾಯ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿರುತ್ತದೆ. ಪರೀಕ್ಷೆಗೆ ನೀಡುವ ಪ್ರಶ್ನೆಗಳು ಈ ಪಠ್ಯಕ್ರಮಗಳನ್ನು ಆಧರಿಸಿರುತ್ತವೆ.

ಪತ್ರಿಕೆ 1 : ಸಾಮಾನ್ಯ ಜ್ಞಾನ -

- ಪ್ರಚಲಿತ ಘಟನೆಗಳಿಗೆ ಸಂಬಂಧಿಸಿದ ವಿಷಯಗಳ ಸಾಮಾನ್ಯ ಜ್ಞಾನ
- ಸಾಮಾನ್ಯ ವಿಜ್ಞಾನ ವಿಷಯಗಳು
- ಸಾಮಾನ್ಯ ಭೂಗೋಳ ಶಾಸ್ತ್ರ ವಿಷಯಗಳು
- ಸಮಾಜ ವಿಜ್ಞಾನ ವಿಷಯಗಳು
- ಭಾರತೀಯ ಸಮಾಜ ಮತ್ತು ಅದರ ಬೆಳವಣಿಗೆಯ ಇತಿಹಾಸದ ವಿಷಯಗಳು
- ಭಾರತದ ಮತ್ತು ಕರ್ನಾಟಕದ ಇತಿಹಾಸ
- ಭಾರತದ ಸಂವಿಧಾನ ಮತ್ತು ಸಾರ್ವಜನಿಕ ಆಡಳಿತ
- ಪ್ರಾಯೋಗಿಕ ಜ್ಞಾನ ಮತ್ತು ಬೌದ್ಧಿಕ ಸಾಮರ್ಥ್ಯದ ವಿಷಯಗಳು (ಎಸ್ಸೆಸ್ಸೆಲ್ಸಿ ಮಟ್ಟದ್ದು)
- ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳು
- ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕದ ಭೂಸುಧಾರಣೆಗಳು ಮತ್ತು ಸಾಮಾಜಿಕ ಬದಲಾವಣೆ ವಿಷಯಗಳು
- ಕರ್ನಾಟಕದ ಅರ್ಥ ವ್ಯವಸ್ಥೆ, ಅದರ ಸಾಮರ್ಥ್ಯ ಮತ್ತು ದೌರ್ಬಲ್ಯತೆ, ಪ್ರಸ್ತುತ ಸ್ಥಿತಿಗತಿಗಳು
- ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಸಂಸ್ಥೆಗಳ ವಿಷಯಗಳು
- ಕರ್ನಾಟಕದ ಪರಿಣಾಮಕಾರಿ ಆಡಳಿತಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ ಕುರಿತ ವಿಷಯಗಳು
- ಕರ್ನಾಟಕದ ಪರಿಸರ ಸಂಬಂಧಿ ಸಮಸ್ಯೆಗಳು ಮತ್ತು ಅಭಿವೃದ್ಧಿ ಕುರಿತ ವಿಷಯಗಳು
- ಬೌದ್ಧಿಕ ಸಾಮರ್ಥ್ಯದ ವಿಷಯಗಳು

ಪತ್ರಿಕೆ 2: ವಿಷಯಗಳು:

- ಸಾಮಾನ್ಯ ಕನ್ನಡ, ಗರಿಷ್ಠ ಅಂಕ 35
- ಸಾಮಾನ್ಯ ಇಂಗ್ಲಿಷ್, ಗರಿಷ್ಠ ಅಂಕ 35
- ಕಂಪ್ಯೂಟರ್ ಜ್ಞಾನ, ಗರಿಷ್ಠ ಅಂಕಗಳು 30

ಸಹಕಾರಿ ಸಂಘಗಳ ನಿರೀಕ್ಷಕರ ಹುದ್ದೆಗಳ ವರ್ಗೀಕರಣ ಹಾಗೂ ವಿವರವಾದ ಅಧಿಸೂಚನೆ ಪರಿಶೀಲನೆ ಹಾಗೂ ಅರ್ಜಿ ಸಲ್ಲಿಸಲು www.kpsc.kar.nic.in ಜಾಲತಾಣಕ್ಕೆ ಭೇಟಿ ನೀಡಬಹುದು. ❖

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

BIOLOGY

56) Natural killer lymphocytes are an example of

a) Cytokine barrier b) Physiological barrier
c) Physical barrier d) Cellular barrier

Ans: d

Expln:- Innate immune System is a non-Specific type of defence i.e., present at the time of birth. They are providing different types of barriers to the entry of the foreign agents into our body. It consists of 4 types of barriers:-

(A) Cytokine to cellular barrier: Virus-infected cells secrete proteins called interferons which protect non-infected cells from further viral infection.

(B) Physiological barriers: Acid in the stomach, saliva in the mouth tears from eyes all prevents microbial growth.

(C) Physical barriers: Skin is the main barrier which prevents entry of the micro-organism.

(D) Cellular barriers: Leukocytes (WBC) acts like polymorphonuclear leukocytes (PMNL-neutrophils), Single-celled organism i.e. Cellular barriers. It also includes monocytes, natural killer cells in the blood, as well as Macrophages in tissue can phagocytose and destroy microbes.

57) The free-living fungus Trichoderma can be used for –

a) Killing insects
b) Biological control of plant diseases
c) Controlling butterfly caterpillars
d) Producing antibiotics

Ans:- b

58) What would happen if oxygen availability to activated sludge flocs is reduced?

a) It will slow down the rate of degradation of organic matter
b) The centre of flocs will become anoxic, which would cause death of bacteria and eventually breakage of flocs.
c) Flocs would increase in size as anaerobic bacteria would grow around flocs.
d) Protozoa would grow in large numbers.

Ans:- b

59) Mycorrhiza does not help the host plant in –

a) Enhancing its phosphorus uptake capacity
b) Increasing its tolerance to drought
c) Enhancing its resistance to root pathogens
d) Increasing its resistance to insects

Ans:- d

60) Big holes in Swiss cheese are made by a –

a) A machine
b) A bacterium that produces methane gas
c) A bacterium producing la large amount of carbon dioxide
d) A fungus that releases a lot of gases during it s metabolic activities.

Ans:- c

61) The residue left after methane production from cattle dung is -

a) burnt b) buried in land fills
c) used as manure
d) used in civil construction

Ans:- c

62) The residue left after methane production from cattle dung is:

a) Burnt b) burried in land fills
c) used as manure
d) used in civil construction.

Ans:- C

63) Activated sludge should have the ability to settle quickly so that it can:

a) be rapidly pumped back from sedimentation tank to aeration tank
b) absorb pathogenic bacteria present in waste water while sinking to the bottom of the settling tank
c) be discarded and anaerobically digested
d) absorb colloidal organic matter.

Ans:-a

64) With respect to Eichhornia:

Statement X: It drains off oxygen from water and is seen growing in standing water.

Statement Y: It is indigenous species of our country.

a) Both statement X and Y are correct
b) Both statement X and Y are wrong
c) Only statement X is correct and Y is wrong
d) Only statement Y is correct and X is wrong

Ans: c

Expln:- Eichhornia is an alien or exotic species, These plants are introduced in India because of its beautiful flowers and shape of leaves. Since it can propagate vegetatively at a phenomenal rate and spread all over the water body in a short period of time. It is the most invasive weeds found growing wherever there is standing water. It drains oxygen from the water, which leads to the death of fishes. It adversely affects aquatic life and increases the biological oxygen demand.

A species is defined as indigenous to a given region or ecosystem, if its presence in that region is the result of only natural process, with no human intervention. Indigenous Species include those that are endemic i.e., naturally occurring in an area and restricted entirely to that area. So, Eichhornia is not an indigenous species of our country.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

MATHEMATICS

MULTIPLE CHOICE QUESTIONS

40) The mean and variance for the data 6, 7, 10, 12, 13, 4, 8, 12 respectively are

(A) 8, $\sqrt{26.25}$ (B) 9, $\sqrt{9.25}$
(C) 8, 26.25 (D) 9, 9.25

Ans : (D) 9, 9.25

$$\text{Mean} = \frac{6+7+10+12+13+4+8+12}{8} = 9$$

$$\text{Variance} = \frac{1}{8}[3^2+2^2+1^2+3^2+4^2+5^2+1^2+3^2]$$

$$= \frac{74}{8} = 9.25 \left[\because \sigma^2 = \frac{1}{n}\Sigma(x_i - \bar{x})^2\right]$$

41) The solution of the differential equation $x\frac{dy}{dx} - y = 3$ represents a family of

A) Straight lines B) Circles
C) Parabolas D) elipses

Ans:-A

42) The medians AD and BE of a triangle with vertices A (0, 6), B (0, 0) and C (a, 0) are perpendicular to each other if

(A) $a = \frac{b}{2}$ (B) $b = \frac{a}{2}$
(C) $ab = 1$ (D) None of the above

Ans:- D

43) Let a and b be nonzero reals such that a ≠b. then the equation of the line passing through the origin and the point of intersection $\frac{x}{a} + \frac{y}{b} = 1$ and $\frac{x}{b} + \frac{x}{a} = 1$ is

(A) $ax + by = 0$ (B) $bx + ay = 0$
(C) $y - x = 0$ (D) $x + y = 0$

Ans: (C) $y - x = 0$

Expln:-

Consider the lines $\frac{x}{a} + \frac{y}{b} = 1$ ....(1),

$\frac{x}{b} + \frac{y}{a} = 1$ ....(2)


Point of intersection is obtained by solving (1) and (2).
From (1), $bx + ay = ab$. From (2), $ax + by = ab$.
$\therefore bx + ay = ax + by$
i.e., $(b - a)x = (b - a)y \Rightarrow x = y$.
This line passes through the origin,
i.e., $x - y = 0$ or $y - x = 0$.

44) A straight line meets the coordinate axes at A and B, so that the centroid of the triangle OAB is (1, 2). Then the equation of the line AB is

(A) $x + y = 6$ (B) $2x + y = 6$
(C) $x + 2y = 6$ (D) $3 + y = 6$

Ans: (B) $2x + y = 6$

Expln:- Let A (a, 0), B (0, b).
Let D, C be the midpoints of OA, AB.
Then the centroid G (1, 2) is the point of intersection of OC and BD.
G divides BD in the ratio 2:1, m: n.



B(0, b) $D\left(\frac{a}{2}, 0\right)$

x_1, y_1 x_2, y_2

$$\frac{mx_2 + nx_1}{m+n} = \frac{2 \times \frac{a}{2} + 1 \times 0}{3} = 1 \quad \therefore a = 3$$

$$\frac{my_2 + ny_1}{m+n} = \frac{2 \times 0 + 1 \times b}{3} = 2 \quad \therefore b = 6$$

Equation of AB is $\frac{x}{a} + \frac{y}{b} = 1$ i.e., $\frac{x}{3} + \frac{y}{6} = 1$

$\therefore \frac{2x + y}{6} = 1$ i.e., $2x + y = 6$.

45) The direction ratios of the line which is perpendicular to the line $\frac{x-7}{2} = \frac{y+17}{-3} = \frac{z-6}{1}$ and $\frac{x+5}{1} = \frac{y+3}{2} = \frac{z-4}{-2}$ are

(A) <4, 5, 7> (B) <4, -5, 7>
(C) <4, -5, -7> (D)<-4, 5, 7>

Ans: (A) <4, 5, 7>

Expln:- Let a, b, c be the direction ratios of a line which is perpendicular to both the given lines.
Then $2a - 3b + c = 0$
$a + 2b - 2c = 0$.

By cross multiplication rule, $\frac{a}{6-2} = \frac{b}{1+4} = \frac{c}{4+3}$

i.e., $\frac{a}{4} = \frac{b}{5} = \frac{c}{7}$. $\therefore a, b, c = 4, 5, 7$.

46) **The Set A has 4 elements and the set B has 5 elements then the number of injective mappings that can be defined from A to B is**

a) 144 b) 72
c) 60 d) 120

Ans: (d)

Expln:- No. of elements in set A = 4
No. of elements in set B = 5
No. of injective mapping = $^5P_4 = (5!/1!) = 120$

47) The number of solutions of the equation $|\cot x| = \cot x + \frac{1}{\sin x}, (0 \le x \le 2\pi)$ is / are

(A) 0 **(B) 1**
(C) 2 **(D) 3**

Ans: (C) 2

Expln:-

$$|\cot x| = \cot x + \frac{1}{\sin x}, (0 \le x \le 2\pi)$$

$$\pm\cot x = \cot x + \frac{1}{\sin x} \quad \text{i.e., } \pm\frac{\cos x}{\sin x} = \frac{\cos x}{\sin x} + \frac{1}{\sin x}$$

$$\Rightarrow \pm\frac{\cos x}{\sin x} = \frac{1+\cos x}{\sin x} \quad \text{i.e., } \pm\cos x = 1 + \cos x$$

$\cos x = 1 + \cos x$ is not possible. $\therefore -\cos x = 1 + \text{cox } x$

i.e., $-2\cos x = 1$ i.e., $\cos x = -\frac{1}{2}$.

$x = 120^0$ or 240^0, i.e., there are two solutions for x.

ಐಐಎಚ್‌ಆರ್‌ನಲ್ಲಿ ಎರಡು ದಿನಗಳ ಮೇಳಕ್ಕೆ ಚಾಲನೆ

‘ಅಪ್ಪೆಮಿಡಿ’ ಲೋಕ ಅನಾವರಣ



ಅಪ್ಪೆಮಿಡಿ ಮೇಳದಲ್ಲಿ ಭಾಗಿಯಾದ ಜನ



ಅಪ್ಪೆಮಿಡಿ ಮಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರದ (ಐಐಎಚ್‌ಆರ್) ಆವರಣದಲ್ಲಿ ಉಪ್ಪಿನಕಾಯಿಗೆ ಬಳಸುವ ನೂರಕ್ಕೂ ಹೆಚ್ಚು ಮಾವಿನ ತಳಿಯ ‘ಅಪ್ಪೆಮಿಡಿ’ಯನ್ನು ಪ್ರದರ್ಶನಕ್ಕೆ ಇರಿಸಲಾಗಿದ್ದು, ನೋಡುಗರ ಬಾಯಲ್ಲಿ ನೀರೂರಿಸುತ್ತಿವೆ.

ಐಐಎಚ್‌ಆರ್ ಇದೇ ಮೊದಲ ಬಾರಿಗೆ ಹಮ್ಮಿಕೊಂಡಿರುವ ಎರಡು ದಿನಗಳ ‘ಅಪ್ಪೆಮಿಡಿ’ ಮೇಳಕ್ಕೆ ಬುಧವಾರ ಚಾಲನೆ ದೊರೆತಿದ್ದು, ಗುರುವಾರವೂ ಪ್ರದರ್ಶನ ನಡೆಯಲಿದೆ. ಮೇಳದಲ್ಲಿ ಶಿರಸಿ, ಸಿದ್ದಾಪುರ, ಯಲ್ಲಾಪುರ ಸೇರಿ ಮಲೆನಾಡಿನ ವಿವಿಧ ಭಾಗದ ಅಪ್ಪೆಮಿಡಿಗಳಿಂದ ತಯಾರಿಸಿದ ಉಪ್ಪಿನ ಕಾಯಿಯ ಮಾರಾಟವನ್ನೂ ಏರ್ಪಡಿಸಲಾಗಿತ್ತು. ವಿವಿಧ ಸ್ವಾದದ ಉಪ್ಪಿನ ಕಾಯಿಯನ್ನು ಸವಿದ ಜನರು, ರುಚಿಗೆ ಮಾರುಹೋಗಿ ಖರೀದಿಸಿದರು. ಅಪ್ಪೆಮಿಡಿ ಸಸಿಗಳ ಮಾರಾಟವೂ ಭರದಿಂದ ಸಾಗಿತು. ಮಾರಾಟ ನಡೆಯ-ದಿದ್ದರಿಂದ ನಗರದ ವಿವಿಧೆಡೆಯಿಂದ ಬಂದ ಜನರು ನಿರಾಸೆಗೊಳಗಾದರು.

ಅಪ್ಪೆಮಿಡಿ ಕರ್ನಾಟಕದ ಸಾಂಪ್ರದಾಯಿಕ ಉಪ್ಪಿನಕಾಯಿಯ ತಳಿಯಾಗಿದ್ದು, ಇದಕ್ಕೆ ಭೌಗೋಳಿಕ ಸೂಚ್ಯಂಕ (ಜಿಐ) ಮಾನ್ಯತೆ ಸಿಕ್ಕಿದೆ. ಕರ್ನಾಟಕದಲ್ಲಿ ಮಲೆನಾಡು ಸೇರಿ ಮತ್ತಿತರ ಪ್ರದೇಶಗಳಲ್ಲಿ 250ಕ್ಕೂ ಹೆಚ್ಚು ಅಪ್ಪೆಮಿಡಿ ತಳಿಗಳಿವೆ. ಈ ಪೈಕಿ ಐಐಎಚ್‌ಆರ್ 100 ಅಪ್ಪೆಮಿಡಿ ತಳಿಗಳನ್ನು ಸಂಗ್ರಹಿಸಿದ್ದು, ಈ ತಳಿಗಳನ್ನು ಮೇಳದಲ್ಲಿ ಪ್ರದರ್ಶನಕ್ಕೆ ಇರಿಸಲಾಗಿದೆ.

‘ವಿನ್ಯಾಸ, ರುಚಿ ಮತ್ತು ಪರಿಮಳ ಅಪ್ಪೆಮಿಡಿಯ ವಿಶೇಷತೆಗಳು. ಈ ತಳಿಯ ಮಾವಿನ ಕಾಯಿಗಳನ್ನು ಉಪ್ಪಿನಕಾಯಿ ಮಾಡಲು ಇಡಿಯಾಗಿ ಬಳಸುವುದು ಮತ್ತೊಂದು ವಿಶೇಷ. ವರ್ಷಕ್ಕೆ 4 ರಿಂದ 5 ಸಾವಿರ ಟನ್ ಉಪ್ಪಿನಕಾಯಿಗೆ ಬಳಕೆಯಾಗುತ್ತದೆ. ರೈತರಿಗೆ ಹಾಗೂ ಬೆಳೆಗಾರರಿಗೆ ಅಪ್ಪೆಮಿಡಿ ಬಗ್ಗೆ ಸಮಗ್ರ ಮಾಹಿತಿ ತಿಳಿಸುವುದು ಈ ಮೇಳದ ಉದ್ದೇಶ’ ಎಂದು ಐಐಎಚ್‌ಆರ್ ನಿರ್ದೇಶಕ ಸಂಜಯ್‌ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಬಡ್ಡಿ ನೀಡದ ಅಂಚೆ ಇಲಾಖೆ ಹೈಕೋರ್ಟ್ ಅತೃಪ್ತಿ

ಬೆಂಗಳೂರು: ಎಚ್‌ಯುಎಫ್ ಪಿಪಿಎಫ್ ಉಳಿತಾಯ ಯೋಜನೆ ತಿದ್ದುಪ-ಡಿಯಾಗಿದ್ದರೂ ಅದರ ಅಡಿಯಲ್ಲಿ ಹಣ ಹೂಡಿಕೆ ಮಾಡಿಸಿಕೊಂಡು ಅದಕ್ಕೆ ಬಡ್ಡಿ ನೀಡದೇ ಹೋದ ಅಂಚೆ ಇಲಾಖೆಯ ಕ್ರಮಕ್ಕೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ಬೆಂಗಳೂರಿನ ಕೆ.ಶಂಕರ್ ಲಾಲ್ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ‘ಯೋಜನೆ ಅವಧಿ ಮುಗಿದಿದೆ ಎಂಬುದು ತಿಳಿದಿದ್ದರೂ ಠೇವಣಿ ಪಡೆಯಲಾಗಿದೆ. ತದನಂತರ 12 ವರ್ಷಗಳ ಕಾಲ ಸುಮ್ಮನಿದ್ದು ನೋಟಿಸ್ ಕಳುಹಿಸಲಾಗಿದೆ. ಇದು ನ್ಯಾಯೋಚಿತ ಕ್ರಮವಲ್ಲ. ಆದ್ದರಿಂದ, ಅರ್ಜಿದಾರರಿಗೆ ಬಡ್ಡಿ ಸಹಿತ ಹಣ ವಾಪಸ್ ನೀಡಬೇಕು’ ಎಂದು ಆದೇಶಿಸಿದೆ.

‘ಒಂದು ವೇಳೆ ಅಕ್ರಮವಾಗಿ ಖಾತೆ ತೆರೆದಿದ್ದರೆ ಅಥವಾ ಖಾತೆ ದಾರರು ಅದಕ್ಕೇನಾದರೂ ಹಣ ಹೂಡಿಕೆ ಮಾಡಿದ್ದಾರೆ ಎಂಬುದು ಕಂಡುಬಂದಿದ್ದರೆ ತಕ್ಷಣವೇ ಅದನ್ನು ಸರಿಪಡಿಸಲು ಪೋಸ್ಟ್ ಮಾಸ್ಟರ್ ಕ್ರಮ ಕೈಗೊಳ್ಳಬೇಕಿತ್ತು. ಆದರೆ, ಈ ರೀತಿ ಯಾವುದೇ ಕ್ರಮ ಕೈಗೊಳ್ಳದಿರುವು-ದು ನಿರ್ಲಕ್ಷ್ಯತನ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಎಚ್‌ಯುಎಫ್ (ಹಿಂದೂ ಅವಿಭಕ್ತ ಕುಟುಂಬ) ಪಿಪಿಎಫ್ (ಪಬ್ಲಿಕ್ ಪ್ರಾವಿಡೆಂಟ್ ಫಂಡ್) ಉಳಿತಾಯ ಯೋಜನೆ 2005ರಲ್ಲಿ ಮುಕ್ತಾಯವಾಗಿತ್ತು. ಅರ್ಜಿದಾರರು 2009ರಲ್ಲಿ ಅದೇ ಎಚ್‌ಯುಎಫ್ ಪಿಪಿಎಫ್ ಯೋಜನೆ ಅಡಿಯಲ್ಲಿ ಹಣ ಠೇವಣಿ ಇರಿಸಿದ್ದರು. ಅದು ಮಾರ್ಚ್ 2025ಕ್ಕೆ ಮುಕ್ತಾಯವಾಗಿ ಹಣ ಬರಬೇಕಿತ್ತು. ಆದರೆ, 12 ವರ್ಷದ ನಂತರ 2021ರಲ್ಲಿ ಅಂಚೆ ಮಾಸ್ಟರ್, ‘2005ರಲ್ಲಿ ಯೋಜನೆ ಅವಧಿ ಮುಗಿದು ಹೋಗಿದೆ. ಆನಂತರ ನೀವು ಹಣ ಆ ಯೋಜನೆಯ ಹೆಸರಿನಲ್ಲಿ ಠೇವಣಿ ಮಾಡಿದ್ದೀರಿ, ಹಾಗಾಗಿ ನಿಮಗೆ ಬಡ್ಡಿ ನೀಡಲಾಗದು‘ ಎಂದು ನೋಟಿಸ್ ನೀಡಿದ್ದರು.

ಅರ್ಜಿದಾರರು ಈ ನೋಟಿಸ್ ಅನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿ-ಲೇರಿದ್ದರು. ‘ಠೇವಣಿ ಖಾತೆ ತೆರೆಯುವಾಗ ಯಾವುದೇ ಮಾಹಿತಿ ನೀಡದೆ ತದನಂತರ ನೋಟಿಸ್ ಕಳುಹಿಸಿರುವುದು ನಿಯಮ ಬಾಹಿರ. ಆದ್ದರಿಂದ, ಬಡ್ಡಿ ಸಹಿತ ಹಣ ಹಿಂತಿರುಗಿಸುವಂತೆ ನಿರ್ದೇಶನ ನೀಡಬೇಕು’ ಎಂದು ಕೋರಿದ್ದರು.

ಛಾಯಾಚಿತ್ರ ಸ್ಪರ್ಧೆ: ಇಂದಿನಿಂದ ಹೆಸರು ನೋಂದಣಿ ಆರಂಭ

ಬೆಂಗಳೂರು: ಅಡವಿ ಅಲರ್ಟ್ ಫೌಂಡೇಶನ್‌ನಿಂದ ‘ಐ ಫಾರ್ ವೈಲ್ಡ್’ ಎಂಬ ಪರಿಕಲ್ಪನೆ ಅಡಿ ರಾಷ್ಟ್ರಮಟ್ಟದ ಛಾಯಾಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ.

ಇದೇ 13ರಿಂದ (ಗುರುವಾರ) ಸ್ಪರ್ಧೆಗೆ ನೋಂದಣಿ ಆರಂಭಗೊಳ್ಳಲಿ-ದೆ. ಮೇ 23ರಂದು ನೋಂದಣಿಗೆ ಕೊನೆ ದಿನವಾಗಿದೆ. ‘ಟೈಟಲ್’ ವಿಜೇತರಿಗೆ ₹ 25 ಸಾವಿರ, ಪ್ರಥಮ ಬಹುಮಾನ ₹ 15 ಸಾವಿರ, ದ್ವಿತೀಯ ಬಹುಮಾನ ₹ 10 ಸಾವಿರ, ತೃತೀಯ ಬಹುಮಾನ ₹ 5 ಸಾವಿರ ನೀಡಲಾಗುವುದು. ಪ್ರಮಾಣ ಪತ್ರ, ಆಕರ್ಷಕ ಉಡುಗೊರೆಗಳು ಇರಲಿವೆ. ವನ್ಯಜೀವಿ ಹಾಗೂ ಪ್ರಾಣಿ-ಮಾನವ ಸಂಘರ್ಷದ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: ಮೊ. 77606 74721

ಚಿತ್ರಾವಳಿ



ದಿವಂಗತ ನಟ ಡಾ.ರಾಜ್‌ಕುಮಾರ್ ಅವರ 17ನೇ ವರ್ಷದ ಪುಣ್ಯತಿಥಿ ಅಂಗವಾಗಿ ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ರಾಜ್ ಸಮಾಧಿಗೆ ಅಭಿಮಾನಿಗಳು ಬುಧವಾರ ಪೂಜೆ ಸಲ್ಲಿಸಿದರು —ಪ್ರಜಾವಾಣಿ ಚಿತ್ರ



ಶ್ರೀರಾಮಸೇವಾ ಮಂಡಳಿಯು ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ವಾರಿಜಾಶ್ರೀ ಅವರು ಬುಧವಾರ ಸಂಗೀತ ಕಛೇರಿ ನಡೆಸಿಕೊಟ್ಟರು. ಪಿಟೀಲು ವಾದಕ ಮತ್ತೂರು ಶ್ರೀನಿಧಿ ಸಾಥ್ ನೀಡಿದರು —ಪ್ರಜಾವಾಣಿ ಚಿತ್ರ

ಜೆಡಿಯು: 17 ಅಭ್ಯರ್ಥಿ ಘೋಷಣೆ

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆಗೆ 17 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಜೆಡಿ(ಯು) ಬುಧವಾರ ಬಿಡುಗಡೆ ಮಾಡಿದೆ.

ಅಭ್ಯರ್ಥಿಗಳು: ಶಿವಕುಮಾರ್ ಭದ್ರಯ್ಯ (ರಾಜಾಜಿನಗರ), ಎಂ. ಆನಂದ್ (ಗಾಂಧಿನಗರ), ಸೂರ್ಯಕಾಂತ ಪಾಟೀಲ್ (ದಾಸರಹಳ್ಳಿ), ಕಾರ್ತಿಕ್ (ಪುಲಕೇಶಿನಗರ), ಮೈನಾವತಿ (ಸರ್ವಜ್ಞನಗರ), ಲಕ್ಷ್ಮಿ (ರಾಜರಾಜೇಶ್ವರಿನಗರ), ಪ್ರಹ್ಲಾದ್ ಎಚ್.ಓ. (ಮಾಯಕೊಂಡ), ಗೋಪಾಲಕೃಷ್ಣ (ಮಹದೇವಪುರ), ರಾಮಯ್ಯ (ನೆಲಮಂಗಲ), ಶಂಕರಗೌಡ ಸಿ.ಜಿ. (ರಾಣೆಬೆನ್ನೂರು), ಶರಣ ಬಸಪ್ಪ (ಕಲಬುರಗಿ ಉತ್ತರ), ಕೆ.ಎನ್. ಶಿರಹಟ್ಟಿ (ಶಿರಹಟ್ಟಿ), ಶಶಿಕುಮಾರ್ ಗೌಡ (ಭದ್ರಾವತಿ), ನಾಗಲಿಂಗಪ್ಪ ಶಿವಪ್ಪ ಕುರ್ತಕೋಟಿ (ನವಲಗುಂದ), ಶಿವಕುಮಾರ್ (ಹನೂರು), ಸುಪ್ರೀತ್ ಕುಮಾರ್ ಪೂಜಾರಿ (ಮಂಗಳೂರು ಉತ್ತರ) ಮತ್ತು ಎಸ್.ಎಸ್. ರಡ್ಡೇರ (ಗದಗ) ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಜೆಡಿಯು ರಾಜ್ಯ ಘಟಕದ ಅಧ್ಯಕ್ಷ ಮಹಿಮ ಜೆ.ಎಚ್. ಪಟೇಲ್ ತಿಳಿಸಿದ್ದಾರೆ.

ಸಿಇಟಿ: 2.5 ಲಕ್ಷ ಅರ್ಜಿ, ತಿದ್ದುಪಡಿಗೆ ಎರಡು ದಿನ ಕಾಲಾವಕಾಶ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023–24ನೇ ಸಾಲಿನ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕಾಗಿ ಪರೀಕ್ಷೆ ಬರೆಯಲು (ಸಿಇಟಿ) 2.5 ಲಕ್ಷ ವಿದ್ಯಾರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸಿದ್ದು, ಮಾಹಿತಿ ತಿದ್ದುಪಡಿಗೆ ಏ.15ರ ಬೆಳಿಗ್ಗೆ 11ರವರೆಗೆ ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ಪ್ರವರ್ಗ ಮೀಸಲಾತಿ, ವಾರ್ಷಿಕ ಆದಾಯ, ಕನ್ನಡ ಮಾಧ್ಯಮ, ಗ್ರಾಮೀಣ ಅಭ್ಯರ್ಥಿ, ವಿಶೇಷ ವರ್ಗ ಮತ್ತಿತರ ಮಾಹಿತಿಗಳಲ್ಲಿ ತಪ್ಪುಗಳಿದ್ದರೆ ಸರಿಪಡಿಸಬಹುದು. ತಿದ್ದುಪಡಿ ಬಳಿಕ ‘ಡಿಕ್ಲರೇಷನ್ ಬಟನ್’ ಆಯ್ಕೆ ಮಾಡಿಕೊಂಡು ‘ಫೈನಲ್ ಸಬ್‌ಮಿಶನ್’ ನೀಡಬೇಕು. ನಂತರ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇ-ಕು. ತಿದ್ದುಪಡಿ ಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ವಿದ್ಯಾರ್ಥಿಗಳು ತಮ್ಮ ಸುರಕ್ಷತೆಗಾಗಿ ಇಟ್ಟುಕೊಳ್ಳ-ಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಸಲಹೆ ನೀಡಿದ್ದಾರೆ.

ಅಭ್ಯರ್ಥಿಯ ಹೆಸರು, ತಂದೆ-ತಾಯಿಯ ಹೆಸರು, ಜನ್ಮ ದಿನಾಂಕ ಇತ್ಯಾದಿಗಳ ಬದಲಾವಣೆಗೆ ಅವಕಾಶ ಇಲ್ಲ. ಇದರಲ್ಲೇನಾದರೂ ಬದಲಾ-ವಣೆಗಳಿದ್ದಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಸಂಪರ್ಕಿಸಬೇಕು. ಆದರೆ, ಸಿಬಿಎಸ್‌ಇ, ಸಿಐಎಸ್‌ಸಿಇ ಪಠ್ಯಕ್ರಮಗಳಲ್ಲಿ 10ನೇ ತರಗತಿ ಓದಿರುವವರು ಈ ವಿವರಗಳನ್ನು ತಮ್ಮ ಅರ್ಜಿಯಲ್ಲಿ ತಿದ್ದುಪಡಿ ಮಾಡಿಕೊಳ್ಳಬ-ಹುದು ಎಂದು ವಿವರ ನೀಡಿದ್ದಾರೆ.

ರಾಷ್ಟ್ರೀಯತೆಯನ್ನು ತಿದ್ದುಪಡಿ ಮಾಡಿ ಕೊಳ್ಳಲು ಬಯಸುವ ಒಸಿಐ ಅಭ್ಯರ್ಥಿಗಳು ಪ್ರಾಧಿಕಾರದ ಕಾರ್ಯ-ನಿರ್ವಾಹಕ ನಿರ್ದೇಶಕರ ಹೆಸರಿನಲ್ಲಿ ನಿಗದಿತ ಮೊತ್ತದ ಡಿಮ್ಯಾಂಡ್ ಡ್ರಾಫ್ಟ್ ಪಡೆದುಕೊಂಡು, ಏ.13 ಮತ್ತು 15ರಂದು ನೇರವಾಗಿ ಪ್ರಾಧಿಕಾರದ ಕಚೇರಿಗೆ ಹಾಜರಾಗಬೇಕು ಎಂದು ಸೂಚಿಸಿದ್ದಾರೆ.

ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಲು ಕಳೆದ ಸಾಲಿನಲ್ಲಿ 2.13 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದವು. ಈ ಬಾರಿ ಪಿಯುನಲ್ಲಿ 2.06 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಪುನರಾವರ್ತಿ-ತರೂ ಸೇರಿದಂತೆ ಈ ಬಾರಿ ಅತಿಹೆಚ್ಚು ವಿದ್ಯಾರ್ಥಿಗಳು ಸಿಇಟಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಮೇ 20ರಿಂದ22ರವರೆಗೆ ಸಿಇಟಿ ನಡೆಯಲಿದೆ.

ರಾಮೋಜಿ ರಾವ್‌ಗೆ ಇ.ಡಿ ಉರುಳು?

ನವದೆಹಲಿ (ಪಿಟಿಐ): ಚಿಟ್ ಫಂಡ್ ವ್ಯವಹಾರ ಕಾಯ್ದೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿ ಉಲ್ಲಂಘಿಸಿರುವ ಮಾರ್ಗದರ್ಶಿ ಚಿಟ್ ಫಂಡ್ ಕಂಪನಿಯ (ಎಂಸಿಎಫ್‌ಪಿಎಲ್) ಅವ್ಯವಹಾರದ ಬಗ್ಗೆ ಸಮಗ್ರ ತನಿಖೆ ನಡೆಸಲು ಆಂಧ್ರಪ್ರದೇಶದ ಸಿಐಡಿ ವಿಭಾಗವು ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಆದಾಯ ತೆರಿಗೆ ಇಲಾಖೆಗೆ ಪತ್ರ ಬರೆದಿದೆ.

ಮಾರ್ಗದರ್ಶಿ ಕಂಪನಿಯ ಅಧ್ಯಕ್ಷ ರಾಮೋಜಿ ರಾವ್, ಅವರ ಸೊಸೆ ಶೈಲಜಾ ಕಿರಣ್ ಸೇರಿದಂತೆ ಐವರ ವಿರುದ್ಧ ಈ ಅವ್ಯವಹಾರ ಪ್ರಕರಣ ಸಂಬಂಧ ಒಟ್ಟು ಏಳು ಎಫ್‌ಐಆರ್‌ಗಳು ದಾಖಲಾಗಿವೆ. ಠೇವಣಿದಾರರಿಂದ ಸಂಗ್ರಹಿಸಿದ ಠೇವಣಿಯನ್ನು ಷೇರು ಮಾರುಕಟ್ಟೆಯಲ್ಲಿ ವಿನಿಯೋಗಿಸಿದ ಆರೋಪ ಇವರ ಮೇಲಿದೆ. ರಾಮೋಜಿ ರಾವ್ ಅವರಿಗೆ ಇ.ಡಿ ಹಾಗೂ ಆದಾಯ ತೆರಿಗೆ ಇಲಾಖೆಯ ಉರುಳು ಸುತ್ತಿಕೊಳ್ಳುವ ಸಾಧ್ಯತೆ ಇದೆ.

ಜಾತ್ರೆಗೆ ಜನಪದ ಕಲಾ ತಂಡಗಳ ಮೆರುಗು

ವೀರಭದ್ರಸ್ವಾಮಿ ಮಹಾರಥೋತ್ಸವ



ವೀರಭದ್ರಸ್ವಾಮಿ ಮಹಾರಥೋತ್ಸವ, ಪಲ್ಲಕ್ಕಿ ಉತ್ಸವದಲ್ಲಿ ಸೇರಿದ್ದ ಜನಸ್ತೋಮ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕನ್ನಲ್ಲಿ ಗ್ರಾಮದಲ್ಲಿ ವೀರಭದ್ರಸ್ವಾಮಿ ಜಾತ್ರಾ ಮಹೋತ್ಸವ, ಮಹಾರಥೋತ್ಸವ, ಪಲ್ಲಕ್ಕಿ ಉತ್ಸವ, ಅಗ್ನಿಕೊಂಡ ಹಾಗೂ ಬೆಳ್ಳಿ ಪಲ್ಲಕ್ಕಿ ಉತ್ಸವಗಳು ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.

ರಥೋತ್ಸವ ಸಂದರ್ಭದಲ್ಲಿ ವಿವಿಧ ಜನಪದ ಕಲಾ ತಂಡಗಳ ಕಲಾವಿದರು ನೃತ್ಯ ಪ್ರದರ್ಶಿಸಿ ರಂಜಿಸಿದರು. ರಾಜ್ಯದ ವಿವಿಧೆಡೆಯಿಂದ ಬಂದ ಭಕ್ತರು ದೇವರ ದರ್ಶನ ಪಡೆದರು. ಕೆಲವರು ರಥೋತ್ಸವ ಸಮಯದಲ್ಲಿ ಜನಪದ ಕಲಾವಿದರ ನೃತ್ಯಕ್ಕೆ ಹೆಜ್ಜೆ ಹಾಕಿ, ಸಂಭ್ರಮಿಸಿದರು. ತಮಟೆ ವಾದ್ಯ, ವೀರಗಾಸೆ, ವೀರಭದ್ರನ ಕುಣಿತ, ಕಂಸಾಳೆ ಹಾಗೂ ಗೊರವನ ಕುಣಿತವು ರಥೋತ್ಸವದ ಮೆರುಗನ್ನು ಹೆಚ್ಚಿಸಿದವು.

ದಾಸೋಹ ಸಮಿತಿ ಅಧ್ಯಕ್ಷ ಎಸ್. ಶಾಂತರಾಜು, ಉಪಾಧ್ಯಕ್ಷ ಕೆ.ಪಿ. ಷಣ್ಮುಗಾನಂದ, ಎಂ.ಜಯಣ್ಣ, ಕಾರ್ಯದರ್ಶಿಗಳಾದ ಜಿ.ಸಿದ್ದಲಿಂಗಸ್ವಾ-ಮಿ, ಎಂ.ಶಾಂತಪ್ಪ, ಖಜಾಂಚಿ ಎನ್. ರಾಜಣ್ಣ, ಕೆ.ವಿ.ಪರಮೇಶ್ ಇದ್ದರು. ದೇವರಿಗೆ ಮುಂಜಾನೆ ಕುಂಭಾಭಿಷೇಕ, ನಡೆ-ಮುಡಿ ಆರತಿ ಉತ್ಸವ, ಅಗ್ನಿಕೊಂಡ ಪೂಜೆ ನೆರವೇರಿದ ಬಳಿಕ ಅಗ್ನಿ ಕೊಂಡೋತ್ಸವ ನಡೆಯಿತು.

ಕೆಎಂಎಫ್ ವಿಶ್ವಾಸಕ್ಕೆ ಧಕ್ಕೆ: ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಅಮೂಲ್ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 'ಅಮೂಲ್' ಹಾಲು ಹಾಗೂ ಮೊಸರು ಸೇರಿದಂತೆ ಆ ಸಂಸ್ಥೆಯ ಉತ್ಪನ್ನಗಳನ್ನು ಮಾರಾಟಕ್ಕೆ ಅವಕಾಶ ನೀಡಿ ರಾಜ್ಯದ ಹೆಮ್ಮೆಯ ಸಂಸ್ಥೆ ಕೆಎಂಎಫ್‌ನ ವಿಶ್ವಾಸಕ್ಕೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ. ರಾಜ್ಯ ಹಾಗೂ ಕೇಂದ್ರದ ಬಿಜೆಪಿ ಸರ್ಕಾರಗಳು ರೈತರಿಗೆ ದ್ರೋಹ ಎಸಗುತ್ತಿವೆ ಎಂದು ಆರೋಪಿಸಿ, ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಗುಜರಾತ್‌ನ 'ಅಮೂಲ್' ರಾಜ್ಯ ಪ್ರವೇಶಿಸಿ ನಂದಿನಿ ಉತ್ಪನ್ನಗಳ ಮಾರಾಟಕ್ಕೆ ತಡೆಯೊಡ್ಡಿದೆ. ಗುಜರಾತ್ ಮಾದರಿಗಳು ರಾಜ್ಯದಲ್ಲಿ ರಾಜಕೀಯ ವ್ಯವಸ್ಥೆ ಕಲುಷಿತಗೊಳಿಸಿದೆ. ಈಗ ನಂದಿನಿ ಮೇಲೂ ಅವರ ಕಣ್ಣು ಬಿದ್ದಿದೆ ಎಂದು ಕಾರ್ಯಕರ್ತರು ದೂರಿದರು.

'ಅಮೂಲ್ ಉತ್ಪನ್ನಗಳಿಗೆ ರಾಜ್ಯದಲ್ಲಿ ನಿಷೇಧ ಹೇರಬೇಕು. ಯಾವುದೇ ಕಾರಣಕ್ಕೆ ಅಮೂಲ್ ಹಾಲು, ಮೊಸರು ಮಾರಾಟಕ್ಕೆ ಅವಕಾಶ ನೀಡುವುದಿಲ್ಲ' ಎಂದು ಎಚ್ಚರಿಸಿದರು.



ಅಮೂಲ್ ಸಂಸ್ಥೆಯ ಹಾಲು ಹಾಗೂ ಮೊಸರು ಮಾರಾಟಕ್ಕೆ ರಾಜ್ಯದಲ್ಲಿ ಅವಕಾಶ ನೀಡಬಾರದು ಎಂದು ಆಗ್ರಹಿಸಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ನಂದಿನಿ ಸಂಸ್ಥೆ ಉತ್ಪಾದಿಸುವ ಗುಣಮಟ್ಟದ ಪದಾರ್ಥಗಳು ಇಡೀ ವಿಶ್ವಕ್ಕೆ ಮಾದರಿ. ಕೆಎಂಎಫ್‌ಗೆ ಪ್ರೋತ್ಸಾಹ ನೀಡುವುದನ್ನು ಬಿಟ್ಟು ಸಂಸ್ಥೆಯ ಕತ್ತನ್ನೇ ಕೊಯ್ದು ಹಾಕುವ ಪ್ರಯತ್ನಗಳು ನಡೆಯುತ್ತಿವೆ. ವಿಜಯಾ ಬ್ಯಾಂಕ್ ಹಾಗೂ ಮೈಸೂರು ಬ್ಯಾಂಕ್ ಅನ್ನು ಬೇರೆ ಬ್ಯಾಂಕ್‌ನ ಜತೆಗೆ ವಿಲೀನಗೊಳಿಸಿ ಆರ್ಥಿಕವಾಗಿ ಸದೃಢವಾಗಿದ್ದ ಸಂಸ್ಥೆ ಹಾಳು ಮಾಡಿದ ಕೀರ್ತಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರಕ್ಕೆ ಸಲ್ಲುತ್ತದೆ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಹೇಳಿದರು.

ಮುಖಂಡರಾದ ಬಿ.ಮಂಜುನಾಥ್, ಹೇಮರಾಜು, ಅನಿಲ್ ಕುಮಾರ್, ಪ್ರಕಾಶ್, ವೆಂಕಟೇಶ್, ಚಂದ್ರಶೇಖರ್, ಪ್ರಶಾಂತ್, ಚಿನ್ನಿ ಪ್ರಕಾಶ್ ಇದ್ದರು.

ಕಿರುಕುಳ: ಪಿಎಸ್ಐ ಅಮಾನತು

ಸಂತ್ರಸ್ತೆಯಿಂದ ಟ್ವೀಟ್: ಮಂಜುನಾಥ್ ಸ್ವಾಮಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರ ಸಂಬಂಧ ಹೇಳಿಕೆ ನೀಡಲು ಠಾಣೆಗೆ ಬಂದಿದ್ದ ಮಹಿಳೆ ಜತೆಗೆ ಅನುಚಿತವಾಗಿ ವರ್ತಿಸಿದ್ದ ಸದ್ದುಗುಂಟೆಪಾಳ್ಯ ಪೊಲೀಸ್ ಠಾಣೆಯ ಪಿಎಸ್ಐ ಮಂಜುನಾಥ್ ಸ್ವಾಮಿ ಅವರನ್ನು ಅಮಾನತು ಮಾಡಲಾಗಿದೆ.

ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ. ಬಾಬಾ ಬುಧವಾರ ಅಮಾನತು ಮಾಡಿ ಆದೇಶಿಸಿದ್ದಾರೆ. 'ಮಂಜುನಾಥ್ ವಿರುದ್ಧ ಕಲಂ 354ಎ ಹಾಗೂ 354ಡಿ ಐಪಿಸಿ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಬಾಬಾ ತಿಳಿಸಿದ್ದಾರೆ.

'ಏಪ್ರಿಲ್ 10ರಂದು ಮಹಿಳೆಯೊಬ್ಬರು ತನ್ನ ಸಹೋದರನ ಸ್ನೇಹಿತನ ಪ್ರಕರಣ ಸಂಬಂಧ ಹೇಳಿಕೆ ನೀಡಲು ಬಂದಿದ್ದರು. ಅಂದು ಪಿಎಸ್ಐ ಆಕೆಯ ಮೈಕೈ ಮುಟ್ಟಿ ಅನುಚಿತವಾಗಿ ವರ್ತಿಸಿದ್ದರು' ಎಂದು ಸರಣಿ ಟ್ವೀಟ್ ಮಾಡಿ ಅದನ್ನು ಡಿಸಿಪಿ ಅವರಿಗೆ ಟ್ಯಾಗ್ ಮಾಡಿದ್ದರು. ಅದನ್ನು ಗಮನಿಸಿದ ಡಿಸಿಪಿ ಯುವತಿ ಪತ್ತೆ ಮಾಡಿ ಆಕೆಯಿಂದ ಏಪ್ರಿಲ್ 11ರಂದು ಲಿಖಿತ ದೂರು ಸ್ವೀಕರಿಸಿ ತನಿಖೆ ನಡೆಸಿದ್ದರು.

'ಮೇಲ್ನೋಟಕ್ಕೆ ಆರೋಪ ಸಾಬೀತಾಗಿದ್ದರಿಂದ ಅಮಾನತು ಮಾಡಲಾಗಿದೆ. ತನಿಖೆ ನಡೆಸಲಾಗುತ್ತಿದೆ' ಎಂದು ಡಿಸಿಪಿ ತಿಳಿಸಿದ್ದಾರೆ.

ಟ್ವೀಟ್‌ನಲ್ಲಿ ಏನಿತ್ತು?: 'ವಿಚ್ಛೇದನ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಸದ್ದುಗುಂಟೆಪಾಳ್ಯ ಪೊಲೀಸ್ ಠಾಣೆಗೆ ತೆರಳಿದ್ದೆ. ಪಿಎಸ್ಐ ಕ್ಯಾಬಿನ್‌ನಲ್ಲಿ ಚರ್ಚಿಸುತ್ತಿದ್ದೆ. ಆರಂಭದಲ್ಲಿ ಅವರು ಸ್ನೇಹಿಯಾಗಿಯೇ ಮಾತನಾಡಿದ್ದರು. ನಂತರ, ಅವರ ಉದ್ದೇಶ ಅರ್ಥವಾಯಿತು. ನನ್ನ ಜತೆಗೆ ಕೆಟ್ಟದಾಗಿ ನಡೆದುಕೊಂಡರು. ಹೇಳಿಕೆ ಪಡೆಯುವಾಗ ನನ್ನ ಕೈಹಿಡಿದು ಎಳೆದರು ಹಾಗೂ ದೇಹವನ್ನು ಸ್ಪರ್ಶಿಸಿದರು. ಆಗ ಭಯಪಟ್ಟುಕೊಂಡೆ. ಬಳಿಕ, ಮೊಬೈಲ್ ನಂಬರ್ ತೆಗೆದುಕೊಂಡು ಕರೆ ಮಾಡಲು ಹೇಳಿದರು' ಎಂದು ಟ್ವೀಟ್‌ನಲ್ಲಿ ಆಕೆ ಅಳಲು ತೋಡಿಕೊಂಡಿದ್ದರು.

'ಅದೇ ವೇಳೆಗೆ ನನ್ನ ಮೊಬೈಲ್‌ಗೆ ಕರೆ ಬಂದಾಗ ಮಾತನಾಡಲು ಹೊರಗೆ ತೆರಳಲು ಮುಂದಾದೆ. ಆಗ ನನ್ನ ಸೊಂಟ ಹಿಡಿದರು. ಮತ್ತಷ್ಟು ಆಘಾತಕ್ಕೆ ಒಳಗಾದೆ. ಇನ್‌ಸ್ಪೆಕ್ಟರ್ ಕೊಠಡಿಗೆ ತೆರಳಿ ದೂರು ನೀಡಲು ಸಾಧ್ಯವಾಗಿರಲಿಲ್ಲ. ಅಲ್ಲದೇ ಮನೆಗೆ ತೆರಳಿದ ಮೇಲೆ ಪೋಟೊ ಕಳುಹಿಸುವಂತೆಯೂ ಒತ್ತಾಯಿಸಿದ್ದರು. ಜತೆಗೆ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ ಕಿರುಕುಳ ನೀಡಿದ್ದರು' ಎಂದು ನೋವು ತೋಡಿಕೊಂಡಿದ್ದರು.

ಜೀವ ಬೆದರಿಕೆ ಪ್ರಕರಣ ಮುಂದುವರಿದ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳು ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತರಾಜ್ ವಿರುದ್ಧ ಹೂಡಲಾಗಿರುವ ಜೀವ ಬೆದರಿಕೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದುವರಿದ ತನಿಖೆ ನಡೆಸಲು ಯಶವಂತಪುರ ವಲಯ ಎಸಿಪಿಗೆ 24ನೇ ಎಸಿಎಂಎಂ ನ್ಯಾಯಾಲಯ ಆದೇಶಿಸಿದೆ.

ಪ್ರಕರಣದಲ್ಲಿ ಪೊಲೀಸರು ಸಲ್ಲಿಸಿದ್ದ 'ಸಿ' ಅಂತಿಮ ವರದಿಯನ್ನು ವಿರೋಧಿಸಿ ಫಿರ್ಯಾದುದಾರರು ಸಲ್ಲಿಸಿದ್ದ ಪ್ರತಿಭಟನಾತ್ಮಕ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ಬಿ.ಸಿ. ಚಂದ್ರಶೇಖರ್ ಪುರಸ್ಕರಿಸಿದ್ದಾರೆ.

ವಿಚಾರಣೆ ವೇಳೆ ಫಿರ್ಯಾದುದಾರರ ಪರ ವಾದ ಮಂಡಿಸಿದ್ದ ವಕೀಲ ಸಿ.ಎಚ್ ಹನುಮಂತರಾಯ ಅವರು, 'ದೂರು ಸಲ್ಲಿಸುವಾಗಲೇ ಆರೋಪಿಯ ಹೆಸರನ್ನು ಉಲ್ಲೇಖಿಸಿದ್ದರೂ, ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳು ಲಭ್ಯವಿದ್ದರೂ, ಯಾವುದನ್ನೂ ಪರಿಗಣಿಸದೆ, 'ಸಿ' ಅಂತಿಮ ವರದಿಯನ್ನು ಸಲ್ಲಿಸಿರುವುದು ತಪ್ಪು. ಹೀಗಾಗಿ, ಪ್ರಕರಣದ ತನಿಖೆ ಮುಂದುವರಿಸಲು ಪೊಲೀಸರಿಗೆ ನಿರ್ದೇಶಿಸಬೇಕು' ಕೋರಿದ್ದರು. ಇದನ್ನು ಮಾನ್ಯ ಮಾಡಿರುವ ನ್ಯಾಯಾಧೀಶರು ಈ ಕುರಿತಂತೆ ಆದೇಶಿಸಿದ್ದಾರೆ.

ಪ್ರಕರಣವೇನು?: ಮತ್ತಿಕೆರೆಯ ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆಯಲ್ಲಿ ಉಸ್ತುವಾರಿ ಮುಖ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಬಿ.ಆರ್. ಮುರಳೀಧರ ಅವರು, ಅಂದು ಬಿಬಿಎಂಪಿ ಕಂದಾಯ ಪರಿವೀಕ್ಷಕ ಹಾಗೂ ಉಪವಿಭಾಗಾಧಿಕಾರಿ ಕಚೇರಿಯ ಜಾಹೀರಾತು ವಿಭಾಗದ ನೌಕರರಾಗಿದ್ದ ಅಮೃತರಾಜ್, 'ನನ್ನ ಮೇಲೆ ಕ್ರಿಕೆಟ್ ಬ್ಯಾಟ್‌ನಿಂದ ಹಲ್ಲೆ ಮಾಡಿ ಮೂರು ಹಲ್ಲುಗಳನ್ನು ಮುರಿದು, ಕೊಲೆ ಯತ್ನ ನಡೆಸಿ ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಪ್ರಕರಣ ದಾಖಲಿಸಿದ್ದರು. ಈ ಘಟನೆ ನಡೆದ ಸಂದರ್ಭದಲ್ಲಿ ಅಮೃತರಾಜ್, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ನಿರ್ದೇಶಕರಾಗಿದ್ದರು.

ಇನ್‌ಸ್ಪೆಕ್ಟರ್ ವರ್ಗಾವಣೆಗೆ ಜೆಡಿಎಸ್ ಒತ್ತಾಯ

ಬೆಂಗಳೂರು: ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೂವರು ಇನ್‌ಸ್ಪೆಕ್ಟರ್‌ಗಳು ಸ್ಥಳೀಯ ಶಾಸಕರ ಆದೇಶದಂತೆ ಕೆಲಸ ಮಾಡುತ್ತಿದ್ದು ಅವರನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ರಾಜ್ಯ ಚುನಾವಣೆ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

ತಾವರಕೆರೆ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಬಿ.ರಾಮಪ್ಪ ಗುತ್ತೇದಾರ್, ಕಗ್ಗಲೀಪುರದ ಆರ್.ವಿಜಯಕುಮಾರ್, ತಲಘಟ್ಟಪುರದ ಎನ್.ಜಗದೀಶ್ ಅವರನ್ನು ವರ್ಗಾವಣೆ ಮಾಡುವಂತೆ ಪತ್ರದಲ್ಲಿ ಕೋರಿದ್ದಾರೆ.

ವಿದ್ಯುತ್ ತಂತಿ ಸ್ಪರ್ಶ ಕೇರಳದ ವ್ಯಕ್ತಿ ಸಾವು

ಬೆಂಗಳೂರು: ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಕೇರಳ ರಾಜ್ಯದ ಅಕ್ಬರ್ ಅಲಿ (36) ಎಂಬುವವರು ಮೃತಪಟ್ಟಿದ್ದಾರೆ.

ಅಕ್ಬರ್ ಅವರು ಕೇರಳದಲ್ಲಿ ಮೊಬೈಲ್ ಅಂಗಡಿ ನಡೆಸುತ್ತಿದ್ದರು. ಮೊಬೈಲ್‌ನ ಬಿಡಿಭಾಗಗಳನ್ನು ಖರೀದಿಸಲು ಅವರು ನಗರಕ್ಕೆ ಬಂದಿದ್ದರು. ಮಂಗಳವಾರ ರಾತ್ರಿ ಮೆಜೆಸ್ಟಿಕ್ ಬಂದಿದ್ದರು. ಅಲ್ಲಿಂದ ಹೊಸೂರಿಗೆ ತೆರಳಿದ್ದರು. ಹೊಸೂರು ಮುಖ್ಯರಸ್ತೆಯ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಸಮೀಪ ರಸ್ತೆ ದಾಟಲು ಮುಂದಾದ ವೇಳೆ ರಸ್ತೆ ವಿಭಜಕದಲ್ಲಿ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟಿದ್ದಾರೆ. ಅಲ್ಲದೇ ಮತ್ತೊಬ್ಬರಿಗೂ ವಿದ್ಯುತ್ ತಂತಿ ಸ್ಪರ್ಶಿಸಿದ್ದು ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತಂತಿಯು ಹೊರಚಾಚಿತ್ತು. ಇದರಿಂದ ಅವಘಡ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಾಲಕನ ಕತ್ತರಿಸಿದ ಕೈ ಮರುಜೋಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಲ್ಲು ಕತ್ತರಿಸುವ ವೇಳೆ ಯಂತ್ರಕ್ಕೆ ಸಿಲುಕಿ, ಕತ್ತರಿಸಿದ 11 ವರ್ಷದ ಬಾಲಕನ ಕೈಯನ್ನು ಮರುಜೋಡಿಸುವಲ್ಲಿ ನಾರಾಯಣ ಹೆಲ್ತ್ ವೈದ್ಯರು ಯಶಸ್ವಿಯಾಗಿದ್ದಾರೆ.

ಆಂಧ್ರಪ್ರದೇಶದ ಕುಪ್ಪಂನ ಚರಣ್ ಎಂಬ ಬಾಲಕ, ಹುಲ್ಲು ಕತ್ತರಿಸುವ ಯಂತ್ರದಲ್ಲಿನ ಹುಲ್ಲು ಕಡ್ಡಿಗಳನ್ನು ತೆಗೆಯುವ ವೇಳೆ ಕೈ ಕತ್ತರಿಸಿಕೊಂಡಿದ್ದ. ಸ್ಥಳೀಯ ವೈದ್ಯಕೀಯ ಕಾಲೇಜಿನಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ನಾರಾಯಣ ಹೆಲ್ತ್ ಸಿಟಿಗೆ ಶಿಫಾರಸು ಮಾಡಲಾಯಿತು. ನಿಗದಿತ ಅವಧಿಯೊಳಗೆ ಆಸ್ಪತ್ರೆಗೆ ಕರೆತಂದಿದ್ದರಿಂದ ಡಾ.ರವಿ ಡಿ.ಆರ್. ನೇತೃತ್ವದಲ್ಲಿ ವೈದ್ಯರ ತಂಡವು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ, ಕೈಯನ್ನು ಮರುಜೋಡಿಸಿತು ಎಂದು ಆಸ್ಪತ್ರೆ ಹೇಳಿದೆ.

ಈ ಪ್ರಕರಣದ ಬಗ್ಗೆ ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ. ರವಿ ಡಿ.ಆರ್., 'ಕೈ ತುಂಡಾದ ಆರು ಗಂಟೆಯೊಳಗೆ ಶಸ್ತ್ರಚಿಕಿತ್ಸೆ ನಡೆಸಿದಲ್ಲಿ ಮರುಜೋಡಣೆ ಯಶಸ್ವಿ ಸಾಧ್ಯತೆ ಹೆಚ್ಚಿರುತ್ತದೆ. ಬಾಲಕನ ಕೈ ನುಜ್ಜುಗುಜ್ಜಾಗಿತ್ತು, ಇದರಿಂದಾಗಿ ಶಸ್ತ್ರಚಿಕಿತ್ಸೆ ಸವಾಲಾಗಿತ್ತು. ಶಸ್ತ್ರಚಿಕಿತ್ಸೆ ನಡೆಸಿದ 10 ದಿನಗಳು ತೀವ್ರ ನಿಗಾದಲ್ಲಿ ಇರಿಸಲಾಗಿತ್ತು. ಶಸ್ತ್ರಚಿಕಿತ್ಸೆಯ ಬಳಿಕ ಬಾಲಕನಿಗೆ ಯಾವುದೇ ಸಮಸ್ಯೆ ಕಾಣಿಸಿಕೊಂಡಿಲ್ಲ' ಎಂದು ತಿಳಿಸಿದರು.

'ತುಂಡಾದ ಅಂಗ ಕೆಲ ಗಂಟೆಗಳವರೆಗೂ ಬದುಕಿರಲಿದೆ. ನಿಗದಿತ ಅವಧಿಯೊಳಗೆ ಅಂಗವನ್ನು ತೇವಾಂಶವಿರುವ ಬಟ್ಟೆಯಲ್ಲಿ ಸುತ್ತಿ, ಜೋಪಾನವಾಗಿ ಆಸ್ಪತ್ರೆಗೆ ತಂದಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಮರುಜೋಡಣೆ ಮಾಡಬಹುದು' ಎಂದು ಹೇಳಿದರು.

ನಿಧನ ವಾರ್ತೆ

ಡಾ. ಶಾರದಾ ವೆಂಕಟಸುಬ್ಬಯ್ಯ



ಬೆಂಗಳೂರು: ರಂಗಭೂಮಿ ಕಲಾವಿದೆ, ಹೋಮಿಯೋಪಥಿ ವೈದ್ಯೆ ಡಾ. ಶಾರದಾ ವೆಂಕಟಸುಬ್ಬಯ್ಯ (84) ಅವರು ನಗರದಲ್ಲಿ ಬುಧವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ರಂಗಭೂಮಿ ನಿರ್ದೇಶಕರಾಗಿದ್ದ ಅವರ ಪತಿ ಎಚ್.ವಿ. ವೆಂಕಟಸುಬ್ಬಯ್ಯ ಅವರು ಕಳೆದ ವರ್ಷ ನಿಧನರಾಗಿದ್ದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

ರಂಗ ಸಂಪದ ತಂಡದ ನಾಟಕಗಳಲ್ಲಿ ಶಾರದಾ ನಟನೆ ಮಾಡಿದ್ದರು. ಮಲ್ಲೇಶ್ವರದಲ್ಲಿದ್ದ ಅವರ ಹನೇಮನ್ ಹೋಮಿಯೋ ಕ್ಲಿನಿಕ್ ಪ್ರಸಿದ್ಧವಾಗಿತ್ತು. ಹಲವು ವೈದ್ಯ ವಿದ್ಯಾರ್ಥಿಗಳಿಗೆ ಅವರು ಹೋಮಿಯೋಪಥಿ ಚಿಕಿತ್ಸೆ ಬಗ್ಗೆ ಮಾರ್ಗದರ್ಶನ ಮಾಡಿದ್ದರು.

ಕೆ.ಜಿ. ಹೊಸಹಳ್ಳಿ ಯುವಕನ ಕೊಲೆ ಪ್ರಕರಣ

ಆರೋಪಿ ಸಂಬಂಧಿಕರ ಮನೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಕೆ.ಜಿ. ಹೊಸಹಳ್ಳಿ ಗ್ರಾಮದಲ್ಲಿ ಮಂಗಳವಾರ ಮಧ್ಯರಾತ್ರಿ ಉದ್ರಿಕ್ತರ ಗುಂಪೊಂದು ಗ್ರಾಮದಲ್ಲಿನ ಮನೆಗೆ ಬೆಂಕಿ ಇಟ್ಟಿದೆ. ಮನೆಯಲ್ಲಿನ ಲಕ್ಷಾಂತರ ರೂಪಾಯಿ ಮೌಲ್ಯದ ಪೀಠೋಪಕರಣ, ಬೈಕ್ ಬೆಂಕಿಗೆ ಆಹುತಿ ಆಗಿವೆ.

ಕೆ.ಜಿ. ಹೊಸಹಳ್ಳಿಯಲ್ಲಿ ಮಂಗಳವಾರ ಮಧ್ಯಾಹ್ನ ಅಶ್ವತ್ಥ ಎಂಬ ಯುವಕನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಪ್ರೇಮ ವಿವಾಹದ ಹಿನ್ನೆಲೆಯಲ್ಲಿ ಸ್ವಂತ ಭಾವಮೈದುನ ಹಾಗೂ ಸಹಚರರು ಭಾವನನ್ನು ಹತ್ಯೆ ಮಾಡಿದ್ದರು.

ಕೊಲೆ ಆರೋಪಿಯ ದೊಡ್ಡಮ್ಮ ಮಹದೇವಮ್ಮ ಎಂಬುವರ ಮನೆ ಕೆ.ಜಿ. ಹೊಸಹಳ್ಳಿಯಲ್ಲಿದೆ. ಸುದ್ದಿ ತಿಳಿಯುತ್ತಲೇ ಮಹದೇವಮ್ಮ ಮತ್ತು ಕುಟುಂಬಸ್ಥರು ಮನೆ ತೊರೆದಿದ್ದರು. ಕೊಲೆಗೆ ಅವರ ಪ್ರಚೋದನೆ ಕಾರಣ ಎಂಬ ಅನುಮಾನದ ಹಿನ್ನೆಲೆಯಲ್ಲಿ ಗ್ರಾಮದ ಕೆಲವರು ಮನೆಗೆ ಬೆಂಕಿ ಹಾಕಿದ್ದರು.

ಘಟನೆಯಿಂದ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣ ಆಗಿತ್ತು. ಘಟನೆ ಸಂಬಂಧ ಏಳು ಮಂದಿಯನ್ನು ವಶಕ್ಕೆ ಪಡೆಯಲಾಗಿದ್ದು, ಸ್ಥಳದಲ್ಲಿ 100ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿತ್ತು.

ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಡಿವೈಎಸ್‌ಪಿ ದಿನಕರ್ ಶೆಟ್ಟಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬುಧವಾರ ಬೆಳಿಗ್ಗೆ ಅಶ್ವತ್ಥ ಅಂತ್ಯಕ್ರಿಯೆಯು ಗ್ರಾಮದಲ್ಲಿ ನಡೆಯಿತು.

ರೌಡಿ ಕೊಲೆ: ಐವರ ಬಂಧನ

ಬೆಂಗಳೂರು: ನಗರದ ಇಟ್ಟಮಡು ಬಳಿ ರೌಡಿ ಶಿವರಾಜು (29) ಎಂಬಾತನನ್ನು ಬಿಯರ್ ಬಾಟಲಿಯಿಂದ ಹೊಡೆದು ಕೊಲೆ ಮಾಡಿದ್ದ ಐವರು ಆರೋಪಿಗಳನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸಿ.ಕೆ. ಅಚ್ಚುಕಟ್ಟು ಪ್ರದೇಶದ ರೌಡಿ ಮಂಜುನಾಥ್ ಅಲಿಯಾಸ್ ಪೋಲಾರ್ಡ್, ಪ್ರಜ್ವಲ್, ಪ್ರಶಾಂತ್, ರಾಮಕೃಷ್ಣ, ಸುಮನ್ ಬಂಧಿತರು.

ಆರೋಪಿಗಳು ಸಾಕ್ಷ್ಯನಾಶ ಪಡಿಸುವ ಉದ್ದೇಶದಿಂದ ಧರಿಸಿದ್ದ ಅಂಗಿಗಳನ್ನು ತೆಗೆದು ಚಲಿಸುತ್ತಿದ್ದ ಲಾರಿಯ ಮೇಲೆ ಎಸೆದು ತಲೆಮರೆಸಿಕೊಂಡಿದ್ದರು. ಸಿ.ಸಿ. ಟಿವಿ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

'ಕೊಲೆಯಾದ ಶಿವರಾಜು ಪೇಂಟರ್ ಕೆಲಸ ಮಾಡುತ್ತಿದ್ದ. ಅಪರಾಧ ಚಟುವಟಿಕೆ ಹಿನ್ನೆಲೆಯಲ್ಲಿ ಈತನ ವಿರುದ್ಧ ಹಲವು ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದ್ದವು. ಈತನ ಹೆಸರು ಸಿ.ಕೆ. ಅಚ್ಚುಕಟ್ಟು ಠಾಣೆಯ ರೌಡಿ ಪಟ್ಟಿಯಲ್ಲಿತ್ತು. ಶಿವರಾಜು ಹಾಗೂ ಸ್ನೇಹಿತರು ಇಟ್ಟಮಡು ಬಳಿಯ ಬಾರ್‌ಗೆ ಭಾನುವಾರ ತೆರಳಿದ್ದರು. ಮದ್ಯ ಕುಡಿದು ಬಾರ್‌ನಿಂದ ಹೊರಗೆ ಬಂದಾಗ ರೌಡಿ ಮಂಜುನಾಥ್ ಎದುರಾಗಿದ್ದ. ಶಿವರಾಜ್‌ನನ್ನು ಅಪಹಾಸ್ಯ ಮಾಡಿದ ಎಂಬ ಕಾರಣಕ್ಕೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿತ್ತು. ಸ್ಥಳದಲ್ಲಿ ಬಿಯರ್ ಬಾಟಲಿಗಳಿಂದ ಶಿವರಾಜ್‌ನ ತಲೆಗೆ ಹೊಡೆಯಲಾಗಿತ್ತು. ತೀವ್ರ ರಕ್ತಸ್ರಾವದಿಂದ ಕುಸಿದು ಬಿದ್ದು ಮೃತಪಟ್ಟಿದ್ದ' ಎಂದು ಮೂಲಗಳು ತಿಳಿಸಿವೆ.

ಗೋವಾಕ್ಕೆ ವಿದ್ಯುತ್ ಮಾರ್ಗ • ಇಂದು ಕೇಂದ್ರ ಉನ್ನತಾಧಿಕಾರ ಸಮಿತಿ ಸಭೆ

ರಾಜ್ಯದ 177 ಹೆಕ್ಟೇರ್ ಕಾಡಿಗೆ ಆಪತ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋವಾ ರಾಜ್ಯಕ್ಕೆ ಹೆಚ್ಚುವರಿ ವಿದ್ಯುತ್ ಒದಗಿಸಲು ಕರ್ನಾಟಕದ ಪಶ್ಚಿಮ ಘಟ್ಟಗಳ ಮೂಲಕ ವಿದ್ಯುತ್ ಮಾರ್ಗ ನಿರ್ಮಿಸುವ ಯೋಜನೆಗೆ 177 ಹೆಕ್ಟೇರ್ ಅರಣ್ಯ ಬಳಕೆ ಕುರಿತು ಪರಿಶೀಲಿಸಲು ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಸಭೆ ಇದೇ 13ರಂದು ನವದೆಹಲಿಯಲ್ಲಿ ನಡೆಯಲಿದೆ.

ಧಾರವಾಡ ಜಿಲ್ಲೆಯ ನರೇಂದ್ರದಿಂದ ಗೋವಾಕ್ಕೆ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ 'ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್' ಸಂಸ್ಥೆಯು ಅರಣ್ಯ ಪ್ರದೇಶವನ್ನು ಅರಣ್ಯೇತರ ಬಳಕೆಗೆ ಅವಕಾಶ ನೀಡುವಂತೆ ಕೋರಿದೆ. ಧಾರವಾಡ ಜಿಲ್ಲೆಯಲ್ಲಿ 4.70 ಹೆಕ್ಟೇರ್, ಬೆಳಗಾವಿ ಜಿಲ್ಲೆಯಲ್ಲಿ 101 ಹೆಕ್ಟೇರ್ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ 70 ಹೆಕ್ಟೇರ್ ಅರಣ್ಯ ಪ್ರದೇಶಗಳ ಪರಿವರ್ತನೆಗೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿದೆ. ಈ ಯೋಜನೆ ಜಾರಿಯಾದರೆ ಕರ್ನಾಟಕ ರಾಜ್ಯದ ಪಶ್ಚಿಮ ಘಟ್ಟ ಪ್ರದೇಶದ 177 ಹೆಕ್ಟೇರ್ ದಟ್ಟ ಕಾಡು ನಾಶವಾಗಲಿದೆ.

ಉದ್ದೇಶಿತ ವಿದ್ಯುತ್ ಮಾರ್ಗವು ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ದಾಂಡೇಲಿ ಆನೆ ಧಾಮ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಭೀಮಗಡ ಅಭಯಾರಣ್ಯದ ಪರಿಸರ ಸೂಕ್ಷ್ಮವಲಯ, ಉತ್ತರ ಕನ್ನಡ ಜಿಲ್ಲೆಯ ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮವಲಯ ಹಾಗೂ ದಾಂಡೇಲಿ ಅಭಯಾರಣ್ಯಗಳ ಮೂಲಕ ಹಾದುಹೋಗಲಿದೆ.

ಗೋವಾ ರಾಜ್ಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ಉದ್ದೇಶಿಸಿರುವ 400 ಕೆ.ವಿ ಸಾಮರ್ಥ್ಯದ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಅನುಮತಿ ನೀಡುವಂತೆ ಸಂಸ್ಥೆಯು ಕರ್ನಾಟಕದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಅವರಿಗೆ 2019ರಲ್ಲಿ ಪತ್ರ ಬರೆದಿತ್ತು. ಅಂದಾಜು ₹265.57 ಕೋಟಿ ವೆಚ್ಚದ ಯೋಜನೆ ಇದಾಗಿದೆ. ಈ ಮಾರ್ಗದಲ್ಲಿ ಈಗಾಗಲೇ ವಿದ್ಯುತ್ ಪ್ರಸರಣ ಮಾರ್ಗವಿದೆ. 'ಇದರ ಹೊರತಾಗಿ ಹೆಚ್ಚುವರಿ ಮಾರ್ಗ ನಿರ್ಮಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಈ ಯೋಜನೆಯಿಂದ ಸಾಧಕ ಬಾಧಕಗಳ ಕುರಿತು ವರದಿ ಸಲ್ಲಿಸುವಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ (ಸಿಸಿಎಫ್) ಅರಣ್ಯ ಇಲಾಖೆ ಸೂಚನೆ ನೀಡಿತ್ತು.

2020ರ ಫೆಬ್ರುವರಿಯಲ್ಲಿ ಕೆನರಾ ವೃತ್ತದ ಸಿಸಿಎಫ್ ಸ್ಥಳ ಪರಿಶೀಲನೆ ನಡೆಸಿ, 'ಪಶ್ಚಿಮ ಘಟ್ಟದ ದಟ್ಟ ಅರಣ್ಯದಲ್ಲಿ ಈ ಯೋಜನೆ ಹಾದು ಹೋಗಲಿದೆ. ಈ ಯೋಜನೆಯಿಂದ ಹುಲಿ ಆವಾಸಸ್ಥಾನದ ಮೇಲೂ ಪರಿಣಾಮ ಬೀರಲಿದೆ. ಈ ಪ್ರಸ್ತಾವವನ್ನು ತಿರಸ್ಕರಿಸಬೇಕು' ಎಂದು ಶಿಫಾರಸು ಮಾಡಿದ್ದರು. ಈ ಯೋಜನೆಯ ಪ್ರಸ್ತಾವವನ್ನು ತಿರಸ್ಕರಿಸುವುದು ಉತ್ತಮ ಎಂದೂ ಪಿಸಿಸಿಎಫ್ ಅವರು 2021ರಲ್ಲಿ ವರದಿ ಸಲ್ಲಿಸಿದ್ದರು.

ಈ ಯೋಜನೆಯ ಅನುಷ್ಠಾನಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿ ಗೋವಾ ಫೌಂಡೇಷನ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಕುರಿತು ವರದಿ ನೀಡುವಂತೆ ಸಿಇಸಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. 'ಈ ಮಾರ್ಗದಲ್ಲಿ ಈಗಾಗಲೇ 220 ಕೆ.ವಿ.ಮಾರ್ಗ ಇದೆ. ಹೊಸ ಮಾರ್ಗ ನಿರ್ಮಾಣಕ್ಕೆ ಸಾವಿರಾರು ಮರಗಳನ್ನು ಕಡಿಯಬೇಕಾಗುತ್ತದೆ. ಅದರ ಬದಲು ಈಗಿರುವ ಮಾರ್ಗ ಬಳಸುವುದು ಉತ್ತಮ' ಎಂದು ಸಿಇಸಿ ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಸುಪ್ರೀಂ ಕೋರ್ಟ್ ಒಪ್ಪಿತ್ತು.

'ಅರಣ್ಯ ಭೂಮಿ ಪರಿವರ್ತನೆಗೆ ಸರ್ಕಾರ ಅವಕಾಶ ನೀಡಿದರೆ 60 ಸಾವಿರಕ್ಕೂ ಹೆಚ್ಚು ಮರಗಳ ಹನನವಾಗಲಿದೆ. ಅರಣ್ಯ ನಾಶವಾಗುವ ಕಾರಣಕ್ಕೆ ಗೋವಾ ರಾಜ್ಯದಲ್ಲೇ ಈ ಯೋಜನೆಗೆ ವಿರೋಧ ವ್ಯಕ್ತವಾಗುತ್ತಿದೆ. ಇಷ್ಟಾ ಪರಿಶೀಲನೆ ಹಂತದಲ್ಲಿರುವ ಪ್ರಸ್ತಾವನೆಯನ್ನು ಸರ್ಕಾರ ತಿರಸ್ಕರಿಸಬೇಕು' ಎಂದು ಶಾಸಕಿ ಸೌಮ್ಯ ರೆಡ್ಡಿ ಅವರು ಕರ್ನಾಟಕ ಸರ್ಕಾರಕ್ಕೆ ಈ ಹಿಂದೆ ಪತ್ರ ಬರೆದಿದ್ದರು.


'ಉದ್ದೇಶಿತ ವಿದ್ಯುತ್ ಮಾರ್ಗ ಹಾದುಹೋಗುವ ಪ್ರದೇಶಗಳು ಹುಲಿ, ಚಿರತೆ, ಆನೆ, ಕೆನ್ನಾಯಿ, ಕಾಳಿಂಗ ಸರ್ಪ, ಮಂಗಟ್ಟೆ ಹಕ್ಕಿ (ಹಾರ್ನ್‌ಬಿಲ್) ಮುಂತಾದ ಅಳಿವಿನಂಚಿನಲ್ಲಿರುವ ಜೀವಿಗಳ ಆವಾಸ ತಾಣಗಳಾಗಿವೆ. ಈ ಯೋಜನೆ ಜಾರಿಯಾದರೆ ಈ ಕಾಡುಪ್ರಾಣಿಗಳು ಆಪತ್ತು ಎದುರಿಸಲಿವೆ. ಮಾನವ– ವನ್ಯಜೀವಿ ಸಂಘರ್ಷವೂ ಹೆಚ್ಚಲಿದೆ' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಕಳವಳ ವ್ಯಕ್ತಪಡಿಸಿದರು.

'ಹಲವಾರು ನದಿ, ಹಳ್ಳ–ಕೊಳ್ಳಗಳ ಮೂಲವನ್ನು ಹೊಂದಿರುವ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಾಡುಗಳು ರಾಷ್ಟ್ರೀಯ ಹೆದ್ದಾರಿ 4ಎ, ರೈಲು ಮಾರ್ಗ, ಅಳ್ನಾವರ–ರಾಮನಗರ ರಾಜ್ಯ ಹೆದ್ದಾರಿ ಸೇರಿದಂತೆ ಹಲವಾರು ಯೋಜನೆಗಳಿಂದಾಗಿ ಈಗಾಗಲೇ ಹಾನಿಗೊಳಗಾಗಿವೆ. ಇಲ್ಲಿ ಹೊಸ ವಿದ್ಯುತ್ ಮಾರ್ಗಕ್ಕೆ ಅನುಮತಿ ನೀಡಿದಲ್ಲಿ ಅಳಿದುಳಿದ ಕಾಡುಗಳ ಮೇಲೂ ಗಂಭೀರ ಪರಿಣಾಮ ಉಂಟಾಗಲಿದೆ' ಎಂದು ಎಚ್ಚರಿಸಿದರು.

'ಗೋವಾ–ಕರ್ನಾಟಕ ಭಾಗದಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಾಗಿರುವ ಕುರಿತು 2022ರ ಹುಲಿ ಗಣತಿ ವರದಿಯಲ್ಲಿ ತಿಳಿಸಲಾಗಿದೆ. ಇಂತಹ ಸನ್ನಿವೇಶದಲ್ಲಿ ಯೋಜನೆ ಜಾರಿಗೊಳಿಸುವುದು ಸರಿಯಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- 400 ಕೆ.ವಿ.ಸಾಮರ್ಥ್ಯದ ಮಾರ್ಗ ನಿರ್ಮಾಣಕ್ಕೆ ಪ್ರಸ್ತಾವ
- ಯೋಜನೆ ಪ್ರಸ್ತಾವ ತಿರಸ್ಕರಿಸಲು ಅರಣ್ಯ ಇಲಾಖೆ ಶಿಫಾರಸು
- ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಗೋವಾ ಫೌಂಡೇಷನ್



ಮಾತೃತ್ವ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ 28ಕ್ಕೆ ಅರ್ಜಿ ವಿಚಾರಣೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ: ಮೂರು ತಿಂಗಳೊಳಗಿನ ಮಗುವನ್ನು ಕಾನೂನುಬದ್ಧವಾಗಿ ದತ್ತು ತೆಗೆದುಕೊಳ್ಳುವ ಮಹಿಳೆಯು ತಾಯ್ತನದ ರಜೆಗೆ ಅರ್ಹಳು ಎಂಬ ಮಾತೃತ್ವ ಸೌಲಭ್ಯ ಕಾಯ್ದೆ– 1961ರ ನಿಬಂಧನೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಏಪ್ರಿಲ್ 28ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲಾ ಅವರನ್ನೊಳಗೊಂಡ ನ್ಯಾಯಪೀಠವು, ಅರ್ಜಿಯ ತುರ್ತು ವಿಚಾರಣೆ ನಡೆಸಬೇಕು ಎಂಬ ವಕೀಲರೊಬ್ಬರ ಕೋರಿಕೆಯನ್ನು ಪರಿಗಣಿಸಿ, ಈ ಸಮ್ಮತಿ ನೀಡಿತು.

ಕಾಯ್ದೆಯ ಸೆಕ್ಷನ್ 5(4)ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕದ ಹಂಸಾನಂದಿನಿ ನಂದೂರಿ ಎಂಬುವವರು ಅರ್ಜಿ ಸಲ್ಲಿಸಿದ್ದಾರೆ.

'ಈ ಕಾಯ್ದೆಯು ಜೈವಿಕ ತಾಯಂದಿರಿಗೆ 26 ವಾರಗಳ ಹೆರಿಗೆ ರಜೆಯ ಪ್ರಯೋಜನ ನೀಡುತ್ತದೆ. ಆದರೆ, ದತ್ತುಪಡೆವ ತಾಯಂದಿರಿಗೆ ಕೇವಲ 12 ವಾರ ರಜೆ ನೀಡುತ್ತದೆ. ಅಷ್ಟೇ ಅಲ್ಲ, 3 ತಿಂಗಳು ಮೀರಿದ ಅನಾಥ ಮಕ್ಕಳನ್ನು ದತ್ತು ಪಡೆಯುವವರಿಗೂ 12 ವಾರದ ರಜೆ ಮಾತ್ರ ದೊರೆಯುತ್ತದೆ.ಹಾಗಾಗಿ, ಈ ಕಾಯ್ದೆಯು ಜೈವಿಕ ತಾಯಂದಿರು ಮತ್ತು ದತ್ತು ತಾಯಂದಿರಲ್ಲಿ ತಾರತಮ್ಯಕ್ಕೆ ಎಡೆ ಮಾಡಿಕೊಡುತ್ತದೆ' ಎಂದು ಅರ್ಜಿದಾರರು ಅರ್ಜಿಯಲ್ಲಿ ವಿವರಿಸಿದ್ದಾರೆ.

ಈ ಅರ್ಜಿ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಕೇಂದ್ರ ಕಾನೂನು ಸಚಿವಾಲಯಕ್ಕೆ 2021ರ ಅಕ್ಟೋಬರ್ 1ರಂದು ಸುಪ್ರೀಂಕೋರ್ಟ್ ನೋಟಿಸ್ ನೀಡಿತ್ತು.

ಬೆಳಗಾವಿ ಗಡಿ ವಿವಾದ ವಿಚಾರಣೆ ಹಿಂದೆ ಸರಿದ ನ್ಯಾ.ಅರವಿಂದ ಕುಮಾರ್

ನವದೆಹಲಿ: 1956ರಲ್ಲಿ ಬೆಳಗಾವಿಯನ್ನು ಕರ್ನಾಟಕಕ್ಕೆ ಸೇರಿಸಿದ್ದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರ್ಕಾರ 2004ರಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್ ಬುಧವಾರ ಹಿಂದೆ ಸರಿದಿದ್ದಾರೆ.

ಕುಮಾರ್ ಅವರು ಈ ವರ್ಷದಲ್ಲಿ ಪ್ರಕರಣದ ವಿಚಾರಣೆಯಿಂದ ಹೊರಗುಳಿದ ಎರಡನೇ ನ್ಯಾಯಮೂರ್ತಿ. ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಅಸಾಸುದ್ದೀನ್ ಅಮಾನುಲ್ಲಾ ಮತ್ತು ಅರವಿಂದ್ ಕುಮಾರ್ ಅವರ ನ್ಯಾಯಪೀಠದ ಮುಂದೆ ವಿಷಯ ಪ್ರಸ್ತಾಪಿಸಿದ ವಕೀಲರು, ಈ ಹಿಂದೆ ಕೆಲ ನ್ಯಾಯಮೂರ್ತಿಗಳು (ಮಹಾರಾಷ್ಟ್ರ ಮತ್ತು ಕರ್ನಾಟಕದಿಂದ) ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಮೂಲದ ನ್ಯಾಯಮೂರ್ತಿ ಕುಮಾರ್ ಅವರು ವಿಚಾರಣೆಯಿಂದ ಹಿಂದೆ ಸರಿದಿದ್ದು, ಈಗ ಕುಮಾರ್ ಸದಸ್ಯರಲ್ಲದ ಪೀಠದ ಮುಂದೆ ಈ ವಿಷಯವನ್ನು ಪಟ್ಟಿ ಮಾಡಲಾಗುವುದು. ಕರ್ನಾಟಕ ಮೂಲದ ನ್ಯಾಯಮೂರ್ತಿ ನಾಗರತ್ನ ಅವರು ವಿಚಾರಣೆಯಿಂದ ಹಿಂದೆ ಸರಿದ ಬಳಿಕ ಈ ವಿಷಯವನ್ನು ಪರಿಗಣಿಸಲು ಮತ್ತೊಂದು ಪೀಠವನ್ನು ರಚಿಸಲಾಯಿತು. ಈ ಹಿಂದೆ 2019 ರಲ್ಲಿ ನ್ಯಾಯಮೂರ್ತಿ ಎಂ. ಎಂ. ಶಾಂತನಗೌಡರ್ ಮತ್ತು ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರು ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿದ್ದರು.

'ಒಳ ಮೀಸಲಿನಿಂದ ಬಿಜೆಪಿಗೆ ಲಾಭ'

ಬೆಂಗಳೂರು: ಒಳಮೀಸಲಾತಿ ಮತ್ತು ಜನಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಮರು ಹಂಚಿಕೆ ಮಾಡಿರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ದಿಟ್ಟ ನಿರ್ಧಾರವಾಗಿದ್ದು, ಇದರಿಂದ ಚುನಾವಣೆಯಲ್ಲಿ ಪಕ್ಷಕ್ಕೆ ಲಾಭವಾಗುವುದು ಖಚಿತ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ತಿಳಿಸಿದರು.

ಬೆಂಗಳೂರು ಪ್ರೆಸ್ ಕ್ಲಬ್ ಬುಧವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಮಾತನಾಡಿ, 'ಒಳಮೀಸಲಾತಿ ಘೋಷಣೆ ಕಠಿಣ ನಿರ್ಧಾರವಾಗಿತ್ತು. ಈ ವಿಷಯಕ್ಕೆ ಕೈ ಹಾಕಲು ಘಟಾನುಘಟಿ ನಾಯಕರೇ ಹೆದರಿ ಸುಮ್ಮನಿದ್ದರು. ಆದರೆ, ಬೊಮ್ಮಾಯಿ ಅವರು ಅಸಾಧ್ಯವೆನಿಸಿದ್ದ ಕೆಲಸವನ್ನು ಮಾಡಿ ಸೈ ಎನಿಸಿಕೊಂಡಿದ್ದಾರೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನತೆ ತೃಪ್ತರಾಗಿದ್ದಾರೆ' ಎಂದು ತಿಳಿಸಿದರು.

'ಫೈಟರ್ ರವಿ' ಹೆಸರು ಆಕರ್ಷಕ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏನ್ರೀ ನಿಮ್ಮ ಕಕ್ಷಿದಾರರು ತುಂಬಾ ಜಾಣ್ಮೆಯಿಂದ ಈ ಅರ್ಜಿ ಬರೆಸಿದಂತಿದೆ. ಅರ್ಜಿಯಲ್ಲಿ ಎಲ್ಲಿಯೂ ಫೈಟರ್ ರವಿ ಎಂಬುದನ್ನು ಕಾಣಿಸಿಯೇ ಇಲ್ಲವಲ್ಲಾ, ಏನೇ ಆಗಲಿ, ಫೈಟರ್ ರವಿ ಎಂಬ ಹೆಸರು ತುಂಬಾ ಆಕರ್ಷಕವಾಗಿದೆ (ಕ್ಯಾಚಿ) ಕಣ್ರೀ...!

'ರಾಜ್ಯದಲ್ಲಿ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದ್ದು, ರಾಜ್ಯ ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿಯಿರುವ ಕಾರಣ ಅವರನ್ನು ಆ ಹುದ್ದೆಯಲ್ಲಿ ಮುಂದುವರಿಸದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಫೈಟರ್ ರವಿ ಅಲಿಯಾಸ್ ಬಿ.ಎಂ. ಮಲ್ಲಿಕಾರ್ಜುನಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ವಜಾಗೊಳಿಸಿದ ಏಕಸದಸ್ಯ ನ್ಯಾಯಪೀಠ ವ್ಯಕ್ತಪಡಿಸಿದ ಮೌಖಿಕ ಅಭಿಪ್ರಾಯವಿದು.



'ಭಾರತೀಯ ಚುನಾವಣಾ ಆಯೋಗವು 2022ರ ಡಿಸೆಂಬರ್ 8ರಂದು ಹೊರಡಿಸಿರುವ ಅಧಿಸೂಚನೆಯ ಪ್ರಧಾನ ಉಪವಾಕ್ಯ 6 (ವಿ) ಅನುಸಾರ ಯಾವುದೇ ಅಧಿಕಾರಿಯ ವಿರುದ್ಧ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದ್ದಾಗ ಅಂತಹವರನ್ನು ಚುನಾವಣಾ ಕಾರ್ಯಕ್ಕೆ ನಿಯೋಜಿಸುವಂತಿಲ್ಲ. ಹೀಗಾಗಿ, ಅಲೋಕ್ ಕುಮಾರ್ ಅವರನ್ನು ಅವರ ಸದ್ಯದ ಹುದ್ದೆಯಲ್ಲಿ ಮುಂದುವರಿಸದಂತೆ ನಿರ್ದೇಶಿಸಬೇಕು' ಎಂದು ಕೋರಿ ಫೈಟರ್ ರವಿ ಅಲಿಯಾಸ್ ಬಿ.ಎಂ.ಮಲ್ಲಿಕಾರ್ಜನಯ್ಯ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಮೂರ್ತಿ ನಾಗಪ್ರಸನ್ನ ಅವರು, 'ನಾನು ಇತ್ತೀಚೆಗಷ್ಟೇ ಫೈಟರ್ ರವಿ ಪದ ಬಳಸದಂತೆ ತಡೆ ಕೋರಿದ್ದ ಅರ್ಜಿಯಲ್ಲಿ ಆ ರೀತಿ ಹೆಸರು ಬಳಕೆ ಮಾಡದಂತೆ ತಡೆ ನೀಡಿದ್ದೆನಲ್ಲವೇ? ಇದರ ಅರ್ಜಿದಾರರ ಕೂಡಾ ಅವರೇ ತಾನೆ' ಎಂದು ಫೈಟರ್ ರವಿ ಪರ ವಕೀಲ ಸಂಚನ ಜೈನಾನಂದನ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಹೌದೆಂದು ತಲೆಯಾಡಿಸಿದ ಸಂಚನ ಅವರನ್ನು ನ್ಯಾಯಮೂರ್ತಿಗಳು, 'ಈ ಅರ್ಜಿಯನ್ನು ನೀವು ತುಂಬಾ ಜಾಣ್ಮೆಯಿಂದ ಡ್ರಾಫ್ಟ್ ಮಾಡಿದ್ದೀರಿ. ಇನ್ನೊಂದು ಅರ್ಜಿಯಲ್ಲಿ ಫೈಟರ್ ರವಿ ಹೆಸರು ಬಳಸದಂತೆ ತಡೆ ಆದೇಶ ಪಡೆದಿದ್ದೀರಿ. ಅವತ್ತು ಅರ್ಜಿದಾರರು ಬಿಜೆಪಿಯ ಸಂಭವನೀಯ ಅಭ್ಯರ್ಥಿ ಎಂದಿದ್ದೀರಿ. ಇವತ್ತು ನೋಡಿದರೆ ಇಲ್ಲಿ ಬಿ.ಎಂ.ಮಲ್ಲಿಕಾರ್ಜುನಯ್ಯ ಎಂಬ ಹೆಸರಿನಲ್ಲಿ ಅರ್ಜಿದಾರರು ಪಕ್ಷೇತರರಾಗಿ ಸ್ಪರ್ಧಿಸಬಹುದು ಎಂದು ಹೇಳುತ್ತಿದ್ದೀರಿ. ಏನೇ ಆಗಲಿ ನಿಮ್ಮ ಅರ್ಜಿದಾರರ ಫೈಟರ್ ರವಿ ಹೆಸರು ತುಂಬ ಕ್ಯಾಚಿಯಾಗಿದೆ' ಎಂದು ಮೌಖಿಕವಾಗಿ ಚಟಾಕಿ ಹಾರಿಸಿ ಅರ್ಜಿ ವಜಾಗೊಳಿಸಿದರು.

ಅಲೋಕ್ ಕುಮಾರ್ ಪರ ಹಾಜರಿದ್ದ ಹಿರಿಯ ವಕೀಲ ಸಂದೇಶ್ ಚೌಟ, 'ಇದು ಕಾನೂನಿನ ದುರ್ಬಳಕೆ. ಅರ್ಜಿದಾರರು ಇಂತಹ ಮನವಿ ಮಾಡಲು ಅವಕಾಶವಿಲ್ಲ. ಆದ್ದರಿಂದ ಇದನ್ನು ವಜಾಗೊಳಿಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ, 'ಅರ್ಜಿಯಲ್ಲಿ ಮಾನ್ಯತೆಯಿಲ್ಲ' ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿತು. ಅಲೋಕ್ ಕುಮಾರ್ ಪರ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದರು.



ರಥೋತ್ಸವ ಸಂಭ್ರಮ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪೊಳಲಿ ಶ್ರೀರಾಜರಾಜೇಶ್ವರಿ ದೇವಸ್ಥಾನದ ರಥೋತ್ಸವ ಬುಧವಾರ ಜರುಗಿತು ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಮುಂಬೈನಲ್ಲಿ 9 ಮಂದಿ ಸಾವು

ಕೋವಿಡ್: ಒಂದೇ ದಿನ 7,830 ಹೊಸ ಪ್ರಕರಣ ಪತ್ತೆ

ನವದೆಹಲಿ/ ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್ ಸೋಂಕು ನಿರ್ಮೂಲನೆಯ ಘಟ್ಟ ತಲುಪಿದೆ ಎಂಬ ಆರೋಗ್ಯ ತಜ್ಞರ ಹೇಳಿಕೆಯ ಬೆನ್ನಲ್ಲೇ ಬುಧವಾರ ಒಂದೇ ದಿನ 7,830 ಹೊಸ ಪ್ರಕರಣಗಳು ಪತ್ತೆಯಾಗಿದ್ದು, 16 ಮಂದಿ ಮೃತಪಟ್ಟಿದ್ದಾರೆ.

ಕಳೆದ ವರ್ಷದ ಸೆಪ್ಟೆಂಬರ್ 1ರಂದು ದೇಶದಲ್ಲಿ 7,946 ಪ್ರಕರಣಗಳು ದಾಖಲಾಗಿದ್ದವು. ಏಳು ತಿಂಗಳ ಬಳಿಕ ಒಂದೇ ದಿನದಲ್ಲಿ ದೇಶದಲ್ಲಿ ಇಷ್ಟೊಂದು ಪ್ರಕರಣಗಳು ಪತ್ತೆಯಾಗಿವೆ.

ನೆರೆಯ ಮಹಾರಾಷ್ಟ್ರದಲ್ಲೂ ಒಂದೇ ದಿನ ಸೋಂಕಿತರ ಸಂಖ್ಯೆ ಒಂದು ಸಾವಿರ ಗಡಿ ದಾಟಿದ್ದು, ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ. ಒಟ್ಟು 1,115 ಹೊಸ ಪ್ರಕರಣಗಳು ಪತ್ತೆಯಾಗಿದ್ದು, ಅಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 5,421ಕ್ಕೆ ತಲುಪಿದೆ. ಕಳೆದ 24 ಗಂಟೆಯಲ್ಲಿ ಮುಂಬೈನಲ್ಲಿ 320 ಹೊಸ ಪ್ರಕರಣಗಳು ಪತ್ತೆಯಾಗಿವೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಓಮೈಕ್ರಾನ್ ಉಪ ತಳಿ ಹಾವಳಿ: ಸೋಂಕಿನ ಲಕ್ಷಣಗಳು ಸೌಮ್ಯವಾಗಿವೆ. ಆದರೂ, ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ದಿಟ. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ತೀರಾ ಕಡಿಮೆ ಇದೆ. ಸೋಂಕು ಉಲ್ಬಣಕ್ಕೆ ಓಮೈಕ್ರಾನ್‌ನ ಉಪ ತಳಿಯಾದ ಎಕ್ಸ್‌ಬಿಬಿ.1.16 ಕಾರಣ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ.

ದೇಶದಲ್ಲಿ ಪ್ರಸ್ತುತ ಸಕ್ರಿಯ ಪ್ರಕರಣಗಳ ಸಂಖ್ಯೆ 40,215ಕ್ಕೆ ಮಟ್ಟಿದೆ. ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 5,31,016ಕ್ಕೇರಿದೆ. ಸೋಂಕು ಹರಡುವಿಕೆ ಪ್ರಮಾಣ ಶೇ 0.09ರಷ್ಟಿದ್ದು, ಚೇತರಿಕೆ ಪ್ರಮಾಣ ಶೇ 98.72ರಷ್ಟಿದೆ. ಮರಣ ಪ್ರಮಾಣ ದರ ಶೇ 1.19ರಷ್ಟಿದೆ. ಇಲ್ಲಿಯವರೆಗೆ 4.47 ಕೋಟಿ ಜನರು ಸೋಂಕಿಗೆ ಒಳಪಟ್ಟಿದ್ದಾರೆ ಎಂದು ತಿಳಿಸಿದೆ.

ಆನೆ ದಾಳಿ: ಡಾ.ವಿನಯ್ ಸ್ಥಿತಿ ಗಂಭೀರ

ಶಿವಮೊಗ್ಗ: ಹೊನ್ನಾಳಿ ತಾಲ್ಲೂಕಿನ ಜಿನಹಳ್ಳಿ ಬಳಿ ಮಂಗಳವಾರ ಆನೆ ದಾಳಿಯಿಂದ ತೀವ್ರ ಗಾಯಗೊಂಡಿದ್ದ ಸಕ್ರೆಬೈಲು ಆನೆ ಕ್ಯಾಂಪಿನ ವೈದ್ಯ ಡಾ.ಎಸ್. ವಿನಯ್ ಅವರ ಸ್ಥಿತಿ ಗಂಭೀರವಾಗಿದೆ.

ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಿಂದ 6 ತಜ್ಞ ವೈದ್ಯರ ತಂಡ ರಾತ್ರಿ ಶಿವಮೊಗ್ಗಕ್ಕೆ ಬರಲಿದ್ದು, ಡಾ.ವಿನಯ್ ಅವರ ಆರೋಗ್ಯ ತಪಾಸಣೆ ನಡೆಸಿ ಬೆಂಗಳೂರಿಗೆ ಕರೆದೊಯ್ಯುವ ಬಗ್ಗೆ ನಿರ್ಧರಿಸಲಿದ್ದಾರೆ ಎಂದು ಸಹೋದ್ಯೋಗಿ ಡಾ. ಮುರಳಿ ಮನೋಹರ್ 'ಪ್ರಜಾವಾಣಿ'ಗೆ ತಿಳಿಸಿದರು.



ಡಾ.ವಿನಯ್ ಅವರನ್ನು ವಿಶೇಷ ಆಂಬುಲೆನ್ಸ್‌ನಲ್ಲಿ ಜೀರೊ ಟ್ರಾಫಿಕ್ ಮೂಲಕ ಕರೆದೊಯ್ಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಆನೆ ಸೆರೆ ಕಾರ್ಯಾಚರಣೆ ವೇಳೆ ಡಾ.ವಿನಯ್ ಬೆನ್ನಿನ ಮೇಲೆ ಸಲಗ ಕಾಲಿಟ್ಟು ತುಳಿದಿದ್ದರಿಂದ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಓಡಿಹೋಗಲು ಯತ್ನಿಸಿ ಜಾರಿ ಬಿದ್ದ ವಿನಯ್ ಅವರ ಬೆನ್ನ ಮೇಲೆ ಆನೆ ಕಾಲಿಟ್ಟಿದೆ. ಇದರಿಂದ ಅವರ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿದೆ ಎಂದು ತಿಳಿದುಬಂದಿದೆ. ಚಿಕಿತ್ಸೆಗಾಗಿ ಇಲ್ಲಿನ ನಂಜಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಕೆಪಿಎಸ್‌ಸಿ ಅಧ್ಯಕ್ಷ–ಸದಸ್ಯರ ನೇಮಕ ಪ್ರಶ್ನಿಸಿದ ಪಿಐಎಲ್

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಮತ್ತು 11 ಮಂದಿ ಸದಸ್ಯರ ನೇಮಕಾತಿ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಸಲ್ಲಿಸಲಾಗಿರುವ ಎರಡು ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ (ಪಿಐಎಲ್) ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಕೆಪಿಎಸ್‌ಸಿ ಅಧ್ಯಕ್ಷ ಸ್ಥಾನಕ್ಕೆ ಶಿವಶಂಕರಪ್ಪ ಎಸ್. ಸಾಹುಕಾರ್ ಅವರನ್ನು ನೇಮಿಸಲಾದ ಆದೇಶ ಪ್ರಶ್ನಿಸಿ ಶಶಿಪ್ರಸಾದ್ ಗಾಂಧಿ ಮತ್ತು 11 ಮಂದಿ ಸದಸ್ಯರ ನೇಮಕಾತಿ ಪ್ರಶ್ನಿಸಿ ಟಿ.ನರಸಿಂಹ ಮೂರ್ತಿ ಸಲ್ಲಿಸಿದ್ದ ಪಿಐಎಲ್‌ಗಳ ವಾದ-ಪ್ರತಿವಾದ ಆಲಿಕೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಪೂರ್ಣಗೊಳಿಸಿತು.

'ಹೋಟಾ ಸಮಿತಿ ಮಾರ್ಗಸೂಚಿಯಂತೆ ಶೋಧನಾ ಸಮಿತಿ ರಚಿಸದೆ ಮತ್ತು ಯಾವುದೇ ನಿಯಮ ರೂಪಿಸದೆ ರಾಜ್ಯ ಸರ್ಕಾರವು ಕೆಪಿಎಸ್‌ಸಿಗೆ ಸದಸ್ಯರನ್ನು ನೇಮಕ ಮಾಡಿದೆ. ಆದ್ದರಿಂದ, ಸದಸ್ಯರ ನೇಮಕಾತಿ ಆದೇಶ ರದ್ದುಪಡಿಸಬೇಕು ಮತ್ತು ಹೋಟಾ ಸಮಿತಿ ಅನುಸಾರ ಹೊಸದಾಗಿ ಸದಸ್ಯರನ್ನು ನೇಮಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರ ಟಿ.ನರಸಿಂಹ ಮೂರ್ತಿ ಕೋರಿಕೆ.

2020ರ ಜೂನ್ 6ರಂದು ಮಾಡಲಾಗಿದ್ದ 11 ಮಂದಿ ಸದಸ್ಯರ ಈ ನೇಮಕಾತಿಯನ್ನು ಪ್ರಶ್ನಿಸಲಾಗಿದ್ದು, ಇವರಲ್ಲಿ ಡಾ.ಚಂದ್ರಕಾಂತ್ ಡಿ.ಶಿವಕೇರಿ, ಎಸ್.ಎಚ್. ದುಗ್ಗಪ್ಪ, ಡಾ.ಆರ್.ಲಕ್ಷ್ಮೀನಾರಾಯಣ ಮತ್ತು ಶ್ರೀಕಂಠರಾವ್ ನಿವೃತ್ತರಾಗಿದ್ದಾರೆ. ಸದಸ್ಯರಾಗಿದ್ದ ಶಿವಶಂಕರಪ್ಪ ಎಸ್. ಸಾಹುಕಾರ್ ಅಧ್ಯಕ್ಷರಾಗಿ 2021ರ ಏಪ್ರಿಲ್ 5ರಂದು ನೇಮಕಗೊಂಡಿದ್ದಾರೆ.

'ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರ್ ಎಸ್.ಸಾಹುಕಾರ್ ಈ ಹಿಂದೆ ಸದಸ್ಯರಾಗಿದ್ದವರು. ಅವರನ್ನೇ 2021ರಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಆದರೆ, ನೇಮಕಾತಿಯ ವೇಳೆ ಹೈಕೋರ್ಟ್ ಆದೇಶದಂತೆ ಯಾವುದೇ ನಿರ್ದಿಷ್ಟ ನಿಯಮವಾಗಲಿ ಅಥವಾ ಹೋಟಾ ಸಮಿತಿಯ ಮಾರ್ಗಸೂಚಿಯಾಗಲಿ ಪಾಲನೆಯಾಗಿಲ್ಲ. ಆದ್ದರಿಂದ, ಅವರ ನೇಮಕಾತಿ ರದ್ದುಪಡಿಸಬೇಕು' ಎಂಬುದು ಮತ್ತೊಬ್ಬ ಅರ್ಜಿದಾರ ಶಶಿಪ್ರಸಾದ್ ಗಾಂಧಿ ಅವರ ಮನವಿ.

ಮುಖ್ಯಾಂಶಗಳು

- ಸದಸ್ಯರ ನೇಮಕಾತಿ ರದ್ದುಪಡಿಸಲು ಅರ್ಜಿದಾರರ ಒತ್ತಾಯ
- ಹೋಟಾ ಸಮಿತಿ ಅನುಸಾರ ಹೊಸ ಸದಸ್ಯರ ನೇಮಕಕ್ಕೆ ಮನವಿ
- ವಿಭಾಗೀಯ ಪೀಠದ ಮುಂದೆ ಅರ್ಜಿ ವಿಚಾರಣೆ

ಹೊರನಾಡು: ಪುನರ್ ಪ್ರತಿಷ್ಠಾ ಸ್ವರ್ಣ ಮಹೋತ್ಸವ 22ರಿಂದ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಹೊರನಾಡಿನಲ್ಲಿ ಇದೇ 22ರಿಂದ 29ರವರೆಗೆ ಅನ್ನಪೂರ್ಣೇಶ್ವರಿ ದೇವಿ ಪುನರ್ ಪ್ರತಿಷ್ಠಾ ಸ್ವರ್ಣಮಹೋತ್ಸವ, ಬ್ರಹ್ಮಕುಂಭಾಭಿಷೇಕ, ರಥೋತ್ಸವ ಜರುಗಲಿವೆ' ಎಂದು ಶ್ರೀಕ್ಷೇತ್ರ ಹೊರನಾಡು ಟ್ರಸ್ಟಿ ಜಿ.ಬಿ. ಗಿರಿಜಾಶಂಕರ ಜೋಶಿ ಇಲ್ಲಿ ಬುಧವಾರ ತಿಳಿಸಿದರು.

'22ರಂದು ಬೆಳಿಗ್ಗೆ ಮಹಾಭಿಷೇಕ ನೆರವೇರಲಿದೆ. ಮಧ್ಯಾಹ್ನ 12 ಗಂಟೆಗೆ ಧಾರ್ಮಿಕ ಸಭೆ ನಡೆಯಲಿದ್ದು ಬೆಳಗಾವಿಯ ಹುಕ್ಕೇರಿ ಸಂಸ್ಥಾನದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಕಲ್ಲಡ್ಕದ ಕಶೆಕೋಡಿ ಸೂರ್ಯನಾರಾಯಣ ಭಟ್ ಅವರು ಉಪನ್ಯಾಸ ನೀಡಲಿದ್ದಾರೆ.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ನಟಿ ತಾರಾ ಅನೂರಾಧಾ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಸಂಘಟನಾ ಕಾರ್ಯದರ್ಶಿ ಡಾ. ರಾಘವೇಂದ್ರ ಭಟ್ ಪಾಲ್ಗೊಳ್ಳುವರು. ಹೊರನಾಡು ಶ್ರೀಕ್ಷೇತ್ರದ ಧರ್ಮದರ್ಶಿ ಜಿ.ಭೀಮೇಶ್ವರ ಜೋಶಿ ಅಧ್ಯಕ್ಷತೆ ವಹಿಸುವರು' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'23ರಂದು ವಾರ್ಷಿಕ ವರ್ಧಂತ್ಯುತ್ಸವ, 24ರಂದು ಉದ್ಭವ ಗಣಪತಿ ಸನ್ನಿಧಿಯಲ್ಲಿ ಕುಂಭಾಭಿಷೇಕ, 25ರಂದು ನವಗ್ರಹ ದೇವರ ಸನ್ನಿಧಿಯಲ್ಲಿ ಕುಂಭಾಭಿಷೇಕ 26ರಂದು ಆಂಜನೇಯಸ್ವಾಮಿಗೆ ಕುಂಭಾಭಿಷೇಕ ಜರುಗಲಿವೆ. 27ರಂದು ಬ್ರಹ್ಮ ಕುಂಭಾಭಿಷೇಕ ಕಲಶ ಸ್ಥಾಪನೆ, 28ರಂದು ಅನ್ನಪೂರ್ಣೇಶ್ವರಿ ದೇವಿಗೆ ಬ್ರಹ್ಮಕುಂಭಾಭಿಷೇಕ ಮತ್ತು ರಥೋತ್ಸವ ಹಾಗೂ 29ರಂದು ಸಂಪ್ರೋಕ್ಷಣೆ ಜರುಗಲಿವೆ' ಎಂದು ವಿವರಿಸಿದರು.

ಶೂಟಿಂಗ್ ವೇಳೆ ನಟ ಸಂಜಯ್ ದತ್‌ಗೆ ಗಾಯ?



ಬೆಂಗಳೂರು: ನಗರದ ಮಾಗಡಿ ರಸ್ತೆ ಪ್ರದೇಶದಲ್ಲಿ ಸಿನಿಮಾ ಚಿತ್ರಿಕರಣದ ವೇಳೆ ನಡೆದ ಬಾಂಬ್ ಸಿಡಿತದಿಂದ ಬಾಲಿವುಡ್ ನಟ ಸಂಜಯ್ ದತ್ ಅವರಿಗೆ ಗಾಯಗಳಾಗಿವೆ.

'ಪ್ರೇಮ್ ನಿರ್ದೇಶನದ ಧ್ರುವ ಸರ್ಜಾ ನಾಯಕ ನಟನೆಯ 'ಕೆಡಿ' ಚಿತ್ರದ ಚಿತ್ರೀಕರಣದ ವೇಳೆ ಈ ಅವಘಡ ಸಂಭವಿಸಿದೆ. ದತ್ ಅವರನ್ನು ಕೂಡಲೇ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ದತ್ ಅವರ ಮುಖ ಮತ್ತು ಮೊಣಕೈಗೆ ಗಾಯಗಳಾಗಿವೆ. ಸದ್ಯ ಅವರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಮಾಹಿತಿಗೆ ಚಿತ್ರ ತಂಡದವರು ಸಂಪರ್ಕಕ್ಕೆ ಸಿಗಲಿಲ್ಲ.

ನಿಧನ ವಾರ್ತೆ

ಡಾ.ಸಿ.ಕೆ.ಎನ್. ರಾಜಾ



ಮೈಸೂರು: ನಗರದ ಲಕ್ಷ್ಮಿಪುರಂ ನಿವಾಸಿ, ಕಾನೂನು ತಜ್ಞ ಡಾ. ಸಿ.ಕೆ.ಎನ್. ರಾಜಾ (91) ಅನಾರೋಗ್ಯ ದಿಂದ ಬುಧವಾರ ನಿಧನರಾದರು.

ಮೃತರಿಗೆ ಪತ್ನಿ, ಪುತ್ರ ಇದ್ದಾರೆ. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ, ಬಿ.ಎಲ್., ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಲ್‌ಎಲ್‌ಎಂ ಹಾಗೂ ಪಿಎಚ್.ಡಿ ಪದವಿಯನ್ನು ಅವರು ಪಡೆದಿದ್ದರು. 'ಭಾರತದ ಸಂವಿಧಾನ'ದ ಕುರಿತು ಪಿಎಚ್.ಡಿ ಸಂಶೋಧನೆ ನಡೆಸಿದ ದೇಶದ ಮೊದಲಿಗರೆಂಬ ಶ್ರೇಯ ಅವರದ್ದಾಗಿತ್ತು. ಮೈಸೂರು ವಿಶ್ವವಿದ್ಯಾಲಯದ ಕಾನೂನು ಅಧ್ಯಯನ ವಿಭಾಗದ ಡೀನ್ ಆಗಿದ್ದ ಅವರು 1992ರಲ್ಲಿ ನಿವೃತ್ತರಾಗಿದ್ದರು. 25ಕ್ಕೂ ಹೆಚ್ಚು ಕಾನೂನು ಪುಸ್ತಕಗಳನ್ನು ಬರೆದಿದ್ದಾರೆ. 250 ಸಂಶೋಧನಾ ಪ್ರಬಂಧಗಳು ವಿವಿಧ ಜರ್ನಲ್‌ಗಳಲ್ಲಿ ಪ್ರಕಟವಾಗಿವೆ.

ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ಸಂಜೆ ನಡೆಯಿತು.

8ಕ್ಕೆ ಇಳಿಸಲು ಶಿಫಾರಸು; 16ಕ್ಕೆ ಹೆಚ್ಚಳ!

ಒಂದನೇ ಪುಟದಿಂದ...

ಆಡಳಿತ ಸುಧಾರಣಾ ಆಯೋಗ ಫೆ. 3ರಂದು ಮುಖ್ಯಮಂತ್ರಿಗೆ ಸಲ್ಲಿಸಿದ್ದ ವರದಿಯಲ್ಲಿ ಕೆಪಿಎಸ್‌ಸಿ ಸದಸ್ಯರ ಸಂಖ್ಯೆಯನ್ನು ಇಳಿಸುವಂತೆ ಶಿಫಾರಸು ಮಾಡಿತ್ತು. 'ಉತ್ತರ ಪ್ರದೇಶವೂ ಸೇರಿದಂತೆ ಇತರ ರಾಜ್ಯಗಳಲ್ಲಿ ಲೋಕಸೇವಾ ಆಯೋಗದ ಸದಸ್ಯರ ಸಂಖ್ಯೆ 8 ಅಥವಾ ಅದಕ್ಕಿಂತ ಕಡಿಮೆ ಇದೆ. ಹೀಗಾಗಿ, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರೂ ಸೇರಿ ಒಟ್ಟು ಸದಸ್ಯರ ಸಂಖ್ಯೆಯನ್ನು ಇಳಿಸಬಹುದು' ಎಂದೂ ಸಮರ್ಥನೆ ನೀಡಿತ್ತು.

ಆದರೆ, ಈ ಶಿಫಾರಸು ಮಾಡಿದ ಒಂದು ತಿಂಗಳ ಬಳಿಕ, ಅಂದರೆ ಮಾರ್ಚ್ 3ರಂದು ಮುಖ್ಯ ಕಾರ್ಯದರ್ಶಿಗೆ ನೀಡಿದ್ದ ಟಿಪ್ಪಣಿಯಲ್ಲಿ, ಪ್ರಸ್ತುತ 13 ಸದಸ್ಯರ (ಅಧ್ಯಕ್ಷರೂ ಸೇರಿ 14) ಸಂಖ್ಯೆಯನ್ನು 15ಕ್ಕೆ (ಅಧ್ಯಕ್ಷರೂ ಸೇರಿ 16) ಹೆಚ್ಚಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಮುಖ್ಯಮಂತ್ರಿ ಸೂಚಿಸಿದ್ದರು.

ವಿಶೇಷವೆಂದರೆ, ಸದಸ್ಯರ ಸಂಖ್ಯೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುವ ವಿಷಯ ಆಯೋಗದಲ್ಲಿರುವ ಸದಸ್ಯರ ಗಮನಕ್ಕೇ ಬಂದಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿ ಹಾಲಿ ಸದಸ್ಯರೊಬ್ಬರು, 'ಒಟ್ಟು ಸದಸ್ಯರಲ್ಲಿ ಶೇ 50ರಷ್ಟು ಸದಸ್ಯರು ಅಧಿಕಾರಿ ವರ್ಗದಿಂದ (ಕನಿಷ್ಠ 10 ವರ್ಷ ಸರ್ಕಾರಿ ಸೇವೆ ಸಲ್ಲಿಸಿರಬೇಕು) ಮತ್ತು ಶೇ 50ರಷ್ಟು ಅಧಿಕಾರೇತರ ವರ್ಗದ ಸದಸ್ಯರಿರಬೇಕು ಎಂಬ ನಿಯಮವಿದೆ. ಸದಸ್ಯರಾಗಿದ್ದ ಚಂದ್ರಕಾಂತ ಡಿ. ಶಿವಕೇರಿ ಮಾರ್ಚ್ 8ರಂದು ನಿವೃತ್ತರಾಗಿದ್ದಾರೆ. ಸದ್ಯ ಅಧ್ಯಕ್ಷರು ಮತ್ತು 12 ಸದಸ್ಯರಿದ್ದಾರೆ. ಸದಸ್ಯರ ಪೈಕಿ, ಪ್ರೊ. ರಂಗರಾಜ ವನದುರ್ಗ ಅವರು ಅನಾರೋಗ್ಯ ಕಾರಣದಿಂದ ಹಲವು ತಿಂಗಳುಗಳಿಂದ ಗೈರಾಗಿದ್ದಾರೆ' ಎಂದರು.

ಸೃಜನ್ ಜಲಸಾಹಸಕ್ಕೆ ಸಾರ್ವಜನಿಕರ ಮೆಚ್ಚುಗೆ

ಮನೆಯಂಗಳದಲ್ಲಿ ಬಾವಿ ತೋಡಿದ ಬಾಲಕ

ಪ್ರಜಾವಾಣಿ ವಾರ್ತೆ

ಬಂಟ್ವಾಳ (ದಕ್ಷಿಣ ಕನ್ನಡ): ಮನೆಯಂಗಳದಲ್ಲಿ ಕುಡಿಯುವ ನೀರು ಸಿಗಬೇಕೆಂದು ಕನಸು ಕಂಡ ವಿದ್ಯಾರ್ಥಿ, ಏಕಾಂಗಿಯಾಗಿ ಬಾವಿ ತೋಡಿ ಎಲ್ಲರ ಗಮನ ಸೆಳೆದಿದ್ದಾನೆ.

ಇಲ್ಲಿನ ನರಿಕೊಂಬು ಗ್ರಾಮದ ನಾಯಿಲ ಕಾಪಿಕಾಡಿನಲ್ಲಿ ನೆಲೆಸಿರುವ ಲೋಕನಾಥ ಮತ್ತು ಮೋಹಿನಿ ದಂಪತಿ ಪ್ರತಿವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿದ್ದರು. ಪಾಲಕರ ಸಂಕಟ ಕಂಡ ಮಗ ಸೃಜನ್, ಮನೆಯ ಅಂಗಳದಲ್ಲಿ ಬಾವಿ ತೋಡುವ ಇಂಗಿತ ವ್ಯಕ್ತಪಡಿಸಿದ. ಇದಕ್ಕೆ ಅಪ್ಪ–ಅಮ್ಮ ಸಹಮತ ವ್ಯಕ್ತಪಡಿಸಿರಲಿಲ್ಲ.

ಕೆಲಕಾಲ ಸುಮ್ಮನಿದ್ದ ಸೃಜನ್, ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆ ಮುಗಿದ ಮೇಲೆ ಮಾರ್ಚ್‌ನಲ್ಲಿ ಏಕಾಂಗಿಯಾಗಿ ಬಾವಿ ತೋಡಲು ಆರಂಭಿಸಿದ. ಸುಮಾರು 24 ಅಡಿ ಆಳದ ಬಾವಿಯಲ್ಲಿ ಈಗ ನೀರು ಉಕ್ಕಿಬಂದಿದೆ. ಈ ಹಿಂದೆ 2022ರ ಡಿಸೆಂಬರ್‌ನಲ್ಲಿ ಇಂಗುಗುಂಡಿ ಮಾದರಿಯ ಸಣ್ಣ ಹೊಂಡ ತೋಡಿದಾಗ ಮಳೆಯ ಕಾರಣ ಕೆಲಸ ಸ್ಥಗಿತಗೊಂಡಿತ್ತು.

ಒಳ್ಳೆ ಸುದ್ದಿ

'ಬೇರೆ ಕಡೆ ಬಾವಿ ತೋಡುವ ಕೆಲಸ ಮತ್ತು ಬಾವಿಯಿಂದ ಮೇಲೇರಲು ಹೆಜ್ಜೆ ಇಡಲು ಕಿಂಡಿ ಕೊರೆಯುವುದನ್ನು ನೋಡಿದ್ದೆ. ಬಾವಿ ಆಳವಾಗುತ್ತಿದ್ದಂತೆ ಹಗ್ಗದ ಮೂಲಕ ಇಳಿದು ರಾಟೆಯಿಂದ ಒಂದು ಹಗ್ಗಕ್ಕೆ ಹೆಣೆದ ಬುಟ್ಟಿ ಮತ್ತು ಬಕೆಟ್ ಅಳವಡಿಸಿ ಇನ್ನೊಂದು ಹಗ್ಗದಿಂದ ಮೇಲೆ ಬಂದು ಮಣ್ಣು ಮತ್ತು ನೀರು ಮೇಲೆತ್ತುತ್ತಿದ್ದೆ' ಎಂದು ಬಿ.ಮೂಡ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಸೃಜನ್ ಪ್ರತಿಕ್ರಿಯಿಸಿದ.



ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮದ ನಾಯಿಲ ಕಾಪಿಕಾಡು ಎಂಬಲ್ಲಿ ತಾನು ತೋಡಿದ ಬಾವಿಯಿಂದ ಹಗ್ಗದ ಮೂಲಕ ಮೇಲೇರುತ್ತಿರುವ ಸೃಜನ್

'ಇಂಗುಗುಂಡಿ ಮಾದರಿಯಲ್ಲಿ ಬಾವಿ ತೋಡಿ ನೀರು ಪಡೆದ ಪುತ್ರನ ಏಕಾಂಗಿ ಸಾಹಸದ ಬಗ್ಗೆ ಹೆಮ್ಮೆಯಾಗುತ್ತದೆ' ಎನ್ನುತ್ತಾರೆ ಸೃಜನ್ ತಂದೆ ಲೋಕನಾಥ್.

'ವಿದ್ಯಾರ್ಥಿಯ ಸಾಧನೆ ಶ್ಲಾಘನೀಯವಾಗಿದ್ದು, ಆತನ ಮನೆಗೆ ಭೇಟಿ ನೀಡಿ ಅಭಿನಂದನೆ ಸಲ್ಲಿಸಿದ್ದೇವೆ' ಎಂದು ಜೆಸಿಐ ಘಟಕದ ಅಧ್ಯಕ್ಷ ರಾಜೇಂದ್ರ ಕೆ. ಹೇಳಿದರು.



ಬಾವಿಯಲ್ಲಿ ಉಕ್ಕಿದ ನೀರು

'ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆ, ಕೃಷಿಯಲ್ಲಿ ವಿಶೇಷ ಆಸಕ್ತಿ ಹೊಂದಿರುವ ಸೃಜನ್, ತರಕಾರಿ ಬೆಳೆಸುವಲ್ಲೂ ಎತ್ತಿದ ಕೈ. ಸೃಜನ್ ತಂದೆ ವೃತ್ತಿಯಲ್ಲಿ ಟೇಲರ್. ತಾಯಿ ಬೀಡಿ ಸುತ್ತುವ ಕೆಲಸ ಮಾಡುತ್ತಾರೆ' ಎಂದು ಸ್ಥಳೀಯರು ಹೇಳಿದರು.

ಬಿಜೆಪಿ ಟಿಕೆಟ್ ವಂಚಿತರು, ಬೆಂಬಲಿಗರ ಅಸಮಾಧಾನ • ರಾಜ್ಯದ ವಿವಿಧೆಡೆ ಪ್ರತಿಭಟನೆ

ತಪ್ಪಿದ ಟಿಕೆಟ್; ಭುಗಿಲೆದ್ದ ಆಕ್ರೋಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬಿಜೆಪಿ ಟಿಕೆಟ್ ವಂಚಿತ ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ರಾಜ್ಯದ ವಿವಿಧೆಡೆ ಬುಧವಾರ ಅಸಮಾಧಾನ, ಆಕ್ರೋಶ ಹೊರಹಾಕಿದರು. ಕೆಲವೆಡೆ ರಸ್ತೆ ತಡೆ ನಡೆಸಿ ಪ್ರತಿಭಟಿಸಿದ್ದರೆ, ಇನ್ನೂ ಕೆಲವೆಡೆ ಟೈಯರ್ ಸುಟ್ಟು ಹೈಕಮಾಂಡ್ ವಿರುದ್ಧ ಕಿಡಿಕಾರಿದರು. ಒಂದೆಡೆ ಹೈಕಮಾಂಡ್ ಕೆಲ ನಾಯಕರ ಮನವೊಲಿಸುವ ಯತ್ನ ಮುಂದುವರಿಸಿದೆ. ಆದರೆ ತೀವ್ರ ಅಸಮಾಧಾನಗೊಂಡಿರುವ ಕೆಲ ಮುಖಂಡರು ಪಕ್ಷ ತ್ಯಜಿಸಿ, ಅನ್ಯ ಪಕ್ಷ ಸೇರಿ ಸ್ಪರ್ಧಿಸುವ ನಿರ್ಧಾರ ಪ್ರಕಟಿಸಿದ್ದಾರೆ. ಇನ್ನೂ ಕೆಲ ನಾಯಕರು ಬೇಸರದಿಂದಲೇ ನಿವೃತ್ತಿಯ ಮಾತುಗಳನ್ನಾಡಿದ್ದಾರೆ.

ಧಾರವಾಡ ಕ್ಷೇತ್ರದಿಂದ ಟಿಕೆಟ್ ಸಿಗದಿರುವುದಕ್ಕೆ ಬೇಸರಗೊಂಡಿರುವ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ತವನಪ್ಪ ಅಷ್ಟಗಿ, ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ಸಲ್ಲಿಸಿದರು.

‘ಪಕ್ಷದ ಆಂತರಿಕ ಸಮೀಕ್ಷೆಯನ್ನು ವರಿಷ್ಠರು ಕಡೆಗಣಿಸಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಸ್ವಜಾತಿ (ಲಿಂಗಾಯತ ಸಾದರ) ಪ್ರೇಮದಿಂದಾಗಿ ಅಮೃತ ದೇಸಾಯಿ ಅವರಿಗೆ ಟಿಕೆಟ್ ಕೊಡಿಸಿದ್ದಾರೆ. ಇದು ನನಗೆ ಮಾತ್ರವಲ್ಲ, ಇಡೀ ಜೈನ ಸಮುದಾಯಕ್ಕೆ ಮಾಡಿರುವ ಅಪಮಾನವಾಗಿದೆ. ಶೀಘ್ರದಲ್ಲಿ ಬೆಂಬಲಿಗರ ಸಭೆ ಕರೆದು ಮುಂದಿನ ನಿರ್ಧಾರ ಪ್ರಕಟಿಸಲಾಗುವುದು’ ಎಂದು ಹೇಳಿದ್ದಾರೆ.

ಶಾಸಕ ಜಗದೀಶ ಶೆಟ್ಟರ್ ಅವರಿಗೆ ಹುಬ್ಬಳ್ಳಿ- ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿ, ಅವರ ಬೆಂಬಲಿಗರು ನಗರದ ಕೇಶ್ವಾಪುರದಲ್ಲಿ ಬುಧವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಧಾರವಾಡ ಜಿಲ್ಲೆಯ ಕುಂದಗೋಳ ಕ್ಷೇತ್ರದ ಎಸ್.ಐ. ಚಿಕ್ಕನಗೌಡರ ಕ್ಷೇತ್ರದ ಟಿಕೆಟ್ ಸಿಗದಿರುವುದರಿಂದ ಅಸಮಾಧಾನಗೊಂಡು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಪಕ್ಷೇತರವಾಗಿ ಸ್ಪರ್ಧೆ ಮಾಡಲು ನಿರ್ಧಾರ ಮಾಡಿದ್ದಾರೆ.

ಬಂಡಾಯದ ಸೂಚನೆ ನೀಡಿದ ಲಮಾಣಿ (ಗದಗ ವರದಿ): ಪಕ್ಷ ಸಕಾರಣ ನೀಡದೇ ಅವಕಾಶ ತಪ್ಪಿಸಿದೆ ಎಂದು ಶಿರಹಟ್ಟಿ ಮೀಸಲು ಕ್ಷೇತ್ರದ ಹಾಲಿ ಶಾಸಕ ರಾಮಣ್ಣ ಲಮಾಣಿ ಅಸಮಾಧಾನ ವ್ಯಕ್ತಪಡಿಸಿದ್ದು, ಬಂಡಾಯದ ಸೂಚನೆ ನೀಡಿದ್ದಾರೆ.

‘ಶಿರಹಟ್ಟಿ ಕ್ಷೇತ್ರದ ಆಕಾಂಕ್ಷಿಗಳಿಗೆಲ್ಲ ಗುರುವಾರ ಶಿರಹಟ್ಟಿ ತಾಲ್ಲೂಕಿನ ಬೆಳ್ಳಟ್ಟಿಯಲ್ಲಿ ಸಭೆ ಕರೆಯಲಾಗಿದೆ. ಆ ಒಂಬತ್ತು ಮಂದಿಯಲ್ಲಿ ಒಬ್ಬರನ್ನು ಒಮ್ಮತದಿಂದ ಆರಿಸಿ, ಪಕ್ಷೇತರರನ್ನಾಗಿ ಕಣಕ್ಕಿಳಿಸುವ ಯೋಚನೆ ಇದೆ. ಏ.14ರಂದು ಶಿರಹಟ್ಟಿಯಲ್ಲಿ 20 ಸಾವಿರ ಜನರನ್ನು ಸೇರಿಸಿ, ಅಭ್ಯರ್ಥಿ ಯಾರು ಎಂಬುದನ್ನು ಪ್ರಕಟಿಸಲಾಗುವುದು’ ಎಂದು ಶಾಸಕ ರಾಮಣ್ಣ ಲಮಾಣಿ ತಿಳಿಸಿದ್ದಾರೆ.

ಪಕ್ಷೇತರವಾಗಿ ಸ್ಪರ್ಧಿಸಲು ಸಂತೋಷ ನಿರ್ಧಾರ (ಹಾವೇರಿ ವರದಿ): ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿರ್ದೇಶಕ ಸಂತೋಷಕುಮಾರ ಪಾಟೀಲ, ರಾಣೆಬೆನ್ನೂರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೈತಪ್ಪಿದ ಕಾರಣ ಹೈಕಮಾಂಡ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾವು ಯಾರ ಆಡಳಿತ ವಿರೋಧಿಸಿದ್ದೆವೋ ಅಂಥವರಿಗೆ ಹೈಕಮಾಂಡ್ ಟಿಕೆಟ್ ನೀಡಿದೆ. ಬಿಜೆಪಿ ಪ್ರಾಥಮಿಕ ಸದಸ್ಯತ್ವ ಹಾಗೂ ನಿಗಮದ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ ಎಂದರು.

‘ಎರಡು ದಿನದೊಳಗೆ ಪರಿಹರಿಸಿ’ (ಬಾಗಲಕೋಟೆ ವರದಿ): ಟಿಕೆಟ್ ಹಂಚಿಕೆ ಸಮಸ್ಯೆಯನ್ನು ಎರಡು ದಿನಗಳೊಳಗೆ ಪರಿಹರಿಸಬೇಕು. ಇಲ್ಲದಿದ್ದರೆ, ಕಾರ್ಯಕರ್ತರ ನಿರ್ಧಾರದಂತೆ ನಡೆದುಕೊಳ್ಳುತ್ತೇವೆ ಎಂದು ಬಾದಾಮಿ ಟಿಕೆಟ್ ಆಕಾಂಕ್ಷಿಗಳಾಗಿದ್ದ ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ಮಹಾಂತೇಶ ಮಮದಾಪುರ ಹೇಳಿದರು.

‘ಅಳಿಯ (ಮಹಾಂತೇಶ)–ಮಾವ ನಡುವೆ ಜಗಳವಿದೆ ಎಂದು ಬಿಂಬಿಸಿ ಬೇರೆಯವರಿಗೆ ಟಿಕೆಟ್ ನೀಡಿದ್ದಾರೆ. ನಾನು ಇರುವವರೆಗೂ ರಾಜಕೀಯ ಮಾಡುವವನೇ. ಯಾರನ್ನ ಹೇಗೆ ಕೆಡವಬೇಕು, ಗೆಲ್ಲಿಸಬೇಕು ಎಂಬುದು ಗೊತ್ತಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ಎಂ.ಕೆ. ಪಟ್ಟಣಶೆಟ್ಟಿ ಎಚ್ಚರಿಸಿದ್ದಾರೆ.

ತೇರದಾಳದಲ್ಲೂ ಪ್ರತಿಭಟನೆ: ತೇರದಾಳ ಕ್ಷೇತ್ರದಿಂದ ನೇಕಾರರಿಗೆ ಟಿಕೆಟ್ ನೀಡಬೇಕು. ಈಗ ಘೋಷಿಸಿರುವ ಸಿದ್ದು ಸವದಿ ಹೆಸರು ಬದಲಾವಣೆ ಮಾಡಬೇಕು ಎಂದು ಆಗ್ರಹಿಸಿ ಗುರುವಾರ ಬನಹಟ್ಟಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಬಿಜೆಪಿ ಜಿಲ್ಲಾ ಘಟಕದ ಉಪಾಧ್ಯಕ್ಷ ರಾಜು ಅಂಬಲಿ ತಿಳಿಸಿದ್ದಾರೆ.

ಹುನಗುಂದ ಕ್ಷೇತ್ರದಲ್ಲೂ ಟಿಕೆಟ್ ದೊರೆಯದಿರುವುದಕ್ಕೆ ಬಿಜೆಪಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ವೀರೇಶ ಉಂಡೋಡಿ ಅಸಮಾಧಾನ ವ್ಯಕ್ತಪಡಿಸಿದ್ದು, ಕಾರ್ಯಕರ್ತರ ಸಭೆ ನಂತರ ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.



ಶಾಸಕ ಜಗದೀಶ ಶೆಟ್ಟರ್ ಅವರಿಗೆ ಬಿಜೆಪಿ ಟಿಕೆಟ್ ನೀಡಬೇಕು ಎಂದು ಆಗ್ರಹಿಸಿ, ಹುಬ್ಬಳ್ಳಿಯ ಕೇಶ್ವಾಪುರದ ಸರ್ವೋದಯ ವೃತ್ತದಲ್ಲಿ ಬೆಂಬಲಿಗರು ಬುಧವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಆನಂದ್ ಸಿಂಗ್ ಪುತ್ರನಿಗೆ ಟಿಕೆಟ್: ಸಂಯುಕ್ತಾ ಬೇಸರ

ಬಳ್ಳಾರಿ/ವಿಜಯನಗರ: ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರ ಮಗ ಸಿದ್ದಾರ್ಥ ಸಿಂಗ್ ಅವರಿಗೆ ವಿಜಯನಗರ ಕ್ಷೇತ್ರದ ಬಿಜೆಪಿ ಟಿಕೆಟ್ ಘೋಷಿಸಿದ್ದಕ್ಕೆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ, ಪ್ರಮುಖ ಟಿಕೆಟ್ ಆಕಾಂಕ್ಷಿ ರಾಣಿ ಸಂಯುಕ್ತಾ ಅವರು ಪಕ್ಷದ ಕ್ರಮಕ್ಕೆ ತೀವ್ರ ಬೇಸರ ವ್ಯಕ್ತಪಡಿಸಿ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದಾರೆ.

ಅಭ್ಯರ್ಥಿ ಆಯ್ಕೆಯಲ್ಲಿ ಪಕ್ಷದ ನಿರ್ಧಾರ ಸರಿಯಲ್ಲ. ಜಿಲ್ಲಾಮಟ್ಟದಿಂದ ಕಳುಹಿಸಿದ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಸಿದ್ದಾರ್ಥ ಸಿಂಗ್ ಹೆಸರೇ ಇರಲಿಲ್ಲ. ನನ್ನ ಬೆಂಬಲಿಗರು, ಕ್ಷೇತ್ರದಾದ್ಯಂತ ಸಂಚರಿಸಿದ ನಂತರ ಎರಡು ದಿನಗಳಲ್ಲಿ ನನ್ನ ಮುಂದಿನ ತೀರ್ಮಾನ ಪ್ರಕಟಿಸುವೆ. ಪಕ್ಷದಲ್ಲಿ ಶಿಸ್ತು ಉಳಿದಿಲ್ಲ. ಬಿಜೆಪಿಗೆ ಕರ್ನಾಟಕದ ಜನರೇ ಉತ್ತರ ಕೊಡುತ್ತಾರೆ ಎಂದು ತಿಳಿಸಿದರು.

ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾಗಿರುವ ಕೃಷ್ಣ ನಾಯ್ಕ ಹಾಗೂ ಲೋಕೇಶ್ ವಿ. ನಾಯಕ ಅವರಿಗೆ ಕ್ರಮವಾಗಿ ವಿಜಯನಗರ ಜಿಲ್ಲೆಯ ಹೂವಿನಹಡಗಲಿ, ಕೂಡ್ಲಿಗಿಯಲ್ಲಿ ಬಿಜೆಪಿ ಟಿಕೆಟ್ ಘೋಷಿಸಿರುವುದಕ್ಕೆ ಹಡಗಲಿಯ ಹಲವು ಮುಖಂಡರು ಬೆಂಗಳೂರಿಗೆ ದೌಡಾಯಿಸಿದ್ದಾರೆ. ಓದೋ ಗಂಗಪ್ಪ ಬೆಂಬಲಿಗರ ಸಭೆಯಲ್ಲಿ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲು ತೀರ್ಮಾನಿಸಿದ್ದಾರೆ. ಕೂಡ್ಲಗಿಯಲ್ಲೂ ಟಿಕೆಟ್ ಆಕಾಂಕ್ಷಿಗಳು ಸಭೆ ಸೇರಿ ಪಕ್ಷದ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ.

ಸಂಡೂರು ಕ್ಷೇತ್ರಕ್ಕೆ ಶಿಲ್ಪಾ ರಾಘವೇಂದ್ರಗೆ ಬಿಜೆಪಿ ಟಿಕೆಟ್ ಹಿನ್ನೆಲೆಯಲ್ಲಿ ಸಂಡೂರಿನ ವಿಜಯ ಸರ್ಕಲ್ ನಲ್ಲಿ ಪ್ರತಿಭಟನೆ ನಡೆಸಿದ ಟಿಕೆಟ್ ಆಕಾಂಕ್ಷಿ ಕೆಎಸ್ ದಿವಾಕರ್ ಬೆಂಬಲಿಗರು ಟೈರಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಗೆ ಸವದಿ ರಾಜೀನಾಮೆ

ಬೆಳಗಾವಿ: ಅಥಣಿ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ, ಒಮ್ಮೆ ವಿಧಾನ ಪರಿಷತ್ ಸದಸ್ಯರಾದ ಲಕ್ಷ್ಮಣ ಸವದಿಗೆ ಬಿಜೆಪಿ ಟಿಕೆಟ್ ನೀಡಿಲ್ಲ. ಆಪರೇಷನ್ ಕಮಲದ ಮೂಲಕ ಬಿಜೆಪಿಗೆ ಬಂದ ಮಹೇಶ ಕುಮಠಳ್ಳಿಗೆ ಟಿಕೆಟ್ ಕೊಟ್ಟ ಮಾತು ಉಳಿಸಿಕೊಳ್ಳಲಾಗಿದೆ. ಇದರಿಂದ ಬೇಸತ್ತ ಸವದಿ ಬಿಜೆಪಿಗೆ ರಾಜೀನಾಮೆ ಘೋಷಿಸಿದ್ದಾರೆ. ಕಾಂಗ್ರೆಸ್ ಸೇರುವ ಅಥವಾ ಬಂಡಾಯ ಏಳುವ ಸೂಚನೆಯನ್ನೂ ನೀಡಿದ್ದಾರೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಡಾ.ವಿಶ್ವನಾಥ ಪಾಟೀಲಗೆ ಬಿಜೆಪಿ ಟಿಕೆಟ್ ತಪ್ಪಿದ್ದರಿಂದ ಅವರ ಬೆಂಬಲಿಗರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಡಾ.ವಿಶ್ವನಾಥ ಪಾಟೀಲ, ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ. ಅವರೊಂದಿಗೆ ಪಕ್ಷದ ಮಂಡಲ ಅಧ್ಯಕ್ಷ ಸೇರಿದಂತೆ 600ಕ್ಕೂ ಹೆಚ್ಚು ಸದಸ್ಯರೂ ಸಾಮೂಹಿಕ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ರಾಮದುರ್ಗದ ಹಾಲಿ ಶಾಸಕ ಮಹಾದೇವಪ್ಪ ಯಾದವಾಡ ಅವರನ್ನು ಕಡೆಗಣಿಸಿ, ಕ್ಷೇತ್ರದ ಹೊರಗಿನ ವ್ಯಕ್ತಿಗೆ ಟಿಕೆಟ್ ನೀಡಿದ್ದರಿಂದ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಬುಧವಾರ ಶಾಸಕರ ಮನೆ ಮುಂದೆ ಸೇರಿದ ಅಪಾರ ಸಂಖ್ಯೆಯ ಕಾರ್ಯಕರ್ತರು, ಬಿಜೆಪಿ ನಾಯಕರ ವಿರುದ್ಧ ಆಕ್ರೋಶ ಹೊರಹಾಕಿದರು. ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಸಿದರು. ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿದರು.

ಬೆಳಗಾವಿ ಉತ್ತರ ಕ್ಷೇತ್ರದಲ್ಲಿ ಟಿಕೆಟ್ ವಂಚಿತ, ಶಾಸಕ ಅನಿಲ ಬೆನಕೆ ಬೆಂಬಲಿಗರು ನಗರದ ರಾಣಿ ಚನ್ನಮ್ಮ ವೃತ್ತದಲ್ಲಿ ಪ್ರತಿಭಟಿಸಿದರು.

ಪಕ್ಷದ ನಿರ್ಧಾರದಂತೆ ನಡೆದುಕೊಳ್ಳುವೆ: ಶೆಟ್ಟರ್

ನವದೆಹಲಿ: ಈ ಸಲದ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡ ಎಂದು ಸೂಚಿಸಿರುವ ಬಿಜೆಪಿ ಹೈಕಮಾಂಡ್ ವಿರುದ್ಧ ಬಂಡಾಯವೆದ್ದಿರುವ ಬಿಜೆಪಿ ಶಾಸಕ ಜಗದೀಶ ಶೆಟ್ಟರ್ ಅವರು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಬುಧವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ತಮ್ಮನ್ನು ಭೇಟಿ ಮಾಡುವಂತೆ ನಡ್ಡಾ ಹೇಳಿದ್ದರು. ಹುಬ್ಬಳ್ಳಿ- ಧಾರವಾಡ ಕ್ಷೇತ್ರದ ಬಗ್ಗೆ ಚರ್ಚೆ ಮಾಡಬೇಕಿತ್ತು. ನಡ್ಡಾ ಅವರ ಜೊತೆ ಚರ್ಚೆ ಮಾಡಿದ್ದೇನೆ. ಎಲ್ಲ ವಿಚಾರಗಳನ್ನು ತಿಳಿಸಿದ್ದೇನೆ. ಮಾಹಿತಿ ಪಡೆದಿರುವ ಅವರು, ಯೋಗ್ಯ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಅವರ ಮುಂದಿನ ನಿರ್ಧಾರ ಮತ್ತು ಪಕ್ಷದ ನಿರ್ಧಾರದಂತೆ ನಾನು ನಡೆದುಕೊಳ್ಳುತ್ತೇನೆ’ ಎಂದು ಹೇಳಿದರು.



ಪುತ್ತೂರು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಅರುಣ್ ಪುತ್ತಿಲ ನೇತೃತ್ವದಲ್ಲಿ ಪುತ್ತೂರಿನಲ್ಲಿ ಬುಧವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಬೆಂಬಲಿಗರು

ಪುತ್ತೂರಿನಲ್ಲಿ ಹಿಂದುತ್ವ ಕಾರ್ಯಕರ್ತರ ಆಕ್ರೋಶ

ಮಂಗಳೂರು/ಉಡುಪಿ: ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಘೋಷಣೆಯಾದ ಬೆನ್ನಲ್ಲೇ ಟಿಕೆಟ್ ಕೈ ತಪ್ಪಿರುವ ಸುಳ್ಯ ಶಾಸಕ ಎಸ್. ಅಂಗಾರ ಅವರು ರಾಜಕೀಯ ನಿವೃತ್ತಿ ಘೋಷಿಸಿದರೆ, ಉಡುಪಿ ಶಾಸಕ ಕೆ.ರಘುಪತಿ ಭಟ್ ಕಣ್ಣೀರು ಹಾಕಿದ್ದಾರೆ. ಹೊಸ ಮುಖಕ್ಕೆ ಮಣೆ ಹಾಕಿರುವ ಪುತ್ತೂರು ಕ್ಷೇತ್ರದಲ್ಲಿ ಅಭ್ಯರ್ಥಿ ವಿರುದ್ಧ ಕಾರ್ಯಕರ್ತರ ಆಕ್ರೋಶ ಸ್ಫೋಟಗೊಂಡಿದೆ.

ಸುಳ್ಯ ಮೀಸಲು ಕ್ಷೇತ್ರದಲ್ಲಿ ಆರು ಬಾರಿ ಶಾಸಕರಾಗಿರುವ ಅಂಗಾರ ಅವರ ಬದಲಿಗೆ ಈ ಬಾರಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭಾಗೀರಥಿ ಮುರುಳ್ಯ ಅವರಿಗೆ ಮಣೆ ಹಾಕಿದೆ. ಈ ಬಗ್ಗೆ ಬೇಸರಗೊಂಡಿರುವ ಅಂಗಾರ ಅವರು, ‘ಪಕ್ಷ ಟಿಕೆಟ್ ನೀಡದಿರುವ ಕುರಿತು ನನಗೆ ಅಸಮಾಧಾನ ಇಲ್ಲ. ಆದರೆ, ಇಷ್ಟು ವರ್ಷ ಪಕ್ಷಕ್ಕಾಗಿ ಮತ್ತು ಸಮಾಜಕ್ಕಾಗಿ ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಮಾಡಿರುವ ಕೆಲಸವನ್ನು ಗೌರವಿಸುವ ಕ್ರಮ ಇದಲ್ಲ. ಚುನಾವಣಾ ಪ್ರಚಾರವನ್ನೂ ಮಾಡುವುದಿಲ್ಲ. ಹೊಸ ಅಭ್ಯರ್ಥಿ ಮತ್ತು ಅವರ ಗೆಲುವನ್ನು ಪಕ್ಷ ನೋಡಿಕೊಳ್ಳಬಹುದು’ ಎಂದು ಪ್ರತಿಕ್ರಿಯಿಸಿದ್ದಾರೆ.

ಇನ್ನು, ಪುತ್ತೂರು ಕ್ಷೇತ್ರದಲ್ಲಿ ಕಾರ್ಯಕರ್ತರ ವಿರೋಧ ಎದುರಿಸುತ್ತಿದ್ದ ಹಾಲಿ ಶಾಸಕ ಸಂಜೀವ ಮಠಂದೂರು ಅವರನ್ನು ಕೈಬಿಟ್ಟು ಬಿಜೆಪಿ ಹೈಕಮಾಂಡ್ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ ಅವರಿಗೆ ಟಿಕೆಟ್ ನೀಡಿದೆ. ಆದರೆ, ಜಾತಿ ಲೆಕ್ಕಾಚಾರ ತಾಳೆ ಹಾಕಿ ಗೌಡ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡಿ, ಹಿಂದುತ್ವ ಕಾರ್ಯಕರ್ತರನ್ನು ಕಡೆಗಣಿಸಲಾಗಿದೆ ಎಂದು ಹಿಂದುತ್ವ ಕಾರ್ಯಕರ್ತರು ಆರೋಪಿಸಿದ್ದು, ಈ ಬಗ್ಗೆ ತಮ್ಮ ಅಸಮಾಧಾನವನ್ನೂ ತೋಡಿಕೊಂಡಿದ್ದಾರೆ.

ಹಿಂದುತ್ವ ಕಾರ್ಯಕರ್ತ ಅರುಣ್ ಕುಮಾರ್ ಪುತ್ತಿಲ ಅವರಿಗೆ ಟಿಕೆಟ್ ನೀಡುವಂತೆ ಒತ್ತಾಯಿಸಿರುವ ಹಿಂದುತ್ವ ಕಾರ್ಯಕರ್ತರು, ಇಲ್ಲದಿದ್ದರೆ ನೋಟಾಕ್ಕೆ ಮತ ಹಾಕುವ ಎಚ್ಚರಿಕೆಯನ್ನೂ ನೀಡಿದ್ದಾರೆ.

ಕಣ್ಣೀರಿಟ್ಟ ರಘುಪತಿ ಭಟ್: ಉಡುಪಿ ಶಾಸಕ ಕೆ.ರಘುಪತಿ ಭಟ್ ಕಣ್ಣೀರು ಹಾಕಿದ್ದಾರೆ. ‘ಪಕ್ಷದ ನಿರ್ಧಾರದ ಬಗ್ಗೆ ಬೇಸರವಿಲ್ಲ; ಆದರೆ, ಪಕ್ಷ ನಡೆಸಿಕೊಂಡ ರೀತಿ ಬೇಸರ ತಂದಿದೆ’ ಎಂದು ದುಃಖ ತೋಡಿಕೊಂಡಿದ್ದಾರೆ.

‘ಜಾತಿಯ ಕಾರಣಕ್ಕೆ ಟಿಕೆಟ್ ಕೊಡಲು ಸಾಧ್ಯವಿಲ್ಲ ಎಂದು ಮೊದಲೇ ಹೇಳಿದ್ದರೆ, ಈಶ್ವರಪ್ಪ ಅವರಂತೆ ಸ್ವಯಂ ರಾಜಕೀಯ ನಿವೃತ್ತಿ ಘೋಷಿಸುತ್ತಿದ್ದೆ’ ಎಂದು ಸುದ್ದಿಗಾರರ ಎದುರು ಬುಧವಾರ ಅಸಮಾಧಾನ ವ್ಯಕ್ತಪಡಿಸಿದರು.

‘ಬಿಜೆಪಿ ತೊರೆಯುತ್ತೇನೆ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹೊಸದುರ್ಗ ವಿಧಾನಸಭಾ ಕ್ಷೇತ್ರದ ಟಿಕೆಟ್ ಕೈತಪ್ಪಿದ್ದರಿಂದ ತೀವ್ರ ಅಸಮಾಧಾನಗೊಂಡಿರುವ ಶಾಸಕ ಗೂಳಿಹಟ್ಟಿ ಡಿ.ಶೇಖರ್, ಬಿಜೆಪಿ ತೊರೆಯುವುದಾಗಿ ಘೋಷಿಸಿದ್ದಾರೆ. ಪಕ್ಷೇತರ ಅಥವಾ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಅಭ್ಯರ್ಥಿಯಾಗಿ ಅಖಾಡಕ್ಕೆ ಇಳಿಯುವ ನಿರ್ಧಾರ ಪ್ರಕಟಿಸಿದ್ದಾರೆ.

ವಾಣಿವಿಲಾಸ ಜಲಾಶಯದ ಹಿನ್ನೀರಿನ ಹಾರನ ಕಣಿವೆ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಬುಧವಾರ ಬೆಂಬಲಿಗರ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ ಅವರು, ಕ್ಷೇತ್ರ ವ್ಯಾಪ್ತಿಯಲ್ಲಿ ಬೈಕ್ ಜಾಥಾ ನಡೆಸಿ ಚುನಾವಣಾ ಪ್ರಚಾರ ಆರಂಭಿಸಿದರು.

ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೈತಪ್ಪಿದ್ದಕ್ಕೆ ಆಕ್ರೋಶ

ಜೆಡಿಎಸ್‌ನಿಂದ ದೊಡ್ಡಪ್ಪಗೌಡ ಕಣಕ್ಕೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಬೇಸರಗೊಂಡಿರುವ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಅವರು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬುಧವಾರ ಭೇಟಿಯಾದರು.

‘ತಮ್ಮ ಆಪ್ತರೊಂದಿಗೆ ನಗರದ ಹೋಟೆಲ್‌ನಲ್ಲಿ ಕುಮಾರಸ್ವಾಮಿ ಅವರನ್ನು ಭೇಟಿಯಾಗಿ, ಜೇವರ್ಗಿ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವ ಕುರಿತು ಚರ್ಚಿಸಿದ್ದಾರೆ. ಟಿಕೆಟ್ ನೀಡುವ ಆಶ್ವಾಸನೆ ಸಿಕ್ಕಿದ್ದು, ಗುರುವಾರ ಅಧಿಕೃತವಾಗಿ ಜೆಡಿಎಸ್ ಸೇರುವ ಸಾಧ್ಯತೆ ಇದೆ’ ಎಂದು ಹೇಳಲಾಗುತ್ತಿದೆ.

ಇದಕ್ಕೂ ಮುನ್ನ ಜೇವರ್ಗಿಯಲ್ಲಿ ತಮ್ಮ ಸಾವಿರಾರು ಬೆಂಬಲಿಗರು ಮತ್ತು ಅಭಿಮಾನಿಗಳ ಸಭೆ ನಡೆಸಿದ ಅವರು, ‘ನಮ್ಮ ತಂದೆ ದಿ.ಶಿವಲಿಂಗಪ್ಪ ಪಾಟೀಲ ನರಿಬೋಳ ಸೇರಿ ನೂರಾರು ಮುಖಂಡರು ಜೊತೆಗೂಡಿ ತಾಲ್ಲೂಕಿನಲ್ಲಿ ಬಿಜೆಪಿ ಕಟ್ಟಿ ಬೆಳೆಸಿದ್ದೆವು. ಆದರೆ, ಪಕ್ಷದ ಕಟ್ಟಿದ್ದ ನನಗೇನೆ ಟಿಕೆಟ್ ನಿರಾಕರಿಸಲಾಗಿದೆ. ನನ್ನ ಏಳಿಗೆ ಸಹಿಸದ ಕೆಲವರು ಟಿಕೆಟ್ ತಪ್ಪಿಸಿದ್ದಾರೆ’ ಎಂದರು.

‘ಅಧಿಕಾರ ಇದ್ದರೂ ಇಲ್ಲದಿದ್ದರೂ ಜನರ ಸೇವೆ ಮಾಡುವೆ. ಕಷ್ಟ–ಸುಖಗಳಲ್ಲಿ ಭಾಗಿಯಾಗುವೆ. ಆದರೆ, ಬೆಂಬಲಿಗರು ಮತ್ತು ಅಭಿಮಾನಿಗಳ ಸ್ವಾಭಿಮಾನಕ್ಕೆ ಧಕ್ಕೆ ತರುವ ಕೆಲಸ ಮಾಡುವುದಿಲ್ಲ’ ಎಂದರು.



ಬಿಜೆಪಿ ಟಿಕೆಟ್ ಕೈತಪ್ಪಿದ ಹಿನ್ನೆಲೆಯಲ್ಲಿ ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ ಬುಧವಾರ ದೊಡ್ಡಪ್ಪಗೌಡ ಪಾಟೀಲ ಅವರು ಬೆಂಬಲಿಗರು, ಅಭಿಮಾನಿಗಳ ಸಭೆಯಲ್ಲಿ ಮಾತನಾಡಿದರು

ಧರ್ಮಸಿಂಗ್ ವಿರುದ್ಧ 70 ಮತಗಳಿಂದ ಗೆದ್ದಿದ್ದರು

2008ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಅವರು ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಅವರನ್ನು 70 ಮತಗಳಿಂದ ಸೋಲಿಸಿದ್ದರು. 2013 ಮತ್ತು 2018ರ ಚುನಾವಣೆಯಲ್ಲಿ ಧರ್ಮಸಿಂಗ್ ಪುತ್ರ ಅಜಯ ಸಿಂಗ್ ವಿರುದ್ಧ ಸೋತಿದ್ದರು.

ಮಾಲೀಕಯ್ಯ ವಿರುದ್ಧ ತೊಡೆತಟ್ಟಿದ ತಮ್ಮ ನಿತಿನ್

ಕಲಬುರಗಿ: ಅಫಜಲಪುರ ಕ್ಷೇತ್ರದಲ್ಲಿ ಗುತ್ತೇದಾರ ಸಹೋದರರ ನಡುವಿನ ಕದನ ತಾರಕಕ್ಕೇರಿದ್ದು, ಬಿಜೆಪಿ ಟಿಕೆಟ್ ತಪ್ಪಿದ್ದರಿಂದ ಅಸಮಾಧಾನಗೊಂಡಿರುವ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ನಿತಿನ್ ಗುತ್ತೇದಾರ ಅವರು ಅಣ್ಣ ಮಾಲೀಕಯ್ಯ ಗುತ್ತೇದಾರ ವಿರುದ್ಧ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

‘ಸಹೋದರ ಮಾಲೀಕಯ್ಯ ಅವರ ಮನವೊಲಿಕೆಗೆ ಬಗ್ಗುವುದಿಲ್ಲ. ಮಾತುಕತೆ ಮುಗಿದು ಹೋದ ಅಧ್ಯಾಯ. ಪಕ್ಷ ನನ್ನ ಕೈಬಿಟ್ಟರೂ ಕ್ಷೇತ್ರದ ಮತದಾರರು ನನ್ನ ಕೈಬಿಡುವುದಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವೆ’ ಎಂದು ನಿತಿನ್ ಗುತ್ತೇದಾರ ತಿಳಿಸಿದರು.

‘ನಿತಿನ್ ಆವೇಶದಿಂದ ಮಾತನಾಡಿರಬಹುದು. ಆದರೆ, ನನ್ನ ಮಾತು ಮೀರಲ್ಲ ಎಂಬ ವಿಶ್ವಾಸವಿದೆ. ಕುಟುಂಬದ ಆಂತರಿಕ ವಿಷಯ ನಾವೇ ಬಗೆಹರಿಸಿಕೊಳ್ಳುತ್ತೇವೆ. ನನಗೆ ಸಹಕಾರ ಸಿಗಲಿದೆ ಎಂಬ ವಿಶ್ವಾಸವಿದೆ. ಅವನೇ ಮುಂದಿನ ಉತ್ತರಾಧಿಕಾರಿ. ನನ್ನ ಮಕ್ಕಳನ್ನು ನಾನು ರಾಜಕೀಯದಲ್ಲಿ ಬೆಳೆಸಿಲ್ಲ’ ಎಂದು ಮಾಲೀಕಯ್ಯ ಗುತ್ತೇದಾರ ತಿಳಿಸಿದರು.

ಬಿಜೆಪಿಗೆ ರಾಜೀನಾಮೆ: ‘ಕಾಣದ ಕೈಗಳು ಟಿಕೆಟ್ ತಪ್ಪಿಸುವಲ್ಲಿ ಯಶಸ್ವಿಯಾಗಿವೆ. ನಮ್ಮ ಪಕ್ಷದವರೇ ಟಿಕೆಟ್ ಸಿಗದಂತೆ ಷಡ್ಯಂತ್ರ ಮಾಡಿದ್ದಾರೆ. ನನಗೆ ಬಿಜೆಪಿ ದ್ರೋಹ ಮಾಡಿದ್ದು, ನಾನು ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ’ ಎಂದು ಶಹಾಪುರದ ಮಾಜಿ ಶಾಸಕ ಗುರು ಪಾಟೀಲ ಶಿರವಾಳ ಅವರು ಘೋಷಿಸಿದರು.

ಸೊಗಡು, ಮುದ್ದಹನುಮೇಗೌಡ ಬಂಡಾಯ

ಪ್ರಜಾವಾಣಿ ವಾರ್ತೆ

ತುಮಕೂರು: ಬಿಜೆಪಿಯಲ್ಲಿ ಟಿಕೆಟ್ ಸಿಗದ ಕಾರಣ ಮಾಜಿ ಶಾಸಕ ಸೊಗಡು ಶಿವಣ್ಣ ಹಾಗೂ ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಪಕ್ಷ ತೊರೆಯಲು ಮುಂದಾಗಿದ್ದಾರೆ.

ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿರುವ ಸೊಗಡು ಶಿವಣ್ಣ ಅವರು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಒಂದೆರಡು ದಿನದಲ್ಲಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕುಣಿಗಲ್ ಕ್ಷೇತ್ರದಲ್ಲಿ ಟಿಕೆಟ್ ಸಿಗುವ ಭರವಸೆಯೊಂದಿಗೆ ಸಿದ್ಧತೆ ನಡೆಸಿದ್ದ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಅವರು ಬಿಜೆಪಿ ವರಿಷ್ಠರ ವಿರುದ್ಧ ಅಸಮಾಧಾನ ಹೊರ ಹಾಕಿದ್ದು, ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಒಮ್ಮತದ ಅಭ್ಯರ್ಥಿ ಆಯ್ಕೆಗೆ ಯತ್ನ

ಕುಣಿಗಲ್: ಕಾಂಗ್ರೆಸ್ ಮತ್ತು ಬಿಜೆಪಿ ಟಿಕೆಟ್‌ನಿಂದ ವಂಚಿತರಾಗಿರುವ ಪೈಕಿ ಯಾರಾದರೂ ಒಬ್ಬರನ್ನು ಒಮ್ಮತದ ಅಭ್ಯರ್ಥಿಯನ್ನಾಗಿ ಕುಣಿಗಲ್ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ಯತ್ನ ಆರಂಭವಾಗಿದೆ.

ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿ ಗೌಡ ಕಾಂಗ್ರೆಸ್ ಟಿಕೆಟ್ ಬಯಸಿದ್ದರೆ, ಎಸ್.ಪಿ.ಮುದ್ದಹನುಮೇಗೌಡ ಮತ್ತು ರಾಜೇಶ್ ಗೌಡ ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಈ ಮೂವರಿಗೂ ಟಿಕೆಟ್ ಕೈತಪ್ಪಿದ್ದು, ಆ ಪೈಕಿ ಒಬ್ಬರನ್ನು ಒಮ್ಮತದ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಬುಧವಾರ ಬೆಂಬಲಿಗರು ನಿರ್ಧರಿಸಿದ್ದಾರೆ.

ರಾಷ್ಟ್ರೀಯ ಪಕ್ಷಗಳು ಪಕ್ಷಕ್ಕಾಗಿ ದುಡಿದ ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿವೆ. ಮೂವರೂ ಸೇರಿ ಒಮ್ಮತದ ಅಭ್ಯರ್ಥಿ ಯನ್ನು ಆಯ್ಕೆ ಮಾಡಿ ತಾಲ್ಲೂಕಿನಲ್ಲಿ ಹೊಸ ರಾಜಕೀಯ ಬದಲಾವಣೆ ಮಾಡಲು ಸಿದ್ಧ. ಒಮ್ಮತದ ಅಭ್ಯರ್ಥಿ ಯಾರೇ ಆಗಲಿ, ಅವರ ಗೆಲುವಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ, ಮಾಜಿ ಶಾಸಕ ಬಿ.ಬಿ.ರಾಮಸ್ವಾಮಿ ಗೌಡ ಹೇಳಿದ್ದಾರೆ.

‘ಮಗಳ ನಡೆಯಿಂದ ಎದೆಗೆ ಚೂರಿ’

ಸಾಗರ: ‘ಮಗಳು ಬಿಜೆಪಿ ಸೇರಿರುವುದು ಎದೆಗೆ ಚೂರಿ ಹಾಕಿದಂತಾಗಿದೆ. ಈ ಕೆಲಸ ಮಾಡಬಾರದಿತ್ತು’ ಎಂದು ಕಾಂಗ್ರೆಸ್ ಮುಖಂಡ ಕಾಗೋಡು ತಿಮ್ಮಪ್ಪ ಬೇಸರ ವ್ಯಕ್ತಪಡಿಸಿದರು. ‘ಆಕೆ ಬಿಜೆಪಿ ಸೇರುವ ವಿಚಾರ ನನಗೆ ಗೊತ್ತಿರಲಿಲ್ಲ. ಈ ರೀತಿ ಮಾಡುತ್ತಾಳೆ ಎಂಬುದನ್ನು ಕನಸಲ್ಲೂ ಯೋಚಿಸಿರಲಿಲ್ಲ. ಇದೆಲ್ಲ ಶಾಸಕ ಹರತಾಳು ಹಾಲಪ್ಪ ಅವರ ತಂತ್ರ ಇರಬಹುದು’ ಎಂದು ಪ್ರತಿಕ್ರಿಯಿಸಿದ್ದಾರೆ. ‘ರಾಜಕಾರಣದಲ್ಲಿ ಬದ್ಧತೆ, ಸ್ಥಿರತೆ ಇಟ್ಟುಕೊಂಡು ಬೆಳೆದು ಬಂದವರು ನಾವು. ಏನೇ ಆಗಲಿ ನಾನು ಕಾಂಗ್ರೆಸ್ ಬಿಟ್ಟು ಹೋಗುವುದಿಲ್ಲ. ಕಾಂಗ್ರೆಸ್ ಪರವಾಗಿ ನಿಲ್ಲುತ್ತೇನೆ’ ಎಂದು ಕಾಗೋಡು ತಿಮ್ಮಪ್ಪ ಸ್ಪಷ್ಟಪಡಿಸಿದರು.

ಬಂಡಾಯ ಭಾರಿ, ಗುಳೆಗೆ ತಯಾರಿ

ಒಂದನೇ ಪುಟದಿಂದ...

‘ಗುರುವಾರ ಸಂಜೆ ಮುರುಘೇಂದ್ರ ಶಿವಯೋಗಿಗಳ ಮಠದಲ್ಲಿ ಸಭೆ ಕರೆದಿದ್ದೇನೆ. ನನ್ನ ಜನರಿಂದ ಮಾರ್ಗದರ್ಶನ ಪಡೆದು ಮುಂದಿನ ಹೆಜ್ಜೆ ಇಡುತ್ತೇನೆ’ ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಇತರ ಸಚಿವರು ಅವರ ಮನವೊಲಿಸುವ ಕಾರ್ಯಕ್ಕೆ ಕೈಹಾಕಿದ್ದಾರೆ.

ಉಡುಪಿಯ ಶಾಸಕ ರಘುಪತಿ ಭಟ್ ಅವರು ಕಣ್ಣೀರು ಸುರಿಸಿ, ‘ನಾನು ಬ್ರಾಹ್ಮಣ ಆಗಿರುವ ಕಾರಣಕ್ಕೆ ಅವಕಾಶ ನಿರಾಕರಿಸಲಾಗಿದೆ. ಜಾತಿಯ ಕಾರಣಕ್ಕೆ ಟಿಕೆಟ್ ಕೊಡಲು ಸಾಧ್ಯವಿಲ್ಲ ಎಂದು ಮೊದಲೇ ಹೇಳಿದ್ದರೆ, ಈಶ್ವರಪ್ಪ ಅವರಂತೆ ಸ್ವಯಂ ರಾಜಕೀಯ ನಿವೃತ್ತಿ ಪಡೆಯುತ್ತಿದ್ದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಬೆಳಗಾವಿಯಲ್ಲಿ ಶಾಸಕ ಅನಿಲ್ ಬೆನಕೆ, ರಾಮದುರ್ಗದಲ್ಲಿ ಶಾಸಕ ಮಹಾದೇವಪ್ಪ ಅವರ ಬೆಂಬಲಿಗರು ಸಿಟ್ಟಿಗೆದ್ದು ರಸ್ತೆಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಬೈಲಹೊಂಗಲ ಕ್ಷೇತ್ರದಲ್ಲಿ ಟಿಕೆಟ್ ಪ್ರಬಲ ಆಕಾಂಕ್ಷಿಯಾಗಿದ್ದ ಡಾ. ವಿಶ್ವನಾಥ ಪಾಟೀಲ, ಕುಂದಗೋಳದ ಆಕಾಂಕ್ಷಿ ಎಸ್.ಐ.ಚಿಕ್ಕನಗೌಡ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ. ಜೇವರ್ಗಿ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಬೇಸರಗೊಂಡ ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಬಳ್ಳಾರಿ ಬಿಜೆಪಿಯಲ್ಲಿ ಬಂಡಾಯದ ಬಿಸಿ ತಾರಕಕ್ಕೇರಿದೆ. ಸಂಡೂರು ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಎಸ್. ದಿವಾಕರ್‌ಗೆ ಟಿಕೆಟ್ ಸಿಕ್ಕಿಲ್ಲ. ಶಿಲ್ಪಾ ರಾಘವೇಂದ್ರಗೆ ಟಿಕೆಟ್ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ದಿವಾಕರ್ ತೀವ್ರ ಅಸಮಾಧಾನಗೊಂಡಿದ್ದಾರೆ.

ತುಮಕೂರು ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಸೊಗಡು ಶಿವಣ್ಣ, ಟಿಕೆಟ್ ಕೈ ತಪ್ಪಿದ್ದರಿಂದ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ಪಕ್ಷೇತರರಾಗಿ ಸ್ಪರ್ಧಿಸುವ ಸಾಧ್ಯತೆ ಇದೆ. ಇತ್ತೀಚೆಗೆ ಕಾಂಗ್ರೆಸ್‌ನಿಂದ ಬಿಜೆಪಿಎ ಬಂದಿದ್ದ ಮಾಜಿ ಸಂಸದ ಎಸ್.ಪಿ.ಮುದ್ದಹನುಮೇಗೌಡ ಅವರು ಬಂಡಾಯದ ಬಾವುಟ ಹಾರಿಸಿದ್ದಾರೆ.

ಬೆಂಗಳೂರಿನ ಪದ್ಮನಾಭನಗರ, ಬ್ಯಾಟರಾಯನಪುರ, ಬಸವನಗುಡಿ, ನೆಲಮಂಗಲದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಗಳು ಬಂಡಾಯದ ಬಾವುಟ ಹಾರಿಸಿದ್ದಾರೆ. ನೆಲಮಂಗಲದಲ್ಲಿ ಮಾಜಿ ಶಾಸಕ ಎಂ.ವಿ. ನಾಗರಾಜು ಪಕ್ಷದ ಅಭ್ಯರ್ಥಿ ವಿರುದ್ಧ ಕೆಲಸ ಮಾಡಲು ತೀರ್ಮಾನಿಸಿದ್ದಾರೆ.

ಬಿಜೆಪಿ ಸೇರಿದ ಕಾಗೋಡು ಪುತ್ರಿ

ಪ್ರಜಾವಾಣಿ ವಾರ್ತೆ



ರಾಜನಂದಿನಿ ಕಾಗೋಡು

ಸಾಗರ (ಶಿವಮೊಗ್ಗ ಜಿಲ್ಲೆ): ಕಾಂಗ್ರೆಸ್ ಹಿರಿಯ ಮುಖಂಡ, ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರ ಪುತ್ರಿ ಡಾ. ರಾಜನಂದಿನಿ ಕಾಗೋಡು ಅವರು ಬುಧವಾರ ಬಿಜೆಪಿ ಸೇರಿದರು.

ಕೆಪಿಸಿಸಿ ಕಾರ್ಯದರ್ಶಿಯಾಗಿದ್ದ ರಾಜನಂದಿನಿ ಸಾಗರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಪಕ್ಷದ ವರಿಷ್ಠರು ಮಾಜಿ ಶಾಸಕ ಗೋಪಾಕೃಷ್ಣ ಬೇಳೂರು ಅವರಿಗೆ ಟಿಕೆಟ್ ಘೋಷಿಸಿದ್ರಿಂದ ಮುನಿಸಿಕೊಂಡು, ಕೆಲ ದಿನಗಳಿಂದ ಪಕ್ಷದ ಚಟುವಟಿಕೆಗಳಿಂದ ಅಂತರ ಕಾಯ್ದುಕೊಂಡಿದ್ದರು.

ರಾಜನಂದಿನಿ ಅವರೊಂದಿಗೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಹೊನಗೋಡು ರತ್ನಾಕರ್ ಕೂಡ ಬಿಜೆಪಿಯತ್ತ ಮುಖ ಮಾಡಿದ್ದಾರೆ. ಬೆಳಿಗ್ಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಚರ್ಚಿಸಿದ ರಾಜನಂದಿನಿ,- ಬಿಜೆಪಿ ಸೇರಿದರು.

ಈ ವೇಳೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಶಾಸಕ ಹರತಾಳು ಹಾಲಪ್ಪ ಇದ್ದರು.

ದೇವೇಗೌಡ ಭೇಟಿಯಾದ ದತ್ತ

ಚಿಕ್ಕಮಗಳೂರು: ಕಾಂಗ್ರೆಸ್ ಟಿಕೆಟ್ ಕೈತಪ್ಪಿ ಪಕ್ಷೇತರರಾಗಿ ಸ್ಪರ್ಧಿಸಲು ತೀರ್ಮಾನಿಸಿರುವ ಮಾಜಿ ಶಾಸಕ ವೈ.ಎಸ್.ವಿ ದತ್ತ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಬುಧವಾರ ಬೆಂಗಳೂರಿನಲ್ಲಿ ಭೇಟಿಯಾದರು.

ದತ್ತ ಮತ್ತೆ ಜೆಡಿಎಸ್ ಸೇರುತ್ತಾರೆಯೇ? ಕಡೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬದಲಾವಣೆಯಾಗುತ್ತಾರೆಯೇ? ಎಂಬ ಚರ್ಚೆ ನಡೆದಿವೆ.

‘ವರಿಷ್ಠರು ಕಡೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬದಲಾಯಿಸಿ ದತ್ತ ಅವರಿಗೆ ಅವಕಾಶ ನೀಡಿದರೆ ಒಪ್ಪಿಕೊಳ್ಳುತ್ತೇವೆ’ ಎಂದು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ರಂಜನ್ ಅಜಿತ್‌ಕುಮಾರ್ ಪ್ರತಿಕ್ರಿಯಿಸಿದರು.

ಸೋಮಣ್ಣ ವಿರುದ್ಧ ಬಂಡಾಯ

ಚಾಮರಾಜನಗರ: ಜಿಲ್ಲೆಯ ನಾಲ್ಕೂ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳ ಹೆಸರು ಘೋಷಿಸುತ್ತಿದ್ದಂತೆಯೇ ಆಕಾಂಕ್ಷಿಗಳಲ್ಲಿ ಅಸಮಾಧಾನದ ಹೊಗೆ ಎದ್ದಿದೆ.

ಚಾಮರಾಜನಗರ ಕ್ಷೇತ್ರದ ಪ್ರಬಲ ಆಕಾಂಕ್ಷಿಯಾಗಿದ್ದ ಕೆಐಆರ್ ಡಿಎಲ್ ಎಂ.ರುದ್ರೇಶ್ ಚಾಮರಾಜನಗರ ಮತ್ತು ವರುಣ ಕ್ಷೇತ್ರಗಳಿಂದ ಟಿಕೆಟ್ ಪಡೆದಿರುವ ಸಚಿವ ವಿ.ಸೋಮಣ್ಣ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ‘ವರುಣದಲ್ಲಿ ಮಾತ್ರ ಸ್ಪರ್ಧಿಸಿ ತಾಕತ್ತು ತೋರಿಸಲಿ’ ಎಂದು ಸವಾಲು ಹಾಕಿದ್ದಾರೆ. ‘ಟಿಕೆಟ್ ಕೈತಪ್ಪಿರುವುದರಿಂದ ಬೆಂಬಲಿಗರಿಗೆ ಅಸಮಾಧಾನವಾಗಿದ್ದು, ಪಕ್ಷೇತರರಾಗಿ ಸ್ಪರ್ಧಿಸುವಂತೆ ಒತ್ತಡ ಹಾಕುತ್ತಿದ್ದಾರೆ. ಒಂದೆರಡು ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳುವೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮತ್ತೊಬ್ಬ ಆಕಾಂಕ್ಷಿ ಜಿ.ನಾಗಶ್ರೀ ಬೆಂಬಲಿಗರು ಗುರುವಾರ ಸಭೆ ಕರೆದಿದ್ದು, ಅಲ್ಲಿ ಟಿಕೆಟ್ ಕೈತಪ್ಪಿರುವ ಬಗ್ಗೆ ಚರ್ಚಿಸಲಿದ್ದಾರೆ.

ಹನೂರು ಕ್ಷೇತ್ರದಲ್ಲಿ ಬಿ.ವೆಂಕಟೇಶ್ ಮತ್ತು ನಿಶಾಂತ್ ಬೆಂಬಲಿಗರೊಂದಿಗೆ ಸಭೆ ನಡೆಸಿದ್ದಾರೆ. ಗುಂಡ್ಲುಪೇಟೆಯಲ್ಲಿ ನಿರಂಜನ್‌ಕುಮಾರ್ ವಿರುದ್ಧ ಬಂಡಾಯವೆದ್ದಿರುವ ಎಂ.ಪಿ.ಸುನಿಲ್ ಪಕ್ಷೇತರರಾಗಿ ಸ್ಪರ್ಧಿಸುವುದು ಖಚಿತ ಎಂದು ಬೆಂಬಲಿಗರು ತಿಳಿಸಿದ್ದಾರೆ. ಕೊಳ್ಳೇಗಾಲದಲ್ಲಿ ಎಸ್‌ಸಿ ಮೋರ್ಚಾ ಜಿಲ್ಲಾ ಅಧ್ಯಕ್ಷ ಕಿನಕನಹಳ್ಳಿ ರಾಚಯ್ಯ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಬಿಜೆಪಿ ದಾಳಕ್ಕೆ ‘ಕೈ’ ನಾಯಕರ ಸವಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರುಣದಲ್ಲಿ ಸಿದ್ದರಾಮಯ್ಯ ವಿರುದ್ಧ ಸಚಿವ ವಿ. ಸೋಮಣ್ಣ, ಕನಕಪುರದಲ್ಲಿ ಡಿ.ಕೆ. ಶಿವಕುಮಾರ್ ವಿರುದ್ಧ ಸಚಿವ ಕೆ. ಅಶೋಕ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿರುವ ಬಿಜೆಪಿ ವರಿಷ್ಠರ ನಡೆ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ.

ವರುಣದಲ್ಲಿ ಸುಲಭ ಜಯದ ನಿರೀಕ್ಷೆಯಲ್ಲಿದ್ದ ಸಿದ್ದರಾಮಯ್ಯ, ಕೋಲಾರ ಕ್ಷೇತ್ರದಿಂದಲೂ ಕಣಕ್ಕಿಳಿಯಲು ಬಯಸಿದ್ದಾರೆ. ಆದರೆ, ಬಿಜೆಪಿಯ ಈ ದಾಳ ಅವರನ್ನು ಗಲಿಬಿಲಿಗೊಳಿಸಿದೆ. ಆ ಬೆನ್ನಲ್ಲೇ ಅವರು, ಇದನ್ನು ಸವಾಲಾಗಿ ಸ್ವೀಕರಿಸಿ ತಮ್ಮ ಆಪ್ತರ ಜೊತೆ ಚರ್ಚೆ ನಡೆಸಿದ್ದು, ತಂತ್ರಗಾರಿಕೆ ರೂಪಿಸುತ್ತಿದ್ದಾರೆ.

ಶಾಸಕರಾದ ಕೆ.ಜೆ. ಜಾರ್ಜ್, ಬೈರತಿ ಸುರೇಶ್ ಸೇರಿದಂತೆ ಕೆಲವು ಪ್ರಮುಖರ ಜೊತೆ ಸಮಾಲೋಚನೆ ನಡೆಸಿದ ಸಿದ್ದರಾಮಯ್ಯ, ಕೋಲಾರ ಕ್ಷೇತ್ರದಿಂದ ಟಿಕೆಟ್ ಘೋಷಣೆಯಾಗದೇ ಇದ್ದರೆ ಮುಂದೆ ಏನು ಮಾಡಬೇಕೆಂಬ ಬಗ್ಗೆಯೂ ಚರ್ಚಿಸಿದರು. ಅಲ್ಲದೆ, ಇನ್ನೂ ಘೋಷಣೆಯಾಗದ ಕೆಲವು ಕ್ಷೇತ್ರಗಳ ಟಿಕೆಟ್ ಹಂಚಿಕೆ ಕುರಿತು ಕೂಡಾ ಆಪ್ತರ ಜೊತೆ ಅವರು ಮಾತುಕತೆ ನಡೆಸಿದರು. ಗುರುವಾರ (ಏಪ್ರಿಲ್ 13) ಮೈಸೂರಿನಲ್ಲಿ ‘ಪ್ರಜಾಧ್ವನಿ’ ಯಾತ್ರೆಯಲ್ಲಿ ಸಿದ್ದರಾಮಯ್ಯ ಭಾಗವಹಿಸಲಿದ್ದಾರೆ.

ವರುಣದಲ್ಲಿ ಸೋಮಣ್ಣ ಸ್ಪರ್ಧೆಯ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಯಾರು ಬೇಕಾದರೂ ಸ್ಪರ್ಧೆ ಮಾಡಬಹುದು. ಆದರೆ, ಅವರ ಸ್ಪರ್ಧೆಯ ಹಿಂದಿನ ಉದ್ದೇಶ ಏನೆಂದು ಗೊತ್ತಿಲ್ಲ. ನಾನು ಆ ಬಗ್ಗೆ ಮಾತನಾಡುವುದಿಲ್ಲ. ಸೋಮಣ್ಣ ಎರಡು ಕಡೆ ಸ್ಪರ್ಧೆ ಮಾಡುತ್ತಾರೆಂದರೆ, ನಾನು ಬೇಡ ಎಂದು ಹೇಳಬೇಕೇ’ ಎಂದು ಹೇಳಿದರು.

ಅಶೋಕ ಆತಿಥ್ಯ ಸ್ವೀಕರಿಸಿ ಹೋಗಲಿ: ಡಿಕೆಶಿ

‘ಆತಿಥ್ಯ ನೀಡುವುದರಲ್ಲಿ ಕನಕಪುರ ಖ್ಯಾತಿ ಪಡೆದಿದೆ. 30-40 ವರ್ಷಗಳ ಹಿಂದಿನಿಂದಲೂ ಒಳ್ಳೊಳ್ಳೆ ಮಿಲ್ಟ್ರಿ ಹೋಟೆಲ್‌ಗಳಿವೆ. ಅವರು ಬಂದು ಊಟ ಮಾಡಿಕೊಂಡು ಹೋಗಬಹುದು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದರು.

ಕನಕಪುರದಿಂದ ಅಶೋಕ ಅವರನ್ನು ಬಿಜೆಪಿ ಕಣಕ್ಕಿಳಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಕನಕಪುರಕ್ಕೆ ಸಾಮ್ರಾಟ್ ಆದರೂ ಬರಲಿ, ಚಕ್ರವರ್ತಿಯಾದರೂ ಬರಲಿ. ಕಾರ್ಯಕರ್ತರಾದರೂ ಬರಲಿ’ ಎಂದರು.

‘ನಿಮ್ಮನ್ನು ಕನಕಪುರದಲ್ಲಿಯೇ ಕಟ್ಟಿ ಹಾಕುವ ತಂತ್ರವೇ’ ಎಂಬ ಪ್ರಶ್ನೆಗೆ, ‘ನಾಮಪತ್ರ ಸಲ್ಲಿಸುವ ದಿನ ಹಾಗೂ ಮತ್ತೊಂದು ದಿನ ಕ್ಷೇತ್ರದಲ್ಲಿ ಹೋಗಿ ಪ್ರಚಾರ ಮಾಡುತ್ತೇನೆ. ಅವರಿಗೆ ನನ್ನನ್ನು ಹಾಗೂ ಸಿದ್ದರಾಮಯ್ಯ ಅವರನ್ನು ಕಂಡರೆ ಎಷ್ಟು ಭಯವಿದೆ, ಹೇಗೆ ಗಡಗಡ ನಡುಗುತ್ತಿದ್ದಾರೆನ್ನುವುದು ಗೊತ್ತಿದೆ. ಅವರು ಏನೇ ತಂತ್ರ ಮಾಡಲಿ. ತಂತ್ರಗಾರಿಕೆಯಲ್ಲಿ ನಾವು ಕೂಡಾ ಹಿಂದೆ ಉಳಿದಿಲ್ಲ’ ಎಂದರು. ‘ಯಾರು ಪ್ರಬಲರು, ಯಾರು ದುರ್ಬಲರು ಎಂದು ಚುನಾವಣೆ ಫಲಿತಾಂಶ ಬಂದ ನಂತರ ತಿಳಿಯಲಿದೆ. ಬಿಜೆಪಿಯವರು ಮೂರ್ನಾಲ್ಕು ವರ್ಷಗಳಿಂದ ಇಡಿ, ಐಟಿ, ಸಿಬಿಐ ಮೂಲಕ ನನಗೆ ಕಿರುಕುಳ ನೀಡುತ್ತಲೇ ಇದ್ದಾರೆ. ನನಗೆ ನಿತ್ಯ ನೋಟಿಸ್ ಬರುತ್ತಿದೆ. ಆದರೆ, ನನ್ನ ಬೆಂಬಲಕ್ಕೆ ಜನ ಇದ್ದಾರೆ’ ಎಂದು ಹೇಳಿದರು.

ಬಿಜೆಪಿಯ 'ಎರಡು ಕ್ಷೇತ್ರ ಸೂತ್ರ': ಏನಿದು ತಂತ್ರ?

• ಮಂಜುನಾಥ ಹೆಬ್ಬಾರ್

ಕಾಂಗ್ರೆಸ್ ಪಕ್ಷಕ್ಕೆ ಬಹುಮತ ತಂದುಕೊಟ್ಟು ಮುಖ್ಯಮಂತ್ರಿಯಾಗುವ ಕನಸಿನಲ್ಲಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಕಟ್ಟಿಹಾಕಲು 'ಎರಡು ಕ್ಷೇತ್ರ'ದ ಆಸೆ ಮುಂದೊಡ್ಡಿ ಹೊಸ ಪ್ರಯೋಗ ನಡೆಸಿರುವ ಬಿಜೆಪಿಯ ತರ್ಕದ ಹಿಂದಿನ ಲೆಕ್ಕಾಚಾರದ ಹುಡುಕಾಟ ರಾಜಕೀಯ ಪಡಸಾಲೆಯಲ್ಲಿ ಬಿರುಸಾಗಿ ನಡೆದಿದೆ.

ದೆಹಲಿಯಲ್ಲಿ ಧರ್ಮೇಂದ್ರ ಪ್ರಧಾನ್ ಹಾಗೂ ಅರುಣಸಿಂಗ್ ಅವರು ಮಂಗಳವಾರ ರಾತ್ರಿ ಪತ್ರಿಕಾಗೋಷ್ಠಿ ನಡೆಸಿದ ಬೆನ್ನಲ್ಲೇ, ತಮ್ಮ ಟ್ವಿಟರ್ ಖಾತೆಯಲ್ಲಿ ಟ್ವೀಟ್ ಮಾಡಿದ್ದ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, 'ಸಿದ್ದರಾಮಯ್ಯ ವರ್ಸಸ್ ಸೋಮಣ್ಣ, ಡಿ.ಕೆ. ಶಿವಕುಮಾರ್ ವರ್ಸಸ್ ಅಶೋಕ' ಎಂಬ ಎರಡು ಪೋಸ್ಟ್ ಹಾಕಿದ್ದರು. ಸೋಮಣ್ಣ ಮತ್ತು ಅಶೋಕಗೆ ಸುಳಿವಿತ್ತು.

ರಾಜಕೀಯವಾಗಿ ವಿರೋಧಿ ಬಣಗಳಲ್ಲಿ ಇದ್ದರೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ವಸತಿ ಸಚಿವ ವಿ.ಸೋಮಣ್ಣ ವೈಯಕ್ತಿಕ ನೆಲೆಯಲ್ಲಿ ಉತ್ತಮ ಸಂಬಂಧ ಹೊಂದಿದವರು. ಕಂದಾಯ ಸಚಿವ ಆರ್.ಅಶೋಕ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ದೊಡ್ಡ ಮಟ್ಟದಲ್ಲಿ ಟೀಕೆ ಮಾಡಿದ್ದೇ ಇಲ್ಲ . ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳ ಈ ಇಬ್ಬರು ಪ್ರಭಾವಿ ನಾಯಕರಿಗೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ವಿರುದ್ಧ ಸೆಣಸಲು ನಿರ್ದೇಶನ ನೀಡುವ ಮೂಲಕ ಬಿಜೆಪಿ ವರಿಷ್ಠರು, ಏನನ್ನು ಮಾಡಲು ಹೊರಟಿದ್ದಾರೆ ಎಂಬುದು ಬಿಜೆಪಿ ಒಳಮನೆಯಲ್ಲಿ ನಡೆಯುತ್ತಿರುವ ಗಹನ ಚರ್ಚೆ. ಈ ಇಬ್ಬರಿಗೂ ಚುನಾವಣೆಯ ಫಲಿತಾಂಶ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಅಳಿವು– ಉಳಿವಿನ ಪ್ರಶ್ನೆಯಾಗಿದೆ.

ಈ ಉಭಯ ನಾಯಕರಿಗೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲು ಅವಕಾಶ ನೀಡಿದೆ. ಒಂದು ವೇಳೆ, ಜಿದ್ದಾಜಿದ್ದಿನ ಪೈಪೋಟಿ ನೀಡುವ ನೈಜ ಉದ್ದೇಶ ಇದ್ದರೆ ಈ ಇಬ್ಬರನ್ನೂ ಒಂದೊಂದು ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸಬೇಕಿತ್ತು. ಆಗ ಅಖಾಡದಲ್ಲಿ ರಣತಂತ್ರ ಹೆಣೆಯಲು ಇಬ್ಬರಿಗೂ ಅನುಕೂಲವಾಗುತ್ತಿತ್ತು. ನಾಮಪತ್ರ ಸಲ್ಲಿಕೆ ಆರಂಭವಾಗುವ ಒಂದು ದಿನ ಮೊದಲು ತಮಗೆ ಅಪರಿಚಿತವಾದ ಎರಡು ಕ್ಷೇತ್ರಗಳಲ್ಲಿ ಕಾಲಿಟ್ಟು, ಬಲಿಷ್ಠ ಎದುರಾಳಿಗಳನ್ನು ಮಣಿಸಿ ಬನ್ನಿ ಎಂಬುದರ ಹಿಂದಿನ ತಂತ್ರಗಾರಿಕೆಯೇನು ಎಂಬುದು ಈ ಸೂತ್ರ ಹೆಣೆದವರಿಗಷ್ಟೇ ಗೊತ್ತು ಎಂಬ ಚರ್ಚೆ ಪಕ್ಷದ ವಲಯದಲ್ಲಿ ನಡೆದಿದೆ.

ಒಂದು ತಿಂಗಳು ಈ ಎರಡೂ ಕ್ಷೇತ್ರಗಳ (ಕನಕಪುರ, ವರುಣ) ಸುತ್ತವೇ ಹೆಚ್ಚಿನ ಚರ್ಚೆಗಳು ನಡೆಯಬೇಕು. ಇದರ ಫಲಶ್ರುತಿಯಾಗಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರು ತಮ್ಮ ಕ್ಷೇತ್ರಗಳ ಕಡೆಯೇ ಹೆಚ್ಚಿನ ಗಮನ ಹರಿಸಬೇಕು ಎಂಬುದು ವರಿಷ್ಠರು ಯೋಚನೆ. ಒಂದು ವೇಳೆ, ಸಿದ್ದರಾಮಯ್ಯ ಅವರು ಕೋಲಾರದಲ್ಲಿ ಸ್ಪರ್ಧಿಸಿದರೆ ವರುಣದಲ್ಲಿ ಸೋಲಿನ ಭೀತಿಯಿಂದ ಪಲಾಯನ ಮಾಡಿದರು ಎಂಬುದಾಗಿ ಬಿಂಬಿಸುವ ಕಾರ್ಯತಂತ್ರವೂ ಇದರಲ್ಲಿ ಅಡಗಿದೆ. 2018ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಹಾಗೂ ಬಾದಾಮಿ ಕ್ಷೇತ್ರಗಳಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದಾಗ ಇದೇ ರೀತಿಯ ತಂತ್ರ ಹೆಣೆಯಲಾಗಿತ್ತು. ಅದು ದೊಡ್ಡ ಮಟ್ಟದಲ್ಲಿ ಫಲ ಕೊಟ್ಟಿತ್ತು ಎಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ವಿಶ್ಲೇಷಿಸಿದರು.

ವರುಣ ಕ್ಷೇತ್ರದಿಂದ ಬಿ.ವೈ.ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸಲು ಬಿಜೆಪಿಯಲ್ಲಿ ಚರ್ಚೆಗಳು ನಡೆದಿದ್ದವು. ವರುಣದಿಂದ ವಿಜಯೇಂದ್ರ ಸ್ಪರ್ಧಿಸುವುದಿಲ್ಲ ಎಂದು ಹೇಳುವ ಮೂಲಕ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಚರ್ಚೆಗೆ ಕೊನೆ ಹಾಡಿದ್ದರು. 'ಸಿದ್ದರಾಮಯ್ಯ ಹಾಗೂ ಶಿವಕುಮಾರ್ ವಿರುದ್ಧ ಪ್ರಬಲ ಅಭ್ಯರ್ಥಿಗಳನ್ನು ಹಾಕುತ್ತೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದರು. ಈ ನಡುವೆ, ಅರುಣ್ ಸೋಮಣ್ಣ ಸ್ಪರ್ಧೆಯ ವಿಚಾರದಲ್ಲಿ ವಿಜಯೇಂದ್ರ ಹಾಗೂ ಸೋಮಣ್ಣ ನಡುವೆ ಮುಸುಕಿನ ಗುದ್ದಾಟ ನಡೆಸಿತ್ತು. ಹೈಕಮಾಂಡ್ ಮಧ್ಯಪ್ರವೇಶಿಸಿದ ನಂತರ ಸೋಮಣ್ಣ ಈ ವಿಷಯದಲ್ಲಿ ಮೌನಕ್ಕೆ ಶರಣಾಗಿದ್ದರು.

ಪಕ್ಷದ ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲು ಬಿಜೆಪಿ ರಾಷ್ಟ್ರೀಯ ನಾಯಕರು ರಾಜ್ಯ ನಾಯಕರ ಜತೆಗೆ ಸುಮಾರು 40 ಗಂಟೆ ಸುದೀರ್ಘ ಸಮಾಲೋಚನೆ ನಡೆಸಿದ್ದರು. ಈ ವೇಳೆ, ವರುಣದಲ್ಲಿ ಸೋಮಣ್ಣ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದರೆ ಸಿದ್ದರಾಮಯ್ಯ ಅವರನ್ನು ಕಟ್ಟಿ ಹಾಕಬಹುದು ಎಂದು ಸಲಹೆ ನೀಡಿದವರು ಖುದ್ದು ಯಡಿಯೂರಪ್ಪ ಅವರೇ. ಈ ಕ್ಷೇತ್ರದಲ್ಲಿ ಲಿಂಗಾಯತ ಸಮುದಾಯದವರು ನಿರ್ಣಾಯಕ ಸಂಖ್ಯೆಯಲ್ಲಿದ್ದು, ಸೋಮಣ್ಣ ಸ್ಪರ್ಧಿಸಿದರೆ ಈ ಸಮುದಾಯ ಪಕ್ಷದ ಕೈ ಹಿಡಿಯಲಿದೆ ಎಂದೂ ಸಲಹೆ ನೀಡಿದ್ದರು. ಇದನ್ನೇ ಆಧರಿಸಿದ ವರಿಷ್ಠರು ಸೋಮಣ್ಣ ಅವರನ್ನು ಕರೆಸಿಕೊಂಡು ಸಮಾಲೋಚನೆ ನಡೆಸಿದ್ದಾರೆ. ಪಕ್ಷದ ವರಿಷ್ಠರ ಪ್ರಸ್ತಾವವನ್ನು ಪೂರ್ತಿಯಾಗಿ ಒಪ್ಪದ ಸೋಮಣ್ಣ, ಚಾಮರಾಜನಗರ ಜಿಲ್ಲೆಯ ಮತ್ತೊಂದು ಕ್ಷೇತ್ರದಲ್ಲಿ ನಿಲ್ಲಲು ಅವಕಾಶ ನೀಡಬೇಕು ಎಂದು ಕೇಳಿಕೊಂಡಿದ್ದಾರೆ.

ಯಡಿಯೂರಪ್ಪ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಅವರು ಈ ಕ್ಷೇತ್ರದ ಪ್ರಮುಖ ಟಿಕೆಟ್ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದರು. ಟಿಕೆಟ್ ಕೈ ತಪ್ಪಿದ ಬೆನ್ನಲ್ಲೇ ಅವರು, ಸೋಮಣ್ಣ ವಿರುದ್ಧ ಆರೋಪಗಳ ಸುರಿಮಳೆಗೈದಿದ್ದಾರೆ. ಈ ಬೆಳವಣಿಗೆ ಸೋಮಣ್ಣ ದಾರಿ ಅಷ್ಟು ಸಲೀಸಲ್ಲ ಎಂಬುದಕ್ಕೆ ಪುರಾವೆಯಂತಿದೆ.

'ಸಾಮ್ರಾಟ್' ಸವಾಲು?: ಒಕ್ಕಲಿಗರ ನಾಯಕ ಎಂದು ಬಿಂಬಿಸಿಕೊಂಡರೂ ಪದ್ಮನಾಭನಗರದಾಚೆಗೆ ತಮ್ಮ ಪ್ರಭಾವ ಬೆಳೆಸಿಕೊಳ್ಳದ ಆರ್. ಅಶೋಕ ಅವರನ್ನು ಚಕ್ರವ್ಯೂಹಕ್ಕೆ ದೂಡಿ, ಡಿ.ಕೆ. ಶಿವಕುಮಾರ್ ಅವರನ್ನು ಎದುರಿಸುವಂತೆ ಮಾಡುವ ಮತ್ತೊಂದು ತಂತ್ರಗಾರಿಕೆಯೂ ನಡೆದಿದೆ. ಬೆಂಗಳೂರಿಗೆ ಒಬ್ಬರು 'ಸಾಮ್ರಾಟ್' ಇದ್ದರೆ ಸಾಲದು ಎಂದು ಬಿ.ಎಲ್.ಸಂತೋಷ್ ಬಿಜೆಪಿಯ ಹಲವು ಸಭೆಗಳಲ್ಲಿ ಅಸಹನೆ ಹೊರ ಹಾಕಿದ್ದೂ ಉಂಟು. ಅಶೋಕ ಅವರನ್ನು ಕನಕಪುರದ ಅಖಾಡಕ್ಕೆ ತಳ್ಳುವ ವಿಷಯದಲ್ಲಿ ಸಂತೋಷ್ ಅವರ ಸಲಹೆ ಕೆಲಸ ಮಾಡಿದೆ ಎಂದೂ ಹೇಳಲಾಗುತ್ತಿದೆ.

ಹಾಗೆ ನೋಡಿದರೆ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು. ಎರಡನೇ ತಲೆಮಾರಿನ ನಾಯಕತ್ವವನ್ನು ಮುನ್ನೆಲೆಗೆ ತರುವ ಜತೆಗೆ, ಹಳೆ ಮೈಸೂರು ಭಾಗದಲ್ಲಿ ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸುವ ಹೊಣೆಯನ್ನೂ ನೀಡಲಾಗಿತ್ತು. ಎರಡು ವರ್ಷ ಸ್ಥಾನ ಅನುಭವಿಸಿದ ಅಶ್ವತ್ಥನಾರಾಯಣ ಅವರಿಂದ ನಿರೀಕ್ಷಿತ ಫಲ ಸಿಗಲಿಲ್ಲ. ಹೀಗಾಗಿ, ಬೊಮ್ಮಾಯಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಉಪಮುಖ್ಯಮಂತ್ರಿ ಸ್ಥಾನ ಇಲ್ಲವಾಯಿತು. ಬಿಜೆಪಿ ಸರ್ಕಾರದ ಅವಧಿಯಲ್ಲಿ ರಾಮನಗರದ ಉಸ್ತುವಾರಿಯನ್ನು ವಹಿಸಿ, ಶಿವಕುಮಾರ್ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರಂತಹ ಪ್ರಭಾವಿಗಳೆದುರು ಪಕ್ಷ ಕಟ್ಟುವ ಹೊಣೆ ವಹಿಸಲಾಯಿತು. ಅದರಲ್ಲಿ ಸ್ವಲ್ಪ ಮಟ್ಟದ ಯಶಸ್ಸನ್ನೂ ಅವರು ಕಂಡರು. ರಾಮನಗರದಿಂದ ಅಶ್ವತ್ಥನಾರಾಯಣ ಅವರನ್ನು ಕಣಕ್ಕೆ ಇಳಿಸುತ್ತಾರೆ ಎಂಬ ಸುದ್ದಿ ಹರಿದಾಡಿತ್ತು.

ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ವಿರುದ್ಧ 'ತಾಕತ್ತು' ಪ್ರದರ್ಶಿಸುವ ಮೂಲಕ ಅವರು ಹೆಚ್ಚು ಸುದ್ದಿಯಾಗಿದ್ದರು. ಡಿ.ಕೆ. ಸಹೋದರರ ಜತೆಗೆ ಆಗಾಗ ಸಂಘರ್ಷಕ್ಕೆ ಇಳಿದಿದ್ದು ಉಂಟು. ರಾಮದೇವರ ಬೆಟ್ಟದಲ್ಲಿ ರಾಮಮಂದಿರ ನಿರ್ಮಿಸುವ ಯೋಜನೆ ಪ್ರಕಟಿಸುವ ಮೂಲಕ ಹಿಂದುತ್ವದ ಕಾರ್ಯಸೂಚಿ ಮುನ್ನೆಲೆಗೆ ತಂದು ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕೆಲಸಕ್ಕೆ ಕೈ ಹಾಕಿದ್ದರು. ಬಿಜೆಪಿಯ ಒಕ್ಕಲಿಗ ನಾಯಕ ಎಂಬುದಾಗಿ ಗುರುತಿಸಿಕೊಳ್ಳಲು ಸಾಕಷ್ಟು ಕಸರತ್ತು ನಡೆಸಿದ್ದರು.

ಏತನ್ಮಧ್ಯೆ, ಮಂಡ್ಯ ಜಿಲ್ಲೆಯಲ್ಲಿ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವ ಉದ್ದೇಶದಿಂದ ಅಶೋಕ ಅವರಿಗೆ ಉಸ್ತುವಾರಿ ವಹಿಸಲಾಗಿತ್ತು. ಕಂದಾಯ ಇಲಾಖೆಯಲ್ಲಿನ ಯೋಜನೆಗಳ ಅನುಷ್ಠಾನದ ನೆಪವೊಡ್ಡಿ ಅಶೋಕ ಅವರು ಈ ಜವಾಬ್ದಾರಿಯಿಂದ ಹಿಂದಕ್ಕೆ ಸರಿದಿದ್ದರು. ಅವರು ಹಿಂದಕ್ಕೆ ಸರಿದಿದ್ದು ಬಿಜೆಪಿಯ ಹಿರಿಯ ನಾಯಕರ ಅಸಮಾಧಾನಕ್ಕೆ ಕಾರಣವಾಗಿತ್ತು. ರಾಮನಗರದಲ್ಲಿ ಓಡಾಡಿಕೊಂಡಿದ್ದ ಅಶ್ವತ್ಥನಾರಾಯಣ ಅವರ ಬದಲು, ಅಶೋಕ ಅವರಿಗೆ ಪಕ್ಷವು ಕನಕಪುರದ 'ಗುರಿ' ನೀಡಿದೆ. ಒಂದು ವೇಳೆ, ಅದರಲ್ಲಿ ಯಶಸ್ಸು ಗಳಿಸಿದರೆ ಪಕ್ಷದ ನಾಯಕ ಎಂಬ ಹಿರಿಮೆಗೆ ಮುಕ್ಕು ಬರುವುದಿಲ್ಲ. ಒಂದು ವೇಳೆ, ಅದು ಸಾಧ್ಯವಾಗದಿದ್ದರೆ ಸಿ.ಟಿ.ರವಿ, ಅಶ್ವತ್ಥನಾರಾಯಣ, ಶೋಭಾ ಕರಂದ್ಲಾಜೆ ಅವರಿಗೆ ಅಶೋಕ ಅವರು ಜಾಗ ಮಾಡಿ ಕೊಡಬೇಕಾಗುತ್ತದೆ ಎಂಬ ಅನಿವಾರ್ಯವೂ ಬರಬಹುದು.

ಕರಾವಳಿಯಲ್ಲಿ 'ಕಡು ಹಿಂದುತ್ವ'ಕ್ಕೆ ಬೆಲೆ

ಕರಾವಳಿ ಕರ್ನಾಟಕದಲ್ಲಿ ಅನೇಕ ಪ್ರಯೋಗ ನಡೆಸಿ ಚುನಾವಣಾ ರಾಜಕಾರಣದಲ್ಲಿ ಭರಪೂರ ಲಾಭ ಪಡೆದಿರುವ ಬಿಜೆಪಿ, ಈ ಸಲದ ಚುನಾವಣೆಯಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ. ಹೈಕಮಾಂಡ್‌ನ ಆಲೋಚನಾ ಲಹರಿಯನ್ನು ಮುಂಚಿತವಾಗಿ ಅರಿತ ಕುಂದಾಪುರದ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಕೆಲವು ದಿನಗಳ ಹಿಂದೆಯೇ ಚುನಾವಣಾ 'ರಣರಂಗ'ದಿಂದ ಹಿಂದಕ್ಕೆ ಸರಿದರು. ಎರಡು ಜಿಲ್ಲೆಗಳ ನಾಲ್ವರು ಶಾಸಕರಿಗೆ ಪಕ್ಷವು ಕಡ್ಡಾಯ ನಿವೃತ್ತಿ ನೀಡಿದೆ. ಇಲ್ಲಿ ಪ್ರಯೋಗದ ಹೆಸರಿನಲ್ಲಿ ಹೊಸ ಮುಖಗಳಿಗೆ ಹಾಗೂ 'ಕಡು ಹಿಂದುತ್ವ'ದ ಪ್ರತಿಪಾದಕರಿಗೆ ಜಾಗ ಕಲ್ಪಿಸಿದೆ.

ಉಡುಪಿ ಕ್ಷೇತ್ರದಲ್ಲಿ ಶಾಸಕ ಕೆ. ರಘುಪತಿ ಭಟ್ ಎಲ್ಲ ಸಮುದಾಯಗಳ ಜತೆಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅವರಿಗೆ ಕೊಕ್ ನೀಡಿರುವ ಪಕ್ಷವು, ಯಶಪಾಲ್ ಸುವರ್ಣ ಅವರಿಗೆ ಟಿಕೆಟ್ ನೀಡಿದೆ. ಆದಿ ಉಡುಪಿ ಬೆತ್ತಲೆ ಪ್ರಕರಣದ ಮೂಲಕ ಪ್ರವರ್ಧಮಾನಕ್ಕೆ ಬಂದ ಮೊಗವೀರ ಸಮುದಾಯದ ಯಶಪಾಲ್ ಅವರು ಹಿಜಾಬ್ ಪ್ರಕರಣಕ್ಕೆ ಮೊದಲು ತುಪ್ಪ ಸುರಿದವರು. ಬಳಿಕ ಹಿಜಾಬ್ ಗಲಾಟೆ ದೇಶದಾದ್ಯಂತ ಹಬ್ಬಿತು. ಆ ಬಳಿಕ ರಘುಪತಿ ಭಟ್ ಅವರು ಹಿಜಾಬ್ ವಿಷಯದಲ್ಲಿ ಆಕ್ರಮಣಕಾರಿ ನಿಲುವು ತಾಳಿದರು. ಟಿಕೆಟ್ ಪಡೆಯುವಾಗ ಯಶಪಾಲ್ ಕೈಮೇಲಾಗಿದೆ. ಹಿಂದುತ್ವದ ಬಗ್ಗೆ ವೇದಿಕೆಗಳಲ್ಲಿ ಗಟ್ಟಿ ಧ್ವನಿಯಲ್ಲಿ ಮಾತನಾಡದ ಲಾಲಾಜಿ ಮೆಂಡನ್, ಎಸ್.ಅಂಗಾರ ಅವರನ್ನು ಸಹ ಬದಿಗೆ ಸರಿಸಲಾಗಿದೆ.

ದಶಕಗಳ ಹಿಂದೆ ಉಗ್ರ ಭಾಷಣಗಳ ಮೂಲಕ ರಾಜ್ಯ ಹಾಗೂ ಕರಾವಳಿಯ ಯುವಜನರ ಕಣ್ಮನ ಸೆಳೆದವರು ಕಾರ್ಕಳದ ವಿ.ಸುನಿಲ್ ಕುಮಾರ್. ಈಗಿನ ಬಿಜೆಪಿ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿದ್ದರು. ಅವರು ಶ್ರೀರಾಮಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಗರಡಿಯಲ್ಲಿ ಪಳಗಿದವರು. ಆದರೆ, ಶಿಷ್ಯನ ವಿರುದ್ಧವೇ ಗುರು ಈಗ ತೊಡೆ ತಟ್ಟಿದ್ದಾರೆ. ಅವರು ಈಗ ಶಿಷ್ಯನ 'ಮಹಾ ಪ್ರಗತಿ'ಯ ಕುರಿತು ಕ್ಷೇತ್ರದಲ್ಲಿ ದಿನಕ್ಕೊಂದು ರಸವತ್ತಾದ ಕಥೆಗಳನ್ನು ಹೇಳುತ್ತಾ ಪ್ರಚಾರದಲ್ಲಿ ತೊಡಗಿದ್ದಾರೆ. ಕ್ಷೇತ್ರದಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ ಎಂದೂ ದೂರಿದ್ದಾರೆ. ಬೈಂದೂರು ಕ್ಷೇತ್ರಕ್ಕೆ ಅಭ್ಯರ್ಥಿಯ ಹೆಸರನ್ನು ಪಕ್ಷವು ಅಖೈರುಗೊಳಿಸಿಲ್ಲ. ಕ್ಷೇತ್ರದ ಶಾಸಕ ಸುಕುಮಾರ್ ಶೆಟ್ಟಿಗೆ ಅವಕಾಶ ಸಿಗದಿದ್ದರೆ ಜಿಲ್ಲೆಯ ನಾಲ್ವರು ಅಭ್ಯರ್ಥಿಗಳನ್ನು ಬದಲಿಸಿದಂತೆ ಆಗುತ್ತದೆ. ಆಗ ಮತ್ತೆ ಕಣದಲ್ಲಿ ಸ್ಪರ್ಧಿಸುವ ಅವಕಾಶ ಸಿಕ್ಕಿರುವುದು ಸುನಿಲ್ ಕುಮಾರ್‌ಗೆ ಮಾತ್ರ!


ಡಿ.ಕೆ.ಶಿವಕುಮಾರ್ VS ಆರ್. ಅಶೋಕ


ಸಿದ್ದರಾಮಯ್ಯ VS ವಿ.ಸೋಮಣ್ಣ

ಒಂದೇ ಕುಟುಂಬದ ಯಾರಿಗೆಲ್ಲ ಟಿಕೆಟ್



ಕುಟುಂಬ ರಾಜಕಾರಣ: ಬಿಜೆಪಿ ಮನ್ನಣೆ

ನವದೆಹಲಿ: ದೇಶ ಹಾಳಾಗಿರುವುದು ಕುಟುಂಬ ರಾಜಕಾರಣದಿಂದಲೇ ಎಂದು ಏರುಧ್ವನಿಯಲ್ಲಿ ಪ್ರತಿಪಾದಿಸುತ್ತಾ ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷಗಳ ವಿರುದ್ಧ ನಿರಂತರ ವಾಗ್ದಾಳಿ ನಡೆಸುತ್ತಾ ಬಂದಿರುವ ಬಿಜೆಪಿಯು, ಕರ್ನಾಟಕ ವಿಧಾನಸಭಾ ಚುನಾವಣೆಗೆ ಪ್ರಕಟಿಸಿರುವ ಮೊದಲ ಪಟ್ಟಿಯಲ್ಲಿ ಒಂದೇ ಕುಟುಂಬಕ್ಕೆ ಸೇರಿದ ಹಲವರಿಗೆ ರತ್ನಗಂಬಳಿ ಹಾಸಿದೆ.

ಕುಟುಂಬ ರಾಜಕಾರಣಕ್ಕೆ ಕಮಲ ಪಾಳಯದಲ್ಲಿ ಅವಕಾಶ ಇಲ್ಲ. ಒಂದೇ ಕುಟುಂಬದ ಒಬ್ಬರಿಗೆ ಮಾತ್ರ ಟಿಕೆಟ್ ಎಂದು ಬಿಜೆಪಿ ಪ್ರತಿಪಾದಿಸುತ್ತಾ ಬಂದಿತ್ತು. ಅಭ್ಯರ್ಥಿಗಳ ಹೆಸರು ಅಖೈರುಗೊಳಿಸಲು ನಡೆದ ರಾಷ್ಟ್ರೀಯ ನಾಯಕರ ಸಭೆಯಲ್ಲೂ ಈ ಬಗ್ಗೆ ಚರ್ಚೆಯಾಗಿತ್ತು. ಕುಟುಂಬ ರಾಜಕಾರಣಕ್ಕೆ ಅವಕಾಶ ಕಲ್ಪಿಸಿದರೆ ಕೆಟ್ಟ ಸಂದೇಶ ಹೋಗಲಿದೆ ಎಂದು ಹಲವು ನಾಯಕರು ಪ್ರತಿಪಾದಿಸಿದ್ದರು. ಆದರೆ, ಮೊದಲ ಪಟ್ಟಿಯಲ್ಲಿ ಕನಿಷ್ಠ 10 ಕುಟುಂಬಗಳ ಸದಸ್ಯರಿಗೆ ಅವಕಾಶ ಸಿಕ್ಕಿದೆ. ಅಣ್ಣ–ತಮ್ಮ, ಅಪ್ಪ–ಮಗ... ಪಟ್ಟಿ ಹೀಗೆ ಸಾಗುತ್ತದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಕ್ಕೆ ಅನಂತ ಕುಮಾರ್ ಸಂಸದರಾಗಿದ್ದರು. ಕಳೆದ ಲೋಕಸಭಾ ಚುನಾವಣೆಗೆ ಮುನ್ನ ಅವರು ನಿಧನರಾಗಿದ್ದರು. ಕುಟುಂಬ ರಾಜಕಾರಣದ ನೆಪ ಹೇಳಿ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಅದೇ ವೇಳೆ, ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ ಸಹೋದರನ ಪುತ್ರ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ನೀಡಲಾಗಿತ್ತು. ವಿಧಾನಸಭಾ ಚುನಾವಣೆಯಲ್ಲಿ ಜಯನಗರ ಕ್ಷೇತ್ರಕ್ಕೆ ತೇಜಸ್ವಿನಿ ಅನಂತಕುಮಾರ್ ಅವರನ್ನು ಪಕ್ಷವು ಕಣಕ್ಕೆ ಇಳಿಸಲಿದೆ ಎಂದು ಕಮಲ ಪಾಳಯದಲ್ಲಿ ಚರ್ಚೆಗಳು ನಡೆದಿದ್ದವು. ಅವರಿಗೆ ಈ ಸಲ ಅವಕಾಶ ಸಿಕ್ಕಿಲ್ಲ.

ಅರಣ್ಯ ಸಚಿವ ಉಮೇಶ ಕತ್ತಿ ಕೆಲವು ತಿಂಗಳ ಹಿಂದೆ ನಿಧನರಾಗಿದ್ದಾರೆ. ಹುಕ್ಕೇರಿ ಕ್ಷೇತ್ರದಲ್ಲಿ ಅನುಕಂಪದ ಅಲೆ ಕೆಲಸ ಮಾಡಬಹುದು ಎಂದು ನಂಬಿರುವ ಪಕ್ಷವು ಕತ್ತಿ ಅವರ ಪುತ್ರ ನಿಖಿಲ್ ಕತ್ತಿ ಅವರಿಗೆ ಮಣೆ ಹಾಕಿದೆ. ಜತೆಗೆ, ,ಕತ್ತಿ ತಮ್ಮ ಹಾಗೂ ಮಾಜಿ ಸಂಸದ ರಮೇಶ ಕತ್ತಿಗೆ ಚಿಕ್ಕೋಡಿ-ಸದಲಗದಲ್ಲಿ ಟಿಕೆಟ್ ಕೊಟ್ಟಿದೆ. ಸವದತ್ತಿ ಯಲ್ಲಮ್ಮ ಕ್ಷೇತ್ರದಲ್ಲಿ ರತ್ನಾ ಮಾಮನಿ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದೆ. ಶಾಸಕರಾಗಿದ್ದ ಆನಂದ ಮಾಮನಿ ಕೆಲವು ತಿಂಗಳ ಹಿಂದೆ ನಿಧನರಾಗಿದ್ದರು.


ಮಕ್ಕಳಿಗೆ ಟಿಕೆಟ್ ನೀಡಬೇಕು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ವಸತಿ ಸಚಿವ ವಿ.ಸೋಮಣ್ಣ ರಾಷ್ಟ್ರೀಯ ನಾಯಕರ ಬಳಿ ಲಾಬಿ ನಡೆಸಿದ್ದರು. ಆದರೆ, ಅವರ ಈ ಬೇಡಿಕೆಯನ್ನು ಪಕ್ಷವು ನಿರ್ಲಕ್ಷಿಸಿದೆ.

ಮಗನಿಗೆ ಟಿಕೆಟ್ ನೀಡುವಂತೆ ಪ್ರವಾಸೋದ್ಯಮ ಸಚಿವ ಆನಂದ ಸಿಂಗ್ ಹೈಕಮಾಂಡ್‌ಗೆ ಮನವಿ ಮಾಡಿದ್ದರು. ಅವರ ಮನವಿಗೆ ಸ್ಪಂದಿಸಿರುವ ಹೈಕಮಾಂಡ್, ಮಗ ಸಿದ್ಧಾರ್ಥ ಸಿಂಗ್‌ಗೆ ಟಿಕೆಟ್ ನೀಡಿದೆ. ಆದರೆ, ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್ ವಿಷಯದಲ್ಲಿ ಹೀಗಾಗಿಲ್ಲ.


ಮೆಹಂದಿ ಜಾಗೃತಿ.... ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಮದ್ದರಕಿ ಗ್ರಾಮದಲ್ಲಿ ಸ್ವೀಪ್ ಮತದಾನ ಜಾಗೃತಿ ಅಂಗವಾಗಿ ಬುಧವಾರ ಮೆಹಂದಿ ಕಾರ್ಯಕ್ರಮ ನಡೆಯಿತು. 'ಮತದಾನ ನಮ್ಮ ಹಕ್ಕು' ಎಂಬ ಜಾಗೃತಿ ಘೋಷ ವಾಕ್ಯವನ್ನು ಮೆಹಂದಿಯಿಂದ ಬರೆಯಲಾಗಿತ್ತು

ಪ್ರಜಾ ಪತ್ರ

ಮಹಿಳೆಯರಿಗೆ ಭದ್ರತೆ ಒದಗಿಸಿ



ಚುನಾವಣೆ ಸಮೀಪಿಸುತ್ತಿದ್ದಂತೆ ಎಲ್ಲ ರಾಜಕೀಯ ಪಕ್ಷದವರು ಮತದಾರರನ್ನು ಸೆಳೆಯಲು ನಾನಾ ರೀತಿಯ ಆಮಿಷಗಳ ಜೊತೆ ಮನೆಯ ಬಾಗಿಲಿಗೆ ಬರುತ್ತಾರೆ. ಕ್ರಿಮಿನಲ್ ಅಪರಾಧವಿಲ್ಲದ, ಭ್ರಷ್ಟಾಚಾರ ಆರೋಪವಿಲ್ಲದ, ಮಹಿಳೆಯರಿಗೆ ಹೆಚ್ಚಿನ ಭದ್ರತೆ ಒದಗಿಸುವ, ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸುವ ಅಭ್ಯರ್ಥಿಗೆ ಮತ ನೀಡಬೇಕು.

ಪವಿತ್ರ ಸಂತೋಷ್ ಶೆಟ್ಟಿ, ಕುಂದಾಪುರ

ಮತ ಚಲಾಯಿಸಿ, ಭವಿಷ್ಯ ಬರೆಯೋಣ



ಸಂವಿಧಾನ ನೀಡಿರುವ ಮತದಾನದ ಹಕ್ಕನ್ನು ನಾವು ಕಡ್ಡಾಯವಾಗಿ ಚಲಾಯಿಸೋಣ. ನಮ್ಮ ಒಂದೊಂದು ಮತವು ಮುಂದಿನ ಐದು ವರ್ಷಗಳಲ್ಲಿನ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಒಂದು ವೇಳೆ ಪೊಳ್ಳು ಆಶ್ವಾಸನೆಗಳಿಗೆ ಮಾರುಹೋದರೆ ಮುಂದಿನ ಐದು ವರ್ಷ ಕ್ಲಿಷ್ಟಕರ ಶಿಕ್ಷೆಯನ್ನು ನಾವೇ ಅನುಭವಿಸಬೇಕಾಗುತ್ತದೆ ಎಚ್ಚರ.

ಎಸ್.ಬಿ. ಮಲ್ಲಿಕಾರ್ಜುನ, ಬಳ್ಳಾರಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಡಿಕೆಶಿ ಕಟ್ಟಿಹಾಕಲು ಯಾರಿಂದಲೂ ಸಾಧ್ಯವಿಲ್ಲ: ಸುರೇಶ್

ರಾಮನಗರ: 'ಕನಕಪುರಕ್ಕೆ ಯಾರೇ ಬಂದರೂ ಡಿ.ಕೆ. ಶಿವಕುಮಾರ್ ಅವರನ್ನು ಕಟ್ಟಿ ಹಾಕಲು ಆಗುವುದಿಲ್ಲ. ಮೋದಿ– ಅಮಿತ್ ಶಾ ಟಕ್ಕರ್ ನಮ್ಮ ಹತ್ತಿರ ನಡೆಯಲ್ಲ' ಎಂದು ಸಂಸದ ಡಿ.ಕೆ. ಸುರೇಶ್ ಸವಾಲು ಹಾಕಿದ್ದಾರೆ.


ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕನಕಪುರದಲ್ಲಿ ನಾಮಪತ್ರ ಸಲ್ಲಿಸಿದ ಬಳಿಕ ಡಿ.ಕೆ. ಶಿವಕುಮಾರ್ ರಾಜ್ಯದಾದ್ಯಂತ ಪಕ್ಷದ ಪ್ರಚಾರದಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದರು

ಕನಕಪುರದಿಂದ ಬಿಜೆಪಿ ಅಭ್ಯರ್ಥಿಯಾಗಿ ಆರ್. ಅಶೋಕ ಸ್ಪರ್ಧೆ ಪ್ರಸ್ತಾಪಿಸಿದ ಅವರು, 'ಕನಕಪುರಕ್ಕೆ ಇದು ಹೊಸದೇನಲ್ಲ. ಇಂಥ ಮಹಾನ್ ನಾಯಕರನ್ನು ನಾವೂ ಸಹ ನೋಡಿದ್ದೇವೆ. ಯಾರಿಗೆ ಏನು ಮಾಡಬೇಕು ಎಂಬುದು ಇಲ್ಲಿನ ಜನರಿಗೆ ಗೊತ್ತಿದೆ' ಎಂದರು.

ಬಿಜೆಪಿ ಪ್ರಬಲ ತಂತ್ರ: 'ಕೆಲವು ವಿರೋಧ ಪಕ್ಷದ ನಾಯಕರು ಕೆಲ ಕ್ಷೇತ್ರಗಳಲ್ಲಿ ವಿರೋಧ ಇಲ್ಲದಂತೆ ಮಾಡಿಕೊಂಡಿದ್ದರು. ಅದನ್ನು ತಪ್ಪಿಸಲು ನಮ್ಮ ಪಕ್ಷ ಈ ತಂತ್ರ ಮಾಡಿದೆ' ಎಂದು ಆರ್. ಅಶೋಕ ಸ್ಪರ್ಧೆ ಕುರಿತು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಚನ್ನಪಟ್ಟಣದಲ್ಲಿ ಪ್ರತಿಕ್ರಿಯಿಸಿದರು.

ಗಾಳಿ ಮಾತು

ಆಯನೂರು ಸ್ಪರ್ಧೆಗೆ 'ಸವಾಲೇ' ಕಾರಣ!




ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನಪರಿಷತ್–ಹೀಗೆ ನಾಲ್ಕೂ ಮನೆಗಳನ್ನು ಪ್ರತಿನಿಧಿಸಿರುವ ಕರ್ನಾಟಕದ ಕೆಲವೇ ರಾಜಕಾರಣಿಗಳಲ್ಲಿ ಒಬ್ಬರಾಗಿರುವ ಆಯನೂರು ಮಂಜುನಾಥ್, ಈ ಬಾರಿ ಬಿಜೆಪಿ ಟಿಕೆಟ್ ಸಿಗದಿದ್ದರೆ ಶಿವಮೊಗ್ಗದಿಂದ ಸ್ಪರ್ಧೆ ಮಾಡಿಸಿಯೇ ಸಿದ್ಧ ಎಂಬ ಹಟಕ್ಕೆ ಬೀಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೂ ಕಾರಣರಂತೆ.

ಶಾಸಕ ಕೆ.ಎಸ್. ಈಶ್ವರಪ್ಪ ಅವರಿಗೆ ಟಿಕೆಟ್ ಸಿಗುವ ಸಂಶಯ ದಟ್ಟವಾಗತೊಡಗಿದಂತೆ ಆಯನೂರು ಚುರುಕಾದರು. ತಾವೂ ಒಬ್ಬ ಆಕಾಂಕ್ಷಿ, ದಶಕಗಳ ಕಾಲ ಪಕ್ಷಕ್ಕಾಗಿ ದುಡಿದು, ಕಾರ್ಮಿಕ ಸಂಘಟನೆಯನ್ನು ಮುನ್ನಡೆಸಿದ್ದು, ಜಾತಿ ಲೆಕ್ಕಾಚಾರದಲ್ಲಿ ಟಿಕೆಟ್ ಕೊಡಿ ಎಂದು ವರಿಷ್ಠರ ಮೇಲೆ ಒತ್ತಡ ಹೇರಿದ್ದರು. ಟಿಕೆಟ್ ಸಿಗುವುದಿಲ್ಲ ಎನ್ನುವುದು ಅನುಮಾನ ಬಲವಾಗುತ್ತಿದ್ದಂತೆ ಕಾಲುಹೊರಗಿಡುವ ತಯಾರಿಯನ್ನೂ ನಡೆಸಿದರಂತೆ.

ಹೀಗೆ ಅವರು ಸ್ಪರ್ಧೆಗೆ ಇಳಿಯಲು ಕಾರಣವಾಗಿದ್ದು ಬೊಮ್ಮಾಯಿಯವರು ಒಡ್ಡಿದ ಸವಾಲಂತೆ ಎಂಬ ಮಾತುಗಳು ಹರಿದಾಡುತ್ತಿವೆ. 'ವಿಧಾನಸಭೆ ಸದಸ್ಯರಿಗೆ ಹೆಚ್ಚು ಅನುದಾನ ಕೊಟ್ಟಿದ್ದೀರಿ; ವಿಧಾನಪರಿಷತ್ತಿನ ಸದಸ್ಯರ ಕ್ಷೇತ್ರವ್ಯಾಪ್ತಿ ನಾಲ್ಕೈದು ಜಿಲ್ಲೆಗಳು ಬರುತ್ತವೆ. ತಮಗೂ ಹೆಚ್ಚು ಅನುದಾನ ಕೊಡಿ' ಎಂದು ಆಯನೂರು ಬೇಡಿಕೆ ಇಟ್ಟಿದ್ದರಂತೆ. 'ನೀವು ಎಮ್ಮೆಲ್ಲೆ ಆಗಿ ಗೆದ್ದು ಬನ್ನಿ ಆಗ ಕೊಡುತ್ತೇವೆ' ಎಂದು ಬೊಮ್ಮಾಯಿ ಹೇಳಿದರಂತೆ. 'ಎಮ್ಮೆಲ್ಲೆ, ಎಂಪಿ ಎಲ್ಲ ಆಗಿದ್ದೀನಿ. ನೀವು ಎಮ್ಮೆಲ್ಸಿ ಆಗಿ ಗೆದ್ದು ರಾಜಕಾರಣ ಪ್ರವೇಶಿಸಿದವರು ಹೀಗೆ ಹೇಳಬಾರದು' ಎಂದು ಆಯನೂರು ತಿಳಿ ಹೇಳಿದರಂತೆ. 'ಆಯ್ತು ಗೆದ್ದು ಬನ್ನಿ' ಎಂದು ಮತ್ತೆ ಬೊಮ್ಮಾಯಿ ಸವಾಲೊಡ್ಡುವ ರೀತಿಯಲ್ಲಿ ಹೇಳಿದಾಗ, 'ಚಾಲೆಂಜ್ ಸ್ವೀಕರಿಸಿ ಗೆದ್ದು ಬರ್ತೀನಿ' ಎಂದು ಆಯನೂರು ಪ್ರತಿಸವಾಲು ಒಡ್ಡಿದ್ದರಂತೆ.

ಸೆಲೆಬ್ರಿಟಿ ಮಾತು

ಜವಾಬ್ದಾರಿ ಅರಿತು ಮತದಾನ ಮಾಡಿ



ಪಂ. ವೆಂಕಟೇಶಕುಮಾರ
ಶಾಸ್ತ್ರೀಯ ಸಂಗೀತ ಕಲಾವಿದರು

ಮತದಾನ ನಮಗೆ ಸಂವಿಧಾನ ನೀಡಿದ ಅಮೂಲ್ಯ ಹಕ್ಕು. ಪ್ರಜಾಪ್ರಭುತ್ವದಡಿಯಲ್ಲಿ ನಮಗೆ ಬೇಕಾದ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಹಕ್ಕದು. ಆದರೆ ಎಷ್ಟೋ ಜನ ಪ್ರಜ್ಞಾವಂತರೇ ಮತದಾನ ಮಾಡುತ್ತಿಲ್ಲ. ತಿಳಿದವರು ಹೀಗೆ ಮಾಡಿದರೆ ಹೇಗೆ? ಇತ್ತೀಚಿನ ವರ್ಷಗಳಲ್ಲಿ ಮತದಾನ ಪ್ರಮಾಣ ಕಡಿಮೆಯಾಗುತ್ತಿರುವುದು ಖೇದಕರ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಜವಾಬ್ದಾರಿ ಅರಿತು ಮತದಾನ ಮಾಡಬೇಕು ಎಂಬುದು ನನ್ನ ವಿನಂತಿ.

ಮಾತಿನೇಟು



ಬಸವರಾಜ ಬೊಮ್ಮಾಯಿ ಅವರು ನನ್ನ ಒಳ್ಳೆಯ ಗೆಳೆಯ. ಮುಖ್ಯಮಂತ್ರಿ ಆದ ಮೇಲೆ ಬಹಳ 'ಒಳ್ಳೆಯ' ಕೆಲಸ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು 75 ವರ್ಷ ಆದ ಬಳಿಕ ಹಿಂದೆ ಸರಿಯುತ್ತಾರೆ. ಆಗ ಬಸವರಾಜ ಬೊಮ್ಮಾಯಿ ಅವರೇ ಪ್ರಧಾನಿ ಆಗುತ್ತಾರೆ. ವಿಶ್ವವೇ ಮೆಚ್ಚುವಂಥ ಪ್ರಧಾನಿ ಆಗುವ ತಾಕತ್ತು ಅವರಿಗಿದೆ.

ಲಕ್ಷ್ಮಣ ಸವದಿ
ವಿಧಾನ ಪರಿಷತ್ ಸದಸ್ಯ

ದಾಖಲೆ ಇಲ್ಲದ ₹ 37.49 ಲಕ್ಷ ನಗದು ವಶ

ಕುಂದಾಪುರ (ಉಡುಪಿ): ನಗರದ ಹೊರವಲಯದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಉಡುಪಿ ನಿವಾಸಿ ಪ್ರಸಾದ್ ಶೇಟ್ ಅವರು ದಾಖಲೆಯಿಲ್ಲದೆ ಸಾಗಿಸುತ್ತಿದ್ದ ₹ 37.49 ಲಕ್ಷ ನಗದನ್ನು ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ, ಲಕ್ಕವಳ್ಳಿಯ ಮಣಿಸಿಹಳ್ಳಿ ಕ್ಯಾಂಪ್ ಚೆಕ್‌ಪೋಸ್ಟ್, ಹಾಗೂ ಉಡೇವಾ ಬಳಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಸಾಗಿಸುತ್ತಿದ್ದ ಒಟ್ಟಾರೆ ₹12.34 ಲಕ್ಷ ನಗದನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಕ್ಷೇತ್ರದ ಕೂಗು



• **ಕ್ಷೇತ್ರ: ಚಿತ್ರದುರ್ಗ**
• **ಶಾಸಕ: ಜಿ.ಎಚ್.ತಿಪ್ಪಾರೆಡ್ಡಿ** (ಬಿಜೆಪಿ)
- ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರಾದರೂ ಕಾರ್ಯಾರಂಭ ವಿಳಂಬವಾಗುತ್ತಿದೆ. ದಾವಣಗೆರೆ– ಚಿತ್ರದುರ್ಗ–ತುಮಕೂರು ನೇರ ರೈಲು ಮಾರ್ಗಕ್ಕೆ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಬಹುನಿರೀಕ್ಷಿತ ಭದ್ರಾ ಮೇಲ್ದಂಡೆ ಯೋಜನೆ ಕುಂಟುತ್ತ ಸಾಗುತ್ತಿದೆ. ಎರಡು ರಾಷ್ಟ್ರೀಯ ಹೆದ್ದಾರಿ ಹಾದು ಹೋದರೂ ಕೈಗಾರಿಕೆ ಅಭಿವೃದ್ಧಿ ಹೊಂದಿಲ್ಲ. ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡಿದರೆ ಕ್ಷೇತ್ರದ ಜನರಿಗೆ ಉದ್ಯೋಗ ಸಿಗಲಿದೆ. ಕಲ್ಲು ಹಾಗೂ ಕಬ್ಬಿಣದ ಅದಿರು ಗಣಿಗಾರಿಕೆ ಜನಜೀವನವನ್ನು ಬಾಧಿಸುತ್ತಿದೆ.



• **ಕ್ಷೇತ್ರ: ಹೊಸದುರ್ಗ**
• **ಶಾಸಕ: ಗೂಳಿಹಟ್ಟಿ ಡಿ.ಶೇಖರ್** (ಬಿಜೆಪಿ)
- ವಾಣಿವಿಲಾಸ ಸಾಗರದ ಜಲಾಶಯದ ಹಿನ್ನೀರು ಕ್ಷೇತ್ರವನ್ನು ಆವರಿಸಿಕೊಂಡಿದೆ. ಹಿನ್ನೀರಿನಿಂದ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ. ಹಿನ್ನೀರಿನ ಗ್ರಾಮಗಳ ಸಂಪರ್ಕಕ್ಕೆ ₹ 136 ಕೋಟಿ ವೆಚ್ಚದ ಸೇತುವೆ ನಿರ್ಮಾಣ ಕಾಮಗಾರಿ ಮಂದಗತಿಯಲ್ಲಿ ಸಾಗಿದೆ. ಪುರಾಣ ಪ್ರಸಿದ್ಧ ಹಾಲುರಾಮೇಶ್ವರದ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯ ನಾಲೆ ನಿರ್ಮಾಣವಾದರೂ ನೀರು ಬರುತ್ತಿಲ್ಲ. ಉದ್ಯೋಗ ಅರಸಿ ಬೆಂಗಳೂರಿಗೆ ಹೋಗುವವರ ಸಂಖ್ಯೆ ಹೆಚ್ಚಿದೆ.



• **ಕ್ಷೇತ್ರ: ಹೊಳಲ್ಕೆರೆ**
• **ಶಾಸಕ: ಎಂ.ಚಂದ್ರಪ್ಪ** (ಬಿಜೆಪಿ)
- ಭದ್ರಾ ಮೇಲ್ದಂಡೆ ಯೋಜನೆಯಡಿ ಕೆರೆಗಳಿಗೆ ನೀರು ತುಂಬಿಸಲು ಕೊಳವೆ ಮಾರ್ಗ ನಿರ್ಮಿಸಲಾಗಿದೆ. ಕೆರೆಗೆ ನೀರು ಬರುವುದನ್ನು ರೈತರು ಕಾಯುತ್ತಿದ್ದಾರೆ. ಕ್ಷೇತ್ರ ವ್ಯಾಪ್ತಿಯಲ್ಲಿ ಯಾವುದೇ ಕೈಗಾರಿಕೆಗಳಿಲ್ಲ. ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣವಾದರೆ ಉದ್ಯೋಗ ಸಿಗಬಹುದು ಎಂಬುದು ಜನರ ನಿರೀಕ್ಷೆ. ಪ್ರತಿಯೊಂದಕ್ಕೂ ಚಿತ್ರದುರ್ಗ ಹಾಗೂ ದಾವಣಗೆರೆ ಮೇಲೆ ಅವಲಂಬಿಸಬೇಕಾದ ಅನಿವಾರ್ಯತೆ ಕ್ಷೇತ್ರದ ಜನರದ್ದು. ತಾಲ್ಲೂಕಿನಲ್ಲಿ ಅಡಿಕೆ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಆದರೆ ಮಾರುಕಟ್ಟೆಗೆ ಭೀಮಸಮುದ್ರ ಹಾಗೂ ಚನ್ನಗಿರಿಗೆ ತೆರಳಬೇಕು. ಎಪಿಎಂಸಿ ನಿರ್ಮಾಣವಾಗಿ 15 ವರ್ಷ ಕಳೆದಿದ್ದು, ಇನ್ನೂ ಕಾರ್ಯಾರಂಭಗೊಂಡಿಲ್ಲ.




• **ಕ್ಷೇತ್ರ: ಹಿರಿಯೂರು**
• **ಶಾಸಕಿ: ಕೆ.ಪೂರ್ಣಿಮಾ ಶ್ರೀನಿವಾಸ್** (ಬಿಜೆಪಿ)
- ಹಿರಿಯೂರಿನ ವಾಣಿವಿಲಾಸ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭ ಮಾಡುವ ಬಗ್ಗೆ ಕ್ಷೇತ್ರದ ಜನರು ಕಾತರರಾಗಿದ್ದಾರೆ. ವಿ.ವಿ. ಸಾಗರ 89 ವರ್ಷಗಳ ಬಳಿಕ ಭರ್ತಿಯಾಗಿದ್ದು, ಭದ್ರಾ ಮೇಲ್ದಂಡೆ ಯೋಜನೆಯ ನೀರು ಹರಿದು ಬರುವ ಭರವಸೆ ಮೂಡಿದೆ. ಅಚ್ಚುಕಟ್ಟು ಪ್ರದೇಶದ ರೈತರು ಮತ್ತೆ ನೀರಾವರಿಯತ್ತ ಗಮನ ಹರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆ ಪುನರಾರಂಭವಾದರೆ ಅನುಕೂಲ. ನಾಲೆಗಳ ಆಧುನೀಕರಣಕ್ಕೆ ಅನುದಾನ ಮಂಜೂರಾದರೂ ಕಾಮಗಾರಿ ಪ್ರಾರಂಭವಾಗಿಲ್ಲ. ವಿ.ವಿ. ಸಾಗರ ಪ್ರವಾಸಿತಾಣವಾಗಿ ರೂಪುಗೊಂಡಿಲ್ಲ.



• **ಕ್ಷೇತ್ರ: ಮೊಳಕಾಲ್ಮುರು**
• **ಶಾಸಕ: ಬಿ.ಶ್ರೀರಾಮುಲು** (ಬಿಜೆಪಿ)
- ವಿಜಯನಗರ ಜಿಲ್ಲೆಯ ತುಂಗಭದ್ರಾ ಹಿನ್ನೀರಿನಿಂದ ಮೊಳಕಾಲ್ಮುರು ಹಾಗೂ ಚಳ್ಳಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಯ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಶುದ್ಧ ಕುಡಿಯುವ ನೀರಿನ ಕನವರಿಕೆಯಲ್ಲಿ ಜನರು ಆರು ವರ್ಷಗಳಿಂದ ಕಾಯುತ್ತಿದ್ದಾರೆ. ಆಂಧ್ರಪ್ರದೇಶದ ಗಡಿಗೆ ಹೊಂದಿಕೊಂಡಿರುವ ಈ ಕ್ಷೇತ್ರ ಅತ್ಯಂತ ಹಿಂದುಳಿದಿದೆ. ಮೊಳಕಾಲ್ಮುರು ರೇಷ್ಮೆ ಸೀರೆಗೆ ದೇಶದಾದ್ಯಂತ ಮಾರುಕಟ್ಟೆ ಇದ್ದರೂ ಸೂಕ್ತ ಉತ್ತೇಜನ ಸಿಗುತ್ತಿಲ್ಲ. ಕೈಮಗ್ಗಗಳು ನಶಿಸಿ ಹೋಗುತ್ತಿವೆ. ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣ ಇನ್ನೂ ಸಾಧ್ಯವಾಗಿಲ್ಲ. ಪುರಾಣ ಪ್ರಸಿದ್ಧ ಐತಿಹಾಸಿಕ ಸ್ಥಳ, ನಾಯಕನಹಟ್ಟಿ ದೇಗುಲ, ಪ್ರವಾಸಿ ತಾಣ ಕಾಯಕಲ್ಪಕ್ಕೆ ಕಾಯುತ್ತಿವೆ.



• **ಕ್ಷೇತ್ರ: ಚಳ್ಳಕೆರೆ**
• **ಶಾಸಕ: ಟಿ.ರಘುಮೂರ್ತಿ** (ಕಾಂಗ್ರೆಸ್)
- ಅಡುಗೆ ಎಣ್ಣೆ ತಯಾರಿಕಾ ಘಟಕಗಳ (ಆಯಿಲ್ ಮಿಲ್) ಕಾರಣಕ್ಕೆ 'ಚೋಟಾ ಬಾಂಬೆ' ಎಂದೇ ಪ್ರಸಿದ್ಧವಾಗಿದ್ದ ಚಳ್ಳಕೆರೆಯಲ್ಲಿ ಎಣ್ಣೆ ಮಿಲ್‌ಗಳು ಬಾಗಿಲು ಮುಚ್ಚಿವೆ. ಅತಿ ಹೆಚ್ಚು ಶೇಂಗಾ ಬೆಳೆಯುವ ಈ ಪ್ರದೇಶದಲ್ಲಿ ಅಡುಗೆ ಎಣ್ಣೆಯ ಮಿಲ್‌ಗಳು ಪುನಃಶ್ಚೇತನಕ್ಕೆ ಕಾಯುತ್ತಿವೆ. ಕೈಗಾರಿಕೆಗಳಿಗೆ ನಿರೀಕ್ಷಿತ ಮಟ್ಟದಲ್ಲಿ ಉತ್ತೇಜನ ಸಿಗುತ್ತಿಲ್ಲ. ಈರುಳ್ಳಿ ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. 'ಕೋಲ್ಡ್ ಸ್ಟೋರೇಜ್' ವ್ಯವಸ್ಥೆ ಮಾಡುವಂತೆ ದಶಕದಿಂದ ರೈತರು ಒತ್ತಾಯ ಮಾಡುತ್ತಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ.



ಸುಭಾಷಿತ

ನಮ್ಮ ಮಾತಿಗೆ ಅರ್ಥ ಬರುವುದು ನಮ್ಮ ನಡವಳಿಕೆಯಿಂದ.
–ಕೆ.ಪಿ. ಪೂರ್ಣಚಂದ್ರ ತೇಜಸ್ವಿ

‘ಹುಲಿ ಯೋಜನೆ’ಯ ಅರ್ಧ ಶತಮಾನ ಭವ್ಯಜೀವಿಗಳೊಂದಿಗೆ ಯಶಸ್ವೀ ಅನುಸಂಧಾನ

ಐವತ್ತು ವರ್ಷಗಳೀಚೆಗಿನ ಭಾರತದ ಹೆಮ್ಮೆಯ ಸಾಧನೆಗಳ ಪಟ್ಟಿಯಲ್ಲಿ ಹುಲಿ ರಕ್ಷಣೆಗೆ ಅಗ್ರಸ್ಥಾನ ಲಭಿಸಿದೆ. ‘ಹುಲಿ ಯೋಜನೆ’ಯ ಆರಂಭದಲ್ಲಿ 1,827ರಷ್ಟಿದ್ದ ಹುಲಿಗಳ ಸಂಖ್ಯೆ ಈಗ 3,167ಕ್ಕೇರಿದೆ. ಸತತ ಕುಸಿಯುತ್ತಿರುವ ಅರಣ್ಯ ವಿಸ್ತೀರ್ಣ, ನಿರಂತರ ಏರುತ್ತಿರುವ ಜನಸಂಖ್ಯೆಯ ಮಧ್ಯೆಯೂ ಈ ಭವ್ಯಜೀವಿಗಳ ಸಂಖ್ಯೆ ಕ್ರಮೇಣ ದುಪ್ಪಟ್ಟಾಗಿದ್ದು ಸಣ್ಣ ಸಂಗತಿಯೇನಲ್ಲ. 1973ರಲ್ಲಿ ಈ ಮಹಾ ಯೋಜನೆಯನ್ನು ಆರಂಭಿಸಿದ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ, ಅದಕ್ಕಿಂತಲೂ ಹೆಚ್ಚಾಗಿ ಈ ದಿಸೆಯಲ್ಲಿ ಅವರ ಮನವೊಲಿಸಿ ನಾಯಕತ್ವದ ಮಟ್ಟದಲ್ಲಿ ಪರಿಸರಪ್ರಜ್ಞೆಯ ಬೀಜ ಬಿತ್ತಿದ ವನ್ಯತಜ್ಞರಿಗೆ ಈ ಖ್ಯಾತಿಯ ಸಿಂಹಪಾಲು ಸಿಗಬೇಕು. ಆರಂಭದ ದಶಕಗಳಲ್ಲಿ ‘ಹುಲಿ ಯೋಜನೆ’ಯ ಅನುಷ್ಠಾನ ಸುಲಭದ್ದೇನಾಗಿರಲಿಲ್ಲ. ಹುಲಿಬೇಟೆಯನ್ನು, ಹುಲಿಸಂಖ್ಯೆಯ ಕುಸಿತವನ್ನು ತಡೆಯುವುದೇ ದೊಡ್ಡ ಸವಾಲಾಗಿತ್ತು. ಈ ಯಶಸ್ವೀ ಯೋಜನೆಯ ಮುಂದುವರಿಕೆಯಾಗಿ ಇದೀಗ ಹುಲಿ, ಸಿಂಹ, ಚಿರತೆ, ಹಿಮಚಿರತೆ, ಚೀತಾ, ಪ್ಯೂಮಾ, ಜಾಗ್ವಾರ್ ಮುಂತಾದ ‘ಬೃಹತ್ ಮಾರ್ಜಾಲ’ಗಳ ಉಳಿವಿಗೆ ಅಂತರರಾಷ್ಟ್ರೀಯ ವೇದಿಕೆಯೊಂದನ್ನು ಪ್ರಧಾನಿ ನರೇಂದ್ರ ಮೋದಿಯವರು ಆರಂಭಿಸಿದ್ದಾರೆ. ಭಾರತದ ಗೆಲುವಿನ ಪಾಠಗಳು ಇತರ ರಾಷ್ಟ್ರಗಳಿಗೂ ಅನುಕರಣೀಯವಾಗಿವೆ.

ರಕ್ಷಿತಾರಣ್ಯಗಳಲ್ಲಿ ಹುಲಿಗಳು ಅದೆಷ್ಟೇ ನೆಮ್ಮದಿಯಿಂದ ವಂಶವೃದ್ಧಿ ಮಾಡಿಕೊಳ್ಳುತ್ತಿದ್ದರೂ ಅವುಗಳ ತಳಿಗಳಲ್ಲಿ ಕ್ರಮೇಣ ಏಕತಾನತೆ ಹೆಚ್ಚುತ್ತಿದೆ. ವೈರಾಣು ದಾಳಿಯಿಂದ ಅಥವಾ ವಂಶವಾಹಿ ಕಾಯಿಲೆ ತಲೆದೋರಿದರೆ ಸಾಮೂಹಿಕ ಸಾವು ಸಂಭವಿಸುವ ಅಪಾಯ ಇದ್ದೇ ಇದೆ. ಹಿಂದಿನ ಕಾಲದಲ್ಲಿದ್ದಂತೆ ಕಾಡಿನಿಂದ ಕಾಡಿಗೆ ಅವುಗಳ ಸಂಚಾರದ ಅವಕಾಶವನ್ನು ಮರುಸೃಷ್ಟಿ ಮಾಡಬೇಕು ಎಂದು ವನ್ಯಜೀವಿ ತಜ್ಞರು ಹೇಳುತ್ತಿದ್ದಾರೆ. ಹಾಗೆ ವಿಭಿನ್ನ ಅರಣ್ಯವಲಯಗಳ ನಡುವಣ ಕೃಷಿಕ್ಷೇತ್ರ ಮತ್ತು ನಾಗರಿಕ ನೆಲೆಗಳನ್ನು ಖಾಲಿ ಮಾಡಿ ಹುಲಿಗಳಿಗಾಗಿ ನೂರಾರು ಕಿಲೊಮೀಟರ್ ಕಾರಿಡಾರ್‌ಗಳನ್ನು ನಿರ್ಮಿಸಲು ಸಾಧ್ಯವಿಲ್ಲ. ಆಗಿರುವ ಕಾಡಿನ ಒತ್ತುವರಿ ತೆರವು ಮಾಡಬೇಕು. ಆಫ್ರಿಕಾದ ನಮೀಬಿಯಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಚೀತಾಗಳನ್ನು ವಿಮಾನದ ಮೂಲಕ ತಂದ ಹಾಗೆ, ಆಸಕ್ತಿಯ ಹುಲಿಗಳನ್ನು ಸುಂದರವನಕ್ಕೋ ಅಥವಾ ತಾಡೋಬಾ ಕಾಡಿನ ಹುಲಿಗಳನ್ನು ಬಂಡೀಪುರಕ್ಕೋ ಸ್ಥಳಾಂತರಿಸುವುದು ಒತ್ತುಗುರಿಯೂ ಇದ್ದಂತಿದೆ. ಸದ್ಯಕ್ಕಂತೂ ಆಯಾ ಸಂರಕ್ಷಿತ ಪ್ರದೇಶಗಳಲ್ಲಿನ ಧಾರಣಾ ಸಾಮರ್ಥ್ಯಕ್ಕೆ ತಕ್ಕಂತೆ ಹುಲಿಗಳ ಸಂಖ್ಯೆಯನ್ನು ಕಮ್ಮಿ ಮಾಡುವ ಅಥವಾ ಹೆಚ್ಚಿಸುವ ಯೋಜನೆಯ ನೀಲನಕ್ಷೆ ತಯಾರಾಗುತ್ತಿದೆ ಎಂಬ ವರದಿಗಳಿವೆ.



‘ಹುಲಿ ಯೋಜನೆ’ಯ 50ನೇ ವರ್ಷದ ಸಂಭ್ರಮದಲ್ಲಿ ಕಾಡಂಚಿನ ಜನರೂ ಪಾಲ್ಗೊಳ್ಳುವಂತೆ ಮಾಡುವುದೇ ಯೋಜನೆಯ ಯಶಸ್ಸಿನ ಅಳತೆಗೋಲಾಗಬೇಕಿದೆ

‘ಹುಲಿ ರಕ್ಷಣೆಗೆ ಜಲ ತೊಟ್ಟಿ ನಗರ ನಿವಾಸಿಗಳಿಗೆ ಕುಡಿಯುವ ನೀರಿನ ಖಾತರಿ ಸಿಗುತ್ತದೆ’ ಎಂಬ ಒಗಟಿನಂತಹ ಮಾತು ಆ ದಿನಗಳಲ್ಲಿ ಚಾಲ್ತಿಯಲ್ಲಿತ್ತು. ಹುಲಿಗಳು ಉಳಿಯಬೇಕೆಂದರೆ ಅವುಗಳ ಆವಾಸದಲ್ಲಿ ಜಿಂಕೆ, ಕಡವೆ, ಕಾಡುಕೋಣ ಇತ್ಯಾದಿ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿರಬೇಕು. ಅವು ಹೆಚ್ಚಾಗಿರಬೇಕೆಂದರೆ ಬೇಟೆಗೆ ನಿರ್ಬಂಧ ಹಾಕಿ, ಗಿಡಮರ ರಕ್ಷಣೆ, ಜಲರಕ್ಷಣೆ, ಮಣ್ಣುರಕ್ಷಣೆ ಮತ್ತು ಮೇವಿನ ಲಭ್ಯತೆ ಹೆಚ್ಚಾಗಬೇಕು. ಅದು ಜಾರಿಗೆ ಬಂದರೆ ಸಹಜವಾಗಿಯೇ ಅರಣ್ಯದ ಹಳ್ಳಕೊಳ್ಳಗಳಲ್ಲಿ ವರ್ಷವಿಡೀ ನೀರು ಜಿನುಗುತ್ತ ನದಿಗಳು ಜೀವಂತವಾಗಿರುತ್ತವೆ. 1980ರ ದಶಕದಲ್ಲಿ ಬಂಡೀಪುರ, ನಾಗರಹೊಳೆ ಪ್ರದೇಶಗಳಲ್ಲಿ ಈ ಕ್ರಮಗಳನ್ನು ಉತ್ಸಾಹದಿಂದಲೇ ಜಾರಿಗೆ ತಂದ ಪರಿಣಾಮವಾಗಿ ಅಲ್ಲಿ ಹುಲಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತ ಬಂದಿದೆ. ಈಗ ಇದು ರಾಜ್ಯದ ಅತಿ ಹೆಚ್ಚು ಹುಲಿಗಳಿರುವ ಪ್ರದೇಶಗಳಲ್ಲಿ ಎರಡನೇ ಸ್ಥಾನಕ್ಕೇರಿದೆ. ಅದರ ರಾಜ್ಯದ ಇತರ ರಕ್ಷಿತಾರಣ್ಯಗಳಲ್ಲಿ ಹುಲಿಗಳ ಸಂಖ್ಯೆಯು ಏರುತ್ತಿರುವುದನ್ನು ಉಳಿಸಿಕೊಳ್ಳುವಲ್ಲಿ ಹೊಸ ಹೊಸ ಸವಾಲುಗಳು ಎದುರಾಗುತ್ತಿವೆ. ಕಾಡಿನಲ್ಲಿ ಲಂಟಾನಾ ಮತ್ತು ಯುಪಟೋರಿಯಂ ಸಸ್ಯಗಳ ಹಾವಳಿ ಅತೀವ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಅವುಗಳಿಂದಾಗಿ ಗೊರಸಿನ ಪ್ರಾಣಿಗಳಿಗೆ ಮೇವಿನ ಅಭಾವವಷ್ಟೇ ಅಲ್ಲ, ಕಾಡಿನ ಬೆಂಕಿಯ ಪ್ರಕರಣಗಳೂ ಹೆಚ್ಚುತ್ತಿವೆ. ಏರುತ್ತಿರುವ ಜಾಗತಿಕ ತಾಪಮಾನ ಏರಿಕೆಯಿಂದಾಗಿ ನೆಲದ ಉಷ್ಣಾಂಶವೂ ಏರುಮುಖವಾಗುತ್ತಿದ್ದು, ದಟ್ಟ ಕಾಡಿನ ಹಳ್ಳಕೊಳ್ಳಗಳೂ ಬೇಸಿಗೆಯಲ್ಲಿ ಬತ್ತುತ್ತಿವೆ. ನೀರು-ಆಹಾರವನ್ನು ಹುಡುಕುತ್ತ ವನ್ಯಜೀವಿಗಳು ಬಫರ್ ವಲಯವನ್ನೂ ದಾಟಿ ಹೊಲ-ಗದ್ದೆಗಳಿಗೆ ಇಳಿದು ಸಂಘರ್ಷಕ್ಕೆ ಕಾರಣವಾಗುವ ಪ್ರಸಂಗಗಳು ಹೆಚ್ಚುತ್ತಿವೆ. ಪ್ರಧಾನಿ ಮೋದಿಯವರು ಮೊನ್ನೆ ಬಿಡುಗಡೆ ಮಾಡಿದ ‘ಅಮೃತಕಾಲದ ಮುನ್ನೋಟ’ದಲ್ಲಿ ಹವಾಮಾನ ಬದಲಾವಣೆಯ ಸಂದರ್ಭದಲ್ಲಿ ಹುಲಿಗಳಿಗೆ ರಕ್ಷಣೆ ನೀಡಲು ಬೇಕಿರುವ ತಾಂತ್ರಿಕ ಸಾಧನಗಳನ್ನು ಒದಗಿಸುವ ಮಾತೇನೋ ಇದೆ. ನಿಜ, ಬರದ ಬೇಗೆಯನ್ನೂ ಕಾಳ್ಗಿಚ್ಚನ್ನೂ ಗುರುತಿಸಲು ಎಲೆಕ್ಟ್ರಾನಿಕ್ ಸಂವೇದಕಗಳನ್ನು ನಿಯೋಜಿಸಬಹುದು; ಡ್ರೋನ್‌ಗಳನ್ನೂ ಬಳಸಬಹುದು. ಅಷ್ಟರಿಂದ ಸಾಲದು. ಮಲೆನಾಡಿನ ಅನೇಕ ಪ್ರದೇಶಗಳಲ್ಲಿ ಹಂದಿ, ಕೋತಿ, ಕಾಟಿಗಳ ಸಂಖ್ಯಾಸ್ಫೋಟದಿಂದಾಗಿ ಮನೆಯಂಗಳದಲ್ಲೂ ತರಕಾರಿಯನ್ನು ಬೆಳೆಯಲಾಗದೆ ರೋಸಿಹೋದ ಸಹಸ್ರಾರು ಕುಟುಂಬಗಳು ‘ಹುಲಿಗಳು ಎಲ್ಲಿ ಹೋದವು?’ ಎಂದು ಪರಿತಪಿಸುತ್ತಿವೆ. ವನ್ಯಲೋಕದ ಈ ಬಗೆಯ ಅಸಮತೋಲನವನ್ನು ನಿವಾರಿಸಬೇಕಿದೆ; ಇನ್ನೊಂದೆಡೆ ಹುಲಿ-ಚಿರತೆಗಳ ದಾಳಿಗೆ ಬಲಿಯಾದವರಿಗೆ ಕ್ಷಿಪ್ರ ಹಾಗೂ ಸೂಕ್ತ ನೆರವು ನೀಡುವಲ್ಲಿ ಈಗಿಗಿಂತ ಹೆಚ್ಚಿನ ಮಾನವೀಯ ಕಳಕಳಿ ಎದ್ದು ಕಾಣಬೇಕಿದೆ. ವನ್ಯಜೀವಿಗಳ ಬದುಕುವ ಹಕ್ಕನ್ನು ಗೌರವಿಸುವಂತೆ ಹಾಗೂ ಅವುಗಳೊಂದಿಗೆ ಕೆಲಮಟ್ಟಿನ ಸಹಜೀವನ ಅನಿವಾರ್ಯ ಎನ್ನುವುದನ್ನು ಅವರಲ್ಲಿ ಬಿಂಬಿಸಬೇಕಿದೆ. ‘ಹುಲಿ ಯೋಜನೆ’ಯ 50ನೇ ವರ್ಷದ ಸಂಭ್ರಮದಲ್ಲಿ ಅವರೂ ಪಾಲ್ಗೊಳ್ಳುವಂತೆ ಮಾಡುವುದೇ ಯೋಜನೆಯ ಯಶಸ್ಸಿನ ಅಳತೆಗೋಲಾಗಬೇಕಿದೆ.

ದಿನದ ಟ್ವೀಟ್

ಬಂಡಾಯ ನಿಲ್ಲುವುದಾದರೆ...



ಯಾರ್ ಯಾರ್ ಬಂಡಾಯ ನಿಲ್ತೀರೊ ನಿಲ್ರಪ್ಪ. ಆದರೆ ನಿಂತ ಮೇಲೆ ನಾಮಪತ್ರ ವಾಪಸ್ ಪಡೆಯಬೇಡಿ. ‘ಟೋಕನ್’ ಬಿದ್ದಿದೆ ಅದಕ್ಕೆ ವಾಪಸ್ ಪಡೆದ ಎಂಬ ಅಪವಾದಕ್ಕೆ ನೀವು ಗುರಿಯಾಗುವುದು ಖಚಿತ... ಇದಕ್ಕೆ ನೀವೇ ಜವಾಬ್ದಾರರು... ನಿಮ್ಮ ಘನತೆ ನಿಮ್ಮ ಕೈಲಿದೆ... ಜೋಪಾನ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಕುಟುಂಬ ರಾಜಕಾರಣ ಮಾಡುವುದಿಲ್ಲ ಎಂದು ಬಿಜೆಪಿ ಮುಖಂಡರು ಮೊದಲಿನಿಂದಲೂ ಹೇಳುತ್ತಿದ್ದಾರೆ. ಈ ವಿಷಯವಾಗಿಯೇ ವಿರೋಧ ಪಕ್ಷಗಳನ್ನು ಟೀಕಿಸುತ್ತಿದ್ದೆವು. ಆದರೆ, ಈಗ ನಮ್ಮ ಪಕ್ಷ ಕೂಡ ಅದೇ ದಾರಿಯಲ್ಲಿ ಹೋಗುತ್ತಿರುವುದು ಎಷ್ಟರಮಟ್ಟಿಗೆ ಸರಿ? ಕೆಲವೆಡೆ ಆರೋಗ್ಯದ ಕಾರಣಕ್ಕಾಗಿ ಕುಟುಂಬದೊಳಗಿನವರಿಗೇ ಟಿಕೆಟ್ ನೀಡಲಾಗಿದೆ. ಆದರೆ, ನನಗೆ ಗೊತ್ತಿರುವಂತೆ ಆನಂದ್ ಸಿಂಗ್ ಆರೋಗ್ಯವಾಗಿಯೇ ಇದ್ದಾರೆ. ಹೀಗಿರುವಾಗ ಅವರ ಮಗನಿಗೆ ಟಿಕೆಟ್ ಕೊಟ್ಟಿರುವುದು ಬೇಸರ ತರಿಸಿದೆ. ಮನಸ್ಸಿಗೆ ತೀವ್ರ ನೋವಾಗಿದೆ, ಅಸಮಾಧಾನವಾಗಿದೆ.

ರಾಣಿ ಸಂಯುಕ್ತಾ, ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ, ಆನಂದ್ ಸಿಂಗ್ ಸಹೋದರಿ

25 ವರ್ಷಗಳ ಹಿಂದೆ

ಸೋಮವಾರ, 13-4-1998

• ಕಳಪೆ ಕೀಟನಾಶಕ ಪೂರೈಕೆ: ಕಂಪನಿ ವಿರುದ್ಧ ತನಿಖೆ

ನವದೆಹಲಿ, ಏ. 12 (ಪಿಟಿಐ)– ಕಳಪೆ ದರ್ಜೆಯ ಕೀಟನಾಶಕಗಳನ್ನು ಮಾರಾಟ ಮಾಡಿ ಬೆಳೆ ನಾಶ ಮತ್ತು ರೈತರ ಆತ್ಮಹತ್ಯೆಗೆ ಕಾರಣವಾದ ಕೀಟನಾಶಕ ಕಂಪನಿಗಳ ವಿರುದ್ಧ ಸಮಗ್ರ ತನಿಖೆ ನಡೆಸುವಂತೆ ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಉದ್ಯೋಗ ಸಚಿವ ಬಾಬಾಗೌಡ ಪಾಟೀಲ್ ಅವರು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಎಸ್.ಎಸ್. ಬರ್ನಾಲಾ ಅವರಿಗೆ ಸಲಹೆ ಮಾಡಿದ್ದಾರೆ.

‘ಕೀಟನಾಶಕ ಕಂಪನಿಗಳು ದುರಾಸೆಯಿಂದ ಕಳಪೆ ದರ್ಜೆಯ ಕೀಟನಾಶಕಗಳನ್ನು ವಿತರಿಸಿದ್ದರಿಂದ ದೇಶದಲ್ಲಿ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು ಹಾಗೂ ಇದರಿಂದ ಗ್ರಾಮೀಣ ಆರ್ಥಿಕ ಮಟ್ಟ ಸಂಪೂರ್ಣವಾಗಿ ಕುಸಿದು ಬಿದ್ದಿತು’ ಎಂದು ಅವರು ಇಂದು ಇಲ್ಲಿ ತಿಳಿಸಿದರು.

• ಬಾಂಬ್ ಸ್ಫೋಟ ಆರೋಪಿಗಾಗಿ ವಸತಿಗೃಹ ಶೋಧ

ಬೆಂಗಳೂರು, ಏ. 12– ಕಳೆದ ಎರಡು ತಿಂಗಳ ಹಿಂದೆ ಸಂಭವಿಸಿದ ಕೊಯಮತ್ತೂರು ಸರಣಿ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಆಯೇಷಾ, ನಗರದಲ್ಲಿ ತಂಗಿದ್ದಾರೆಂಬ ವರ್ತಮಾನದ ಮೇರೆಗೆ ತಮಿಳುನಾಡು ಹಾಗೂ ರಾಜ್ಯ ಪೊಲೀಸರ ತಂಡ ಇಂದು ಕಲಾಸಿಪಾಳ್ಯದ ವಸತಿಗೃಹವೊಂದರ ಮೇಲೆ ದಾಳಿ ನಡೆಸಿತು.

50 ವರ್ಷಗಳ ಹಿಂದೆ

ಶುಕ್ರವಾರ, 13-4-1973

• ಯುದ್ಧ ಕೈದಿಗಳ ಬಿಡುಗಡೆಗೆ ಭಾರತ ಕಾತರ

ನವದೆಹಲಿ, ಏ. 12– ಭಾರತದ ಹಿತದೃಷ್ಟಿಯಲ್ಲಿ ಪಾಕಿಸ್ತಾನದ ಯುದ್ಧ ಬಂದಿಗಳನ್ನು ಆದಷ್ಟೂ ಜಾಗ್ರತೆ ವಾಪಸ್ ಕಳುಹಿಸಿಕೊಡಬೇಕಾದ ಔಚಿತ್ಯವನ್ನು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಈಗತಾನೆ ಅಂಗೀಕರಿಸಿದ ಪಾಕಿಸ್ತಾನ ಸಂವಿಧಾನದಲ್ಲಿ, ಬಾಂಗ್ಲಾದೇಶ ಪಾಕಿಸ್ತಾನದ ಒಂದು ಭಾಗ ಎಂದು ಹೇಳಿರುವುದು ‘ದುರದೃಷ್ಟಕರ’ ಎಂದು ಅವರು ಬಣ್ಣಿಸಿದರು.

ಸಾರ್ವಜನಿಕ ಸಂಪರ್ಕ ಕುರಿತ ಭಾರತೀಯ ಸಂಸ್ಥೆ ಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕೃತಕ ಬುದ್ಧಿಮತ್ತೆ ಎಂಬ ಭೂತ ಇದೀಗ ಬಾಟಲಿಯಿಂದ ಹೊರಬಿದ್ದಿದೆ. ಮುಂದೇನು?

ಸತ್ಯದ ನೆತ್ತಿಗೆ ಸುಂದರ ಸುತ್ತಿಗೆ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಬೆಲ್ಜಿಯಂ ದೇಶದ ಗೃಹಸ್ಥನೊಬ್ಬ ಎರಡು ವಾರಗಳ ಹಿಂದೆ ಆತ್ಮಹತ್ಯೆ ಮಾಡಿಕೊಂಡ. ಮೊಬೈಲ್ ಪರದೆಯ ಮೇಲೆ ಬೇಕೆಂದಾಗ ಮೂಡಿಬರುವ ‘ಎಲಿಝಾ’ ಹೆಸರಿನ ಬೊಂಬೆಯ ಜೊತೆ ಬಿಸಿಪ್ರಳಯದ ಕುರಿತು ಆತ ಆಗಾಗ ಚರ್ಚೆಯಲ್ಲಿ ತೊಡಗುತ್ತಿದ್ದ. ಸ್ಪಷ್ಟವಾಗಿ, ಇಬ್ಬರು ಮಕ್ಕಳ ಈ ತಂದೆ ಕ್ರಮೇಣ ಮಂಕಾಗುತ್ತ ಹೋದ. ಚಾಟ್‌ಬಾಟ್ (ಅಂದರೆ ಮಾತಾಡುವ ರೋಬಾಟ್) ಜೊತೆ ಚರ್ಚಿಸುತ್ತ ಹೋದಂತೆ ಮನುಕುಲಕ್ಕೆ ಭವಿಷ್ಯವೇ ಇಲ್ಲವೆಂಬ ಭ್ರಾಂತಿ ಆವರಿಸಿ ಸಾವಿಗೆ ಶರಣಾದ.

ನಮ್ಮಲ್ಲಿ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಅಲೆಕ್ಸಾ, ಸಿರಿ, ಎಲಿಝಾ, ರೆಪ್ಲಿಕಾ ಮುಂತಾದ ನಾನಾ ಹೆಸರುಗಳ ಚಾಟ್‌ಬಾಟ್‌ಗಳು ಗೊತ್ತು. ಚಿಕ್ಕಮಕ್ಕಳೂ ಅಲೆಕ್ಸಾ ಅಥವಾ ಸಿರಿಯ ಜೊತೆ ಸಂಭಾಷಣೆ ನಡೆಸುತ್ತವೆ. ಅಂತರ್ಜಾಲವನ್ನು ಮಿಂಚಿನಂತೆ ಅವು ಜಾಲಾಡಿ ನಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತವೆ. ನಮ್ಮ ಪರಿಣತಿಯ ಕ್ಷೇತ್ರದಲ್ಲಿ (ಉದಾ: ಷೇರು ಮಾರುಕಟ್ಟೆಯ ವಿಶ್ಲೇಷಣೆಯಲ್ಲಿ) ಪಳಗಿದ ಚಾಟ್‌ಬಾಟ್‌ಗಳ ಉದ್ದ ಪಟ್ಟಿಯೇ ಇದೆ. ಈಗಂತೂ ನಮಗೆ ಬೇಕಾದ ರೂಪ, ಲಕ್ಷಣಗಳಿರುವ ಚಾಟ್‌ಬಾಟ್ ಬೊಂಬೆಗಳನ್ನು ನಾವೇ ಸೃಷ್ಟಿಸಬಹುದು. ನಮ್ಮ ಅಗತ್ಯಕ್ಕೆ ತಕ್ಕಂತೆ (ಉದಾ: ಪಶುವೈದ್ಯಕೀಯದಲ್ಲಿ) ಅದನ್ನು ವಿಶ್ವಕೋಶವನ್ನಾಗಿಸಿ, ನಮ್ಮಿಷ್ಟದ ಭಾಷೆಯಲ್ಲಿ ಅದರೊಂದಿಗೆ ಸಂಭಾಷಿಸಬಹುದು.

ಬೊಂಬೆಯಂತೆಯೇ ಇರಬೇಕೆಂದಿಲ್ಲ. ನಿಮ್ಮೆದುರಿನ ಕಿರುಪರದೆಯೇ ಕಣ್ಣು ಕಿವಿಗಳಾಗಿ ನೀವು ಕೇಳಿದ್ದಕ್ಕೆಲ್ಲ ಉತ್ತರಿಸಬಹುದು. ‘ಡಾಲ್-ಇ’ ಹೆಸರಿನ ಜಾಲತಾಣಕ್ಕೆ ಹೋಗಿ ನೀವು ‘ಕತ್ತೆಯ ಮೇಲೆ ಕೂತ ಬೆರ್ಚಪ್ಪನ ಚಿತ್ರ ಬೇಕು’ ಎಂದು ಆದೇಶ ಕೊಡಿ. ಕೆಲವೇ ಕ್ಷಣಗಳಲ್ಲಿ ಆ ಚಿತ್ರ ಮೂಡುತ್ತದೆ. ಕತ್ತೆ- ಬೆರ್ಚಪ್ಪ ಎರಡನ್ನೂ ಬದಲಿಸಿ ನಿಮ್ಮಿಷ್ಟದ ಪಾತ್ರಗಳನ್ನು ಹೆಸರಿಸಿ. ಅವುಗಳ ಚಿತ್ರವೂ ಮೂಡುತ್ತದೆ. ಕಾರ್ಟೂನ್ ಬೇಕೆ, ಫೋಟೊ ಬೇಕೆ? ಇದೋ ರೆಡಿ! ಮಕ್ಕಳಿಗೆ ಇಂಥ ವೆಬ್‌ಸೈಟ್‌ಗಳ ಉದಾಹರಣೆಯನ್ನು ಕೊಡಲು ಹೋಗಬೇಡಿ. ‘ಇವೆಲ್ಲ ಹಳತಾದವು ಅಂಕಲ್, ಯಾವ ಲೋಕದಲ್ಲಿದೀರಿ?’ ಎನ್ನುತ್ತ ಇನ್ನಷ್ಟು ಅಂಥ ವೆಬ್‌ಸೈಟ್‌ಗಳ ಉದಾಹರಣೆಗಳನ್ನು ನಿಮ್ಮ ಮುಂದಿಡುತ್ತವೆ. ನೀವು ಕೊಟ್ಟ ವಿಡಿಯೊದಲ್ಲಿನ ಯಾರ ಮುಖವನ್ನಾದರೂ ಬದಲಿಸಿ ಇನ್ಯಾರದ್ದನ್ನಾದರೂ ಜೋಡಿಸಬಹುದು. ಯಾರದೋ ಆರಾಧ್ಯದೈವವನ್ನು ಮೋಟರ್‌ಸೈಕಲ್ ಮೇಲೆ ಕೂರಿಸಿ ಓಡಿಸಬಹುದು- ಲಂಗು-ಲಗಾಮಿಲ್ಲದೆ! ಡಿಜಿಟಲ್ ಲೋಕದ ಈ ಯಾಂತ್ರಿಕ ಬುದ್ಧಿಮತ್ತೆ (ಯಾಂಬು = A.I. ಅಂದರೆ Artificial Intelligence) ನಮ್ಮ ಕಲ್ಪನೆಯನ್ನೂ ಮೀರಿದ ಅವತಾರಗಳಲ್ಲಿ ಗೋಚರಿಸತೊಡಗಿದೆ. ಅನೂಹ್ಯ ವೇಗದಲ್ಲಿ ಜಗತ್ತನ್ನು ಯಾಂಬು ಆವರಿಸತೊಡಗಿದೆ.

ಈ ಬೆಳವಣಿಗೆ ಒಳ್ಳೆಯದಕ್ಕೊ ಅಥವಾ ನಮ್ಮೆಲ್ಲರ ಭವಿಷ್ಯವನ್ನು ಹಳ್ಳ ಹಿಡಿಸಲಿಕ್ಕೋ? ತೀವ್ರ ಚರ್ಚೆ ಇದೀಗ ಆರಂಭವಾಗಿದೆ. ‘ಪರಮಾಣು ಬಾಂಬ್‌ಗಿಂತ ಯಾಂಬು ಜಾಸ್ತಿ ಅಪಾಯಕಾರಿ’ ಎಂದು ಸ್ವತಃ ಇಲಾನ್ ಮಸ್ಕ್ ಕಳೆದ ವಾರ ಹೇಳಿದ್ದು ವೈರಲ್ ಆಗಿದೆ. ಮಸ್ಕ್ ಗೊತ್ತಲ್ಲ? ಸ್ವತಃ ನಾನಾ ಬಗೆಯ ಯಾಂಬು ಯೋಜನೆಗಳಲ್ಲಿ ಹಣ ಹೂಡಿ, ಚಾಲಕರಿಲ್ಲದೆ ಓಡುವ ಯಾಂಬು ಕಾರುಗಳನ್ನು ಸೃಷ್ಟಿಸಿ ‘ತಾಂತ್ರಿಕ ಮಾಂತ್ರಿಕ’ ಎಂದೇ ಖ್ಯಾತಿ ಪಡೆದ ಈತ ಜಗತ್ತಿನ ಅತಿ ಶ್ರೀಮಂತ ವ್ಯಕ್ತಿ. ಅಷ್ಟೇಕೆ, ಯಾಂಬು ಭೂತವನ್ನು ಹೊರಕ್ಕೆ ಬಿಟ್ಟ ‘ಓಪನ್ ಎಐ’ ಎಂಬ ಕಂಪನಿಯ ಪ್ರವರ್ತಕರಲ್ಲಿ ಆತನೂ ಒಬ್ಬ.

ತುಸು ಹಿಂದಕ್ಕೆ ಹೋಗೋಣ. ನಮಗೆ ಬೇಕಿದ್ದ ಮಾಹಿತಿಯನ್ನು ಅಂತರ್ಜಾಲದಿಂದ ಕ್ಷಣಾರ್ಧದಲ್ಲಿ ಹೆಕ್ಕಿ, ನಮಗೆ ಬೇಕಿದ್ದ ರೂಪದಲ್ಲಿ ನಮ್ಮ ಭಾಷೆಯಲ್ಲೇ ಮಾತಿನ ಮೂಲಕವೂ ನೀಡುವ ಚಾಟ್‌ಬಾಟ್ ವ್ಯವಸ್ಥೆಯನ್ನು ‘ಓಪನ್ ಎಐ’ ಹೆಸರಿನ ಕಂಪನಿಯೊಂದು ಮೂರು ವರ್ಷಗಳಿಂದ ರೂಪಿಸುತ್ತಿತ್ತು. ಅದಕ್ಕೆ ‘ಚಾಟ್‌ಜಿಪಿಟಿ’ (ChatGPT) ಎಂದು ಹೆಸರಿಟ್ಟು ಹಂತಹಂತವಾಗಿ ಜನಬಳಕೆಗೆ ರಿಲೀಸ್ ಮಾಡಿತ್ತು. ವಿಶೇಷ ಏನೆಂದರೆ, ಜನರು ಜಾಸ್ತಿ ಬಳಸಿದಷ್ಟೂ ಈ ಚಾಟ್‌ಜಿಪಿಟಿ ಹೆಚ್ಚು ಹೆಚ್ಚು ಚುರುಕಾಗತೊಡಗಿತ್ತು. ಆ ಕಂಪನಿಯನ್ನು ಮೈಕ್ರೊಸಾಫ್ಟ್ ತನ್ನದಾಗಿಸಿಕೊಂಡು ಜಾಸ್ತಿ ಬಂಡವಾಳ ಹೂಡಿ ಇನ್ನಷ್ಟು ಚುರುಕುಗೊಳಿಸಿ ಹಿಂದಿನ ನವೆಂಬರ್ 30ರಂದು ಬಿಡುಗಡೆ ಮಾಡಿತು.


ಬ್ರಹ್ಮಾಂಡದ ಯಾವ ವಿಷಯವಾದರೂ ಸೈ, ಅಥವಾ ‘ನನ್ನ ಮಗಳ ಮದುವೆಗೆ ಏನೇನು ಸಿದ್ಧತೆ ಬೇಕು’ ಎಂಬಂಥ ತೀರ ಖಾಸಾ ವಿಷಯವಾದರೂ ಸೈ, ಅದು ನಿಮ್ಮೊಂದಿಗೆ ಚರ್ಚಿಸುತ್ತ, ನಿಮಗೆ ಹೆಚ್ಚಿನ ಪ್ರಶ್ನೆ ಕೇಳುತ್ತ, ನಿಮ್ಮ ಬಜೆಟ್ ಪ್ರಕಾರ, ನಿಮ್ಮೂರಿನ ಯಾವ ಅಂಗಡಿಯ ರೇಷ್ಮೆ ಸೀರೆಯ ಬೆಲೆ ಎಷ್ಟು, ಯಾವ ಕಲ್ಯಾಣ ಮಂಟಪದಲ್ಲಿ ಯಾವ ಮುಹೂರ್ತಕ್ಕೆ ಬುಕಿಂಗ್ ಸೂಕ್ತ ಎಂದೆಲ್ಲವನ್ನೂ ತಾನೇ ಪತ್ತೆ ಮಾಡಿ ಸೂಚಿಸುತ್ತ ಹೋಗುತ್ತದೆ. ಪುರೋಹಿತರ ರೇಟು, ಲಭ್ಯತೆಯನ್ನೂ ಹೇಳೀತು. ‘ಚಾಟ್‌ಜಿಪಿಟಿ’ ಬಿಡುಗಡೆಯಾದ ಐದೇ ದಿನಗಳಲ್ಲಿ ದಾಖಲೆಯ ಹತ್ತು ಲಕ್ಷ ಜನರನ್ನು ತನ್ನತ್ತ ಸೆಳೆಯಿತು (ಇಷ್ಟು ಜನರನ್ನು ಆಕರ್ಷಿಸಲು ಇನ್‌ಸ್ಟಾಗ್ರಾಮ್‌ಗೆ 75 ದಿನ ಬೇಕಾದವು).

ಮೈಕ್ರೊಸಾಫ್ಟ್‌ನ ‘ಚಾಟ್‌ಜಿಪಿಟಿ’ಯ ಪ್ರಚಂಡ ಯಶಸ್ಸನ್ನು ನೋಡಿ, ಗೂಗಲ್ ಕೂಡ ಅವಸರದಲ್ಲಿ ಜಿಗಿದದ್ದು, ತಾನೂ ಅಂಥದ್ದೇ ‘ಬಾರ್ಡ್’ ಹೆಸರಿನ ವಾಚಕನನ್ನು ಸೃಷ್ಟಿಸಿತು. ಅದನ್ನು ನೋಡಿ ಮೈಕ್ರೊಸಾಫ್ಟ್‌ನ ಸತ್ಯ ನಾದೆಲ್ಲ ‘ಓಹ್, ಪೈಪೋಟಿಗೆ ಬರುತ್ತಿದ್ದೀರಾ, ಬನ್ನಿ! ಜಿದ್ದಾಜಿದ್ದಿ ಇಂದೇ ಆರಂಭ!’ ಎಂದು ಘೋಷಿಸಿದರು. ಮಾರ್ಚ್ 14ರಂದು ಚಾಟ್‌ಜಿಪಿಟಿಯ 4ನೇ ಅವತಾರವನ್ನು ಬಿಡುಗಡೆ ಮಾಡಿದರು. 1960ರ ದಶಕದ ಅಣ್ವಸ್ತ್ರ ಪೈಪೋಟಿಗಿಂತ, ಚಂದ್ರನತ್ತ ರೇಸ್ ಮಾಡಿದ್ದಕ್ಕಿಂತ ಈ ಸಮರ ತೀವ್ರವಾಗಿದೆ ಎಂಬ ಮಾತು ಕೇಳಬಂತು. ಮೈಕ್ರೊಸಾಫ್ಟ್ ತನ್ನ 10 ಸಾವಿರ ಮತ್ತು ಗೂಗಲ್ 12 ಸಾವಿರ ನೌಕರರನ್ನು ಕಿತ್ತುಹಾಕಿ, ಯಾಂಬುಸೇನೆಯ ಬಲವರ್ಧನೆಗೆ ಹಣ ಹೂಡಿದವು. ತುರುಸಿನ ತೀವ್ರತೆ ಎಷ್ಟಿತ್ತೆಂದರೆ, ಮಸ್ಕ್ ಸೇರಿದಂತೆ ನೂರಾರು ಯಾಂಬು ದಿಗ್ಗಜರು ‘ಈ ಪೈಪೋಟಿಯನ್ನು ನಿಲ್ಲಿಸಿ, ಇನ್ನಾರು ತಿಂಗಳು ನಿಲ್ಲಿಸಿ!’ ಎಂದು ಉದ್ಘೋಷಿಸುವಂತಾಯಿತು. ನೆನಪಿಡಿ: ಜಾಗತಿಕ ಸಮರೋಪಾದಿಯ ಈ ಎರಡು ಬಣಗಳಲ್ಲಿ ಒಂದೆಡೆ ಸತ್ಯ ನಾದೆಲ್ಲ, ಇನ್ನೊಂದೆಡೆ ಆಲ್ಫಬೆಟ್ (ಗೂಗಲ್) ಮುಖ್ಯಸ್ಥ ಸುಂದರ ಪಿಚ್ಚೈ!

ಯಾಂಬು ಏನೆಲ್ಲ ವಿಪ್ಲವಗಳನ್ನು ಸೃಷ್ಟಿಸಬಹುದು? ಕಲಾವಿದರು, ಲೇಖಕರು, ಕತೆಗಾರರು, ಸಂಗೀತಕಾರರು, ಫ್ಯಾಶನ್ ಡಿಸೈನರ್‌ಗಳು ಬೇಕಾಗಿಲ್ಲ. ವೈದ್ಯರಂಗದಲ್ಲಿ ರೇಡಿಯಾಲಜಿಸ್ಟ್‌ಗಳು ಬೇಕಾಗಿಲ್ಲ. ಮಾರುಕಟ್ಟೆ ತಜ್ಞರು, ವಕೀಲರು, ಎಂಜಿನಿಯರ್‌ಗಳು, ವಾಸ್ತುತಜ್ಞರು, ಔಷಧ ತಯಾರಕರು ಬೇಕಾಗಿಲ್ಲ (ನಮ್ಮ ಶರೀರದಲ್ಲಿ 20 ಸಾವಿರ ಪ್ರೋಟೀನುಗಳಿವೆ; ವಿಜ್ಞಾನಿಗಳು ಕಷ್ಟಪಟ್ಟು ಶೇ 10ರಷ್ಟನ್ನು ಮಾತ್ರ ಗುರುತಿಸಿದ್ದಾರೆ. ಯಾಂಬು ಇನ್ನುಳಿದವನ್ನು ಫಟಾಫಟ್ ಗುರುತಿಸಿ ಯಾವ ಕಾಯಿಲೆಗಾದರೂ ಔಷಧವನ್ನು ರೂಪಿಸಬಹುದು. ಅಮೆರಿಕದ ಮೆಡಿಕಲ್ ಲೈಸೆನ್ಸ್ ಪರೀಕ್ಷೆಯನ್ನು ಚಾಟ್‌ಜಿಪಿಟಿ ಈಚೆಗೆ ಪಾಸ್ ಮಾಡಿದೆ). ಕಂಪ್ಯೂಟರ್ ತಜ್ಞರೂ ಬೇಕಾಗಲಿಕ್ಕಿಲ್ಲ! (ಯಾಂಬು ಕೋಡಿಂಗ್ ಕೂಡ ಮಾಡುತ್ತದೆ). ಶಿಕ್ಷಕರ ಅಗತ್ಯವೂ ಇರುವುದಿಲ್ಲ. ಪಾಠಕ್ರಮಕ್ಕೆ ತಕ್ಕಂತೆ ವಿದ್ಯಾರ್ಥಿ ತನ್ನಿಷ್ಟದ ಶಿಕ್ಷಕಿಯನ್ನು ಪರದೆಯ ಮೇಲೆ ಆವಾಹಿಸಿಕೊಳ್ಳಬಹುದು. ಇವೆಲ್ಲ ಈ ವರ್ಷವೇ ಆಗಬೇಕಿಲ್ಲ. ಯಾಂಬು ದೈತ್ಯನತ್ತ ಹೆಚ್ಚು ಹೆಚ್ಚು ಜನ ಆಕರ್ಷಿತರಾದಷ್ಟೂ ದೈತ್ಯನ ಕ್ಷಮತೆ ಹೆಚ್ಚುತ್ತ ಹೋಗುತ್ತದೆ. ಬೆಲ್ಜಿಯಂ ಪ್ರಜೆಯ ಆತ್ಮಾಹುತಿ ಒಂದು ಅಪವಾದ ಇದ್ದೀತು. ಬಿಸಿಪ್ರಳಯದಿಂದ ಬಚಾವಾಗುವ ಸೂಕ್ತ ಸಮರತಂತ್ರವನ್ನು ಯಾಂಬು ರೂಪಿಸಲೂಬಹುದು.

‘ಬೆಂಕಿಯನ್ನು ಪಳಗಿಸಿದ್ದಕ್ಕಿಂತ, ವಿದ್ಯುತ್ ಶಕ್ತಿಯನ್ನು ಹೊಮ್ಮಿಸಿದ್ದಕ್ಕಿಂತ ದೊಡ್ಡ ಕ್ರಾಂತಿಯತ್ತ ಹೆಜ್ಜೆ ಇಡುತ್ತಿದ್ದೇವೆ’ ಎಂದು ಕಳೆದ ವರ್ಷವೇ ದಾವೋಸ್ ಸಭೆಯಲ್ಲಿ ಪಿಚ್ಚೈ ಹೇಳಿದ್ದರು. ಹೆಜ್ಜೆಯನ್ನಂತೂ ಇಟ್ಟಾಗಿದೆ. ಆ ಹೆಜ್ಜೆಗುರುತು ಅದಿನ್ನೆಷ್ಟು ದೊಡ್ಡದಾಗಿ ಬೆಳೆಯುತ್ತದೊ? ಎಂಥೆಂಥ ಸಾಮಾಜಿಕ ತುಮುಲಗಳನ್ನು ಸೃಷ್ಟಿಸುತ್ತದೊ? ‘ಯಾಂಬು ಪೂರ್ತಿ ವಿಕಾಸಗೊಂಡರೆ ಅಲ್ಲಿಗೆ ಮನುಷ್ಯನ ಕತೆ ಮುಗಿಯಿತು’ ಎಂಬರ್ಥದಲ್ಲಿ ಸ್ಟೀಫನ್ ಹಾಕಿಂಗ್ ಹೇಳಿದ್ದು ನಿಜವಾಗಲು ಇನ್ನೆಷ್ಟು ವರ್ಷ ಬಾಕಿ ಇದೆಯೊ?

(ಇಂದಿನ ಈ ಅಂಕಣವನ್ನು ನಾನೇ ಬರೆದಿದ್ದೆಂದೂ ಇದು ಚಾಟ್‌ಜಿಪಿಟಿ ಸೃಷ್ಟಿಸಿದ ಬರಹ ಅಲ್ಲವೆಂದೂ ಈ ಮೂಲಕ ಘೋಷಿಸುತ್ತಿದ್ದೇನೆ. ನಾ.ಹೆ)



ಚುರುಮುರಿ



ಬಂಡಾಯ ಗಾಯ

• ಮಣ್ಣೆರಾಜು

‘ಚುನಾವಣೆ ಗೆಲ್ಲುವ ನಾಗಾಲೋಟದಲ್ಲಿರುವ ರಾಜಕೀಯ ಪಕ್ಷಗಳಿಗೆ ಬಂಡಾಯ ಬಾಧೆ ಹಾದಿ ಮುಳ್ಳಾಗಿದೆಯಂತೆ ಕಣ್ರೀ...’ ಎಂದಳು ಸುಮಿ.

‘ಹೌದು, ಟಿಕೆಟ್ ಟೂರ್ನಿಯಲ್ಲಿ ಮುಗ್ಗರಿಸಿ ಬಿದ್ದು ಗಾಯಗೊಂಡವರು ಬಂಡಾಯ ಬಾಧಿತರಾಗುತ್ತಾರೆ. ಬಂಡಾಯ ಬಾಧೆಯು ಎಲೆಕ್ಷನ್ ಟೈಮಿನಲ್ಲಿ ಕಾಣಿಸಿಕೊಳ್ಳುವ ಸೀಜನ್ ಕಾಯಿಲೆ’ ಅಂದ ಶಂಕ್ರಿ.

‘ಔಷಧಿ ಹಚ್ಚಿ, ಬೆಣ್ಣೆ ಹಚ್ಚಿ, ಬ್ಯಾಂಡೇಜ್ ಕಟ್ಟಿ, ಬಾಂಡೇಜ್ ವೃದ್ಧಿಸಿಕೊಂಡರೆ ಬಂಡಾಯ ಗಾಯ ವಾಸಿಯಾಗಬಹುದಲ್ವೇ?’

‘ಗಾಯದ ಶಕ್ತಿ, ಸಾಮರ್ಥ್ಯವನ್ನು ತಪಾಸಣೆ ಮಾಡಿ ಮದ್ದು ನೀಡಬೇಕು. ಸಾಂತ್ವನ, ಸಮಾಧಾನ ಮಾಡಿ, ಮನೆ ಮದ್ದು ಕೊಟ್ಟು, ಮುದ್ದು ಮಾಡಿದರೆ ಸಾಧಾರಣ ಗಾಯಗಳು ವಾಸಿಯಾಗುತ್ತವೆ. ಗಾಯದ ಉರಿಯ ಜೊತೆಗೆ ಹೊಟ್ಟೆ ಉರಿಯೂ ಇರುವಂತಹ ದೊಡ್ಡ ಪ್ರಮಾಣದ ಗಾಯಗಳು ಮನೆ ಮದ್ದಿಗೆ ಗುಣವಾಗದೆ ದ್ವಿಗುಣ ಆಗಿಬಿಡುತ್ತವೆ’.

‘ಗಾಯಾಳುವಿನ ರೋಗನಿರೋಧಕ ಶಕ್ತಿ, ಸಾಮರ್ಥ್ಯದ ಅನುಸಾರ ಸೂಕ್ತ ಆರೈಕೆ, ಪೂರೈಕೆಯಿಂದ ಬಂಡಾಯ ಗಾಯ ವಾಸಿ ಮಾಡಬಹುದೆ?’

‘ಗಾಯಾಳುವಿನ ರೋಗ, ಯೋಗದ ಸ್ಥಿತಿಗತಿಯನ್ನು ಸಮರ್ಪಕವಾಗಿ ಅಧ್ಯಯನ ಮಾಡಿ, ಗಾಯದ ಪ್ರಭಾವ, ಪರಿಣಾಮ ಆಧರಿಸಿ ಪ್ರಥಮ ಚಿಕಿತ್ಸೆ, ದ್ವಿತೀಯ, ತೃತೀಯ ಚಿಕಿತ್ಸೆ ಕೊಡಬೇಕಾಗುತ್ತದೆ’.

‘ಬಂಡಾಯ ಗಾಯ ಉಲ್ಬಣಗೊಂಡರೆ ಪಕ್ಷದ ಆರೋಗ್ಯ ಹದಗೆಡುತ್ತದೆ ಅಲ್ವೇ?’

‘ಹೌದು, ಅಂತಹ ಪರಿಸ್ಥಿತಿಯಲ್ಲಿ ಪಕ್ಷದ ತಜ್ಞರು ಗಾಯಾಳುವಿಗೆ ಶಸ್ತ್ರಚಿಕಿತ್ಸೆ ಮಾಡಿ ಪಕ್ಷದ ಆರೋಗ್ಯ ಕಾಪಾಡುವರು’.

‘ಬಂಡಾಯ ಗಾಯ ಶಸ್ತ್ರಚಿಕಿತ್ಸೆಗೂ ಜಗ್ಗದಿದ್ದರೆ?’

‘ದಂಡಂ ದಶಗುಣಂ ಮಾದರಿಯ ಅಸ್ತ್ರಚಿಕಿತ್ಸೆ ಪ್ರಯೋಗಿಸಿ ಗಾಯ ನಿರ್ಮೂಲ ಮಾಡುತ್ತಾರೆ’.

‘ಅಸ್ತ್ರಚಿಕಿತ್ಸೆಯ ಕ್ರಮಗಳೇನು?’

‘ತುಂಬಾ ಸರಳ. ಗಾಯಾಳುವನ್ನು ಪಕ್ಷದ ಹೊಸಿಲು ದಾಟಿಸಿ ಪಕ್ಷವನ್ನು ಬಂಡಾಯ ಗಾಯದಿಂದ ಮುಕ್ತಗೊಳಿಸುವ ಅಂತಿಮ ಚಿಕಿತ್ಸೆ...’ ಅಂದ ಶಂಕ್ರಿ.

ಸಂಗತ

ರೋಗ ಪತ್ತೆ: ಮಹತ್ವ ಮರೆತೀರಿ ಮತ್ತೆ

ರೋಗಲಕ್ಷಣ ಪತ್ತೆಗೆ ತಗಲುವ ದುಬಾರಿ ಖರ್ಚಿಗೆ ಕಡಿವಾಣ ಹಾಕಬೇಕೆಂಬ ಆಗ್ರಹವಿದೆ

• ಶ್ರೀಗುರು

ಮದುವೆ ಗಂಡಿಗೆ ಪಂಚೆ ಉಡಿಸಲು ನೆರವಾಗುತ್ತಿದ್ದೆ. ನಮ್ಮನ್ನೇ ಗಮನಿಸುತ್ತಿದ್ದ ಹಿರಿಯರೊಬ್ಬರು ‘ತುಂಬಾ ಬಿಗಿಯಾಗಿ ಕಟ್ಟಬೇಡಪ್ಪ, ಧೋತಿ ಕ್ಯಾನ್ಸರ್ ಬಂದುಬಿಟ್ಟೀತು’ ಎಂದರು. ‘ಏನ್ಸಾರ್ ತಮಾಷೆ ಮಾಡ್ತಿದ್ದೀರಾ, ಪಂಚೆ ಉಟ್ಟರೆ ಕ್ಯಾನ್ಸರ್ ಬರುತ್ತದಾ’ ಎಂದೆ. ‘ಹೌದಪ್ಪ, ನಮ್ಮ ಕಾಲದಲ್ಲಿ ಹಾಗೊಂದು ಕ್ಯಾನ್ಸರ್ ಕಾಯಿಲೆ ಇದೆ ಅನ್ನುತ್ತಿದ್ದರು. ವರ್ಷಗಳ ಕಾಲ ಬಿಗಿಯಾಗಿ ಪಂಚೆ ಉಡುವವರಿಗೆ ಸೊಂಟದ ಬಳಿ ಚರ್ಮದ ಕ್ಯಾನ್ಸರ್ ಉಂಟಾಗುತ್ತಿತ್ತು. ಅದನ್ನು ಧೋತಿ ಕ್ಯಾನ್ಸರ್ ಎನ್ನುತ್ತಿದ್ದರು’ ಎಂದು ವಿವರಿಸಿದರು.

ಅರೆ, ಇದರ ಬಗ್ಗೆ ಕೇಳಿಯೇ ಇಲ್ಲವಲ್ಲ ಎಂದು ಮಾಹಿತಿಗಾಗಿ ದಾವಣಗೆರೆಯ ಪೆಥಾಲಜಿಸ್ಟ್ (ರೋಗಲಕ್ಷಣ ವಿಜ್ಞಾನಿ) ಡಾ. ಸುರೇಶ್ ಹನಗವಾಡಿ ಅವರನ್ನು ಸಂಪರ್ಕಿಸಿದೆ. ಕರ್ನಾಟಕ ವಲಯದ ಇಂಡಿಯನ್ ಅಸೋಸಿಯೇಷನ್ ಆಫ್ ಪೆಥಾಲಜಿಸ್ಟ್ಸ್ ಆ್ಯಂಡ್ ಮೈಕ್ರೊಬಯಾಲಜಿಸ್ಟ್ಸ್ ಮತ್ತು ಕರ್ನಾಟಕ ಹಿಮೊಫೀಲಿಯ ಸೊಸೈಟಿಯ ಅಧ್ಯಕ್ಷರೂ ಆಗಿರುವ ಸುರೇಶ್, ‘ಹೌದು ಸರ್, ಅಂಥ ಕಾಯಿಲೆ ಇತ್ತು. ಈಗ ಅದನ್ನು ಬೇರೆ ಹೆಸರಿನಿಂದ ಕರೆಯುತ್ತೇವೆ’ ಎಂದರು.


ಈ ಕಾಯಿಲೆಯನ್ನು ಪತ್ತೆ ಮಾಡಿದವರು ವಸಂತ ರಾಮ್‌ಜಿ ಖನೋಲ್ಕರ್. ಭಾರತದ ಮೊದಲ ಪೆಥಾಲಜಿಸ್ಟ್ ಎಂದೇ ಖ್ಯಾತರಾದ ಖನೋಲ್ಕರ್ ಅವರನ್ನು ವೈದ್ಯಲೋಕ ‘ಪೆಥಾಲಜಿ ಪಿತಾಮಹ’ ಎಂದೇ ಗೌರವಿಸುತ್ತದೆ. ಕ್ಯಾನ್ಸರ್, ಕುಷ್ಠರೋಗ, ರಕ್ತದ ಗುಂಪು ಪತ್ತೆ ಹಾಗೂ ಸಾಂಕ್ರಾಮಿಕ ರೋಗಗಳ ಕುರಿತು ಪ್ರಥಮವಾಗಿ ಅಧ್ಯಯನ ಕೈಗೊಂಡ ಖನೋಲ್ಕರ್ ಅವರು ಸಹವೈದ್ಯ ಸೂರ್ಯಭಾಯ್ ಜೊತೆ ಸೇರಿ, ಪುರುಷರನ್ನು ಬಾಧಿಸುತ್ತಿದ್ದ ‘ಧೋತಿ ಕ್ಯಾನ್ಸರ್’ ಪತ್ತೆ ಹಚ್ಚಿದ್ದರು.

ತಂಬಾಕು ಸೇವನೆಯಿಂದ ಬಾಯಿಯ ಕ್ಯಾನ್ಸರ್ ಬರುತ್ತದೆ ಎಂದು ಎಚ್ಚರಿಸಿ, ಅದರ ಪತ್ತೆಗೆ ನೀಡಲ್ ಆ್ಯಸ್ಪಿರೇಷನ್ ಸೈಟಾಲಜಿ, ಅಂದರೆ ತೆಳುವಾದ ಪೊಳ್ಳು-ಸೂಜಿಯನ್ನು ಚುಚ್ಚಿ ಅಂಗಾಂಶ ಪರೀಕ್ಷೆ ಮಾಡಿ, ರೋಗ ಪತ್ತೆ ವಿಧಾನ ಪರಿಚಯಿಸಿ ವೈದ್ಯಕೀಯ ಸಂಶೋಧನೆಗೆ ಹೊಸ ದಿಕ್ಕು ತೋರಿದ್ದರು. ಇವರ ಜನ್ಮದಿನ ಏಪ್ರಿಲ್ 13 ಅನ್ನು ‘ರಾಷ್ಟ್ರೀಯ ರೋಗಲಕ್ಷಣ ವಿಜ್ಞಾನ ದಿನಾಚರಣೆ’ (ನ್ಯಾಷನಲ್ ಪೆಥಾಲಜಿ ಡೇ) ಎಂದು ಆಚರಿಸಲಾಗುತ್ತದೆ.

ಪೆಥಾಲಜಿಯನ್ನು ರೋಗಲಕ್ಷಣ ಪತ್ತೆ ಹಚ್ಚುವ ವಿಜ್ಞಾನ ಅಥವಾ ರೋಗಲಕ್ಷಣ ವಿಜ್ಞಾನ ಎನ್ನುತ್ತಾರೆ. ಸುಸಜ್ಜಿತ ಆಸ್ಪತ್ರೆ, ಮೆಡಿಕಲ್ ಕಾಲೇಜು, ಸರ್ಕಾರಿ ಆಸ್ಪತ್ರೆಗಳಲ್ಲಿ ಪೆಥಾಲಜಿಗಾಗಿ ಪ್ರತ್ಯೇಕ ವಿಭಾಗ, ಲ್ಯಾಬ್‌ಗಳು ಇರುತ್ತವೆ. ವೈದ್ಯರು ನೀಡುವ ಸಲಹೆ, ಔಷಧಿಗಳು ಕೆಲಸ ಮಾಡಲು ರೋಗವಿಜ್ಞಾನಿ ನೀಡುವ ವರದಿ ತುಂಬಾ ಮುಖ್ಯ.

‘ಸದ್ಯಕ್ಕೆ ಈ ಮೆಡಿಸಿನ್ ಕೊಟ್ಟಿರ್ತೀನಿ, ಒಂದು ಬ್ಲಡ್ ಟೆಸ್ಟ್ ಮಾಡಿಸಿಬಿಡಿ. ರಿಪೋರ್ಟ್ ನೋಡಿದ ಮೇಲೆ ನಿಜವಾದ ಸಮಸ್ಯೆ ಏನು ಅಂತ ಗೊತ್ತಾಗುತ್ತೆ. ಆಗ ಬೇಕಾದ್ರೆ ಮೆಡಿಸಿನ್ ಚೇಂಜ್ ಮಾಡೋಣ ಇಲ್ಲವೆ ಅದನ್ನೇ ಮುಂದುವರಿಸೋಣ’ ಎನ್ನುವ ಬಹುತೇಕ ವೈದ್ಯರು, ಲ್ಯಾಬ್‌ನವರು ನೀಡುವ ರಿಪೋರ್ಟ್‌ಗಳನ್ನಾಧರಿಸಿ ಶಸ್ತ್ರಚಿಕಿತ್ಸೆ, ಲೇಸರ್ ಟ್ರೀಟ್‌ಮೆಂಟ್, ಫಿಸಿಯೋಥೆರಪಿ, ಡಯಟ್, ಫ್ಲುಯಿಡ್ ಇನ್‌ಟೇಕ್, ವ್ಯಾಯಾಮ, ಪೇಸ್‌ಮೇಕರ್ ಅಳವಡಿಕೆ, ಡಯಾಲಿಸಿಸ್, ಬ್ಲಡ್ ಟ್ರಾನ್ಸ್‌ಫ್ಯೂಷನ್, ವಿಟಮಿನ್ ಇಂಜೆಕ್ಷನ್... ಹೀಗೆ ಹಲವು ಚಿಕಿತ್ಸಾ ಕ್ರಮಗಳನ್ನು ನಿರ್ಧರಿಸುತ್ತಾರೆ.

ಖಾಸಗಿ ಒಡೆತನದ ಲ್ಯಾಬ್‌ಗಳಲ್ಲಿ, ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಗಳಲ್ಲಿ ಕೋಟ್ಯಂತರ ರೂಪಾಯಿ ಬಂಡವಾಳ ಹಾಕಿ ಲ್ಯಾಬ್ ಸಜ್ಜುಗೊಳಿಸಿರುತ್ತಾರೆ. ನುರಿತ ತಜ್ಞರು, ತಂತ್ರಜ್ಞರು ಇರುತ್ತಾರೆ. ಮನುಷ್ಯನ ಸ್ವಾಸ್ಥ್ಯಕ್ಕೆ ಸಂಬಂಧಿಸಿದ ಪ್ರಮುಖ ಪರೀಕ್ಷೆಗಳು ನಡೆಯುತ್ತವೆ. ಅವುಗಳನ್ನು 3 ಪಾರ್ಟ್ ಡಿಫರೆನ್ಶಿಯಲ್ ಮತ್ತು 6 ಪಾರ್ಟ್ ಡಿಫರೆನ್ಶಿಯಲ್ ಎಂದು ವರ್ಗೀಕರಿಸಲಾಗಿದೆ. ಹೆಮಟಾಲಜಿ, ಸೈಟಾಲಜಿ, ಹಿಸ್ಟೊಪೆಥಾಲಜಿ, ಇಮ್ಯುನೋಹಿಸ್ಟೊ ಕೆಮಿಸ್ಟ್ರಿ, ಮಾಲಿಕ್ಯುಲಾರ್ ಜೆನೆಟಿಕ್ಸ್, ಲಿಪಿಡ್ ಪ್ರೊಫೈಲ್, ರೀನಲ್ ಪ್ರೊಫೈಲ್, ಲಿವರ್ ಫಂಕ್ಷನ್ ಟೆಸ್ಟ್, ಬೇಸಿಕ್ ಮೆಟಾಬಾಲಿಕ್ ಪ್ಯಾನೆಲ್, ಪ್ರೊಥ್ರೊಂಬಿನ್ ಟೈಂ, ಥೈರಾಯಿಡ್, ಕ್ಯಾನ್ಸರ್ ಸಂಬಂಧಿತ ಪರೀಕ್ಷೆ, ರಕ್ತದಲ್ಲಿನ ಕಬ್ಬಿಣದ ಅಂಶ, ಹೃದಯದ ಸಮಸ್ಯೆ ಅರಿಯಲು ಕೊಲೆಸ್ಟರಾಲ್ ಪರೀಕ್ಷೆ ಹೀಗೆ ಹತ್ತು ಹಲವು ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಮಾಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲವು ಪರೀಕ್ಷೆ ಮಾಡುವ ವ್ಯವಸ್ಥೆ ಇರುವುದಿಲ್ಲ. ಆಗ ರೋಗಿಗಳು ಖಾಸಗಿ ಲ್ಯಾಬ್‌ಗಳ ಮೊರೆ ಹೋಗಲೇಬೇಕಾಗುತ್ತದೆ.



ಖಾಸಗಿ ಲ್ಯಾಬ್‌ಗಳಲ್ಲಿ ಪರೀಕ್ಷೆಗಳಿಗೆ ಭಾರಿ ಹಣ ಖರ್ಚಾಗುತ್ತದೆ ಎನ್ನುವುದು ರೋಗಿಗಳ ಮಾತು. ಖಚಿತ ರೋಗ ಪತ್ತೆಗಾಗಿ ಜನ ನಮ್ಮಲ್ಲಿ ಬರುತ್ತಾರೆ. ನಿರ್ದಿಷ್ಟ ಪರೀಕ್ಷೆ ಮಾಡಲು ಅದಕ್ಕೆ ಬೇಕಾದ ರಾಸಾಯನಿಕಗಳು, ಯಂತ್ರ ಹಾಗೂ ತಂತ್ರಜ್ಞರನ್ನು ಬಳಸುವುದರಿಂದ ಅಷ್ಟು ಖರ್ಚು ಇದ್ದೇ ಇರುತ್ತದೆ ಎನ್ನುತ್ತಾರೆ ಲ್ಯಾಬ್ ನಡೆಸುವವರು.

ಸಣ್ಣ ಲ್ಯಾಬ್‌ಗಳಿಂದ ಹಿಡಿದು ಕಾರ್ಪೊರೇಟ್ ಮಾದರಿಯ ಲ್ಯಾಬ್‌ಗಳಲ್ಲಿ ನಡೆಯುವ ಪರೀಕ್ಷೆಗಳು ವೈದ್ಯರ ರೋಗ ಚಿಕಿತ್ಸೆ ಕ್ರಮದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಹಿಮೊಫೀಲಿಯಾ ಮತ್ತು ಆನುವಂಶಿಕ ರಕ್ತಸ್ರಾವದ ರೋಗಿಗಳಿಗೆ ಬೇಕಾದ ಲ್ಯಾಬ್ ಪರೀಕ್ಷೆ ವ್ಯವಸ್ಥೆ ದೊಡ್ಡ ನಗರಗಳಲ್ಲಿ ಮಾತ್ರ ಇದೆ. ಇದು ಪ್ರತೀ ಜಿಲ್ಲಾ ಕೇಂದ್ರದಲ್ಲೂ ಸಿಗಬೇಕು, ಸರ್ಕಾರ ಕ್ರಮ ವಹಿಸಬೇಕು ಎನ್ನುತ್ತಾರೆ. ಪೆಥಾಲಜಿ ವಿಷಯದಲ್ಲಿ ಉನ್ನತ ಕೆಲಸ ಮಾಡಿದ ಡಾ. ಎಸ್.ಜೆ.ನಾಗಲೋಟಿಮಠ, ಡಾ. ಕೃಷ್ಣ ಭಾರ್ಗವ, ಡಾ. ಪಾರ್ಶ್ವನಾಥ ಅವರನ್ನು ನೆನೆಯುತ್ತ, ರೋಗಲಕ್ಷಣ ಪತ್ತೆಗೆ ತಗಲುವ ಖರ್ಚು ದುಬಾರಿಯಾಗುತ್ತಿದೆ, ಇದಕ್ಕೆ ಕಡಿವಾಣ ಹಾಕಲೇಬೇಕು ಎನ್ನುತ್ತಾರೆ.

ವಾಚಕರ ವಾಣಿ

ನಾಯಕರ ವೀರಾವೇಶಕ್ಕೆ ಬಲಿಪಶುಗಳಾದರೆ...

ಹೊಂದಾಣಿಕೆ ರಾಜಕೀಯಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಸುದ್ದಿಗಳನ್ನು ಓದುವಾಗ ಸ್ವಾಮೀಜಿಯೊಬ್ಬರು ಹೇಳಿದ ಕಥೆ ನೆನಪಾಗುತ್ತದೆ. ಅದು ಹೀಗಿದೆ: ಗಣೇಶ ಹಬ್ಬದ ದಿನ ಎಲ್ಲಾ ಇಲಿಗಳು ಒಟ್ಟಿಗೆ ಸೇರುತ್ತವೆ. ಆಗ, ನಾವೆಲ್ಲರೂ ಒಗ್ಗಟ್ಟಿನಿಂದ ಒಂದು ಸಂಘವನ್ನು ಕಟ್ಟಬೇಕು ಎಂದು ಆ ಗುಂಪಿನ ಹಿರಿಯ ಇಲಿ ಹೇಳಿತು. ವಿಘ್ನ ನಿವಾರಕನ ವಾಹನವಾದ ನಾವು ಸಾಮಾನ್ಯರಲ್ಲ, ಮಹಾಪರ್ವತವನ್ನು ಕೊರೆಯುವ ಶಕ್ತಿ ನಮ್ಮಲ್ಲಿದೆ, ನಮ್ಮ ಸಂಘವನ್ನು ಕಟ್ಟುವುದರ ಮೂಲಕ ರಾಜಕೀಯ ಪ್ರವೇಶಿಸಿ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳೋಣ ಎಂದು ಎಲ್ಲ ಇಲಿಗಳೂ ನಿರ್ಧರಿಸಿದವು. ಅವುಗಳ ಮುಂದೆ ಎರಡು ಪಕ್ಷಗಳ ಆಯ್ಕೆ ಇರುತ್ತದೆ. ಒಂದು, ಬೆಕ್ಕಿನ ಪಕ್ಷ, ಇನ್ನೊಂದು, ಹಾವಿನ ಪಕ್ಷ. ನಮ್ಮ ಶತ್ರು ಬೆಕ್ಕು, ಅದೇ ಪಕ್ಷವನ್ನು ನಾವು ಸೇರಿದರೆ ಶತ್ರುವಿನಿಂದ ರಕ್ಷಣೆ ಪಡೆದು ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದು ಎಂದು ಹಿರಿಯ ಇಲಿ ಅಭಿಪ್ರಾಯಪಟ್ಟಿತು. ಕೊನೆಗೆ ಕೆಲವು ಇಲಿಗಳು ಬೆಕ್ಕಿನ ಪಕ್ಷವನ್ನು ಇನ್ನು ಕೆಲವು ಇಲಿಗಳು ಹಾವಿನ ಪಕ್ಷವನ್ನು ಸೇರಿದವು.

ಬೆಕ್ಕು ಮತ್ತು ಹಾವು ತಮ್ಮ ತಮ್ಮ ಪಕ್ಷದ ಇಲಿಗಳನ್ನು ಚೆನ್ನಾಗಿ ನೋಡಿಕೊಳ್ಳುವುದರ ಮೂಲಕ ಪ್ರಾಮಾಣಿಕತೆಯನ್ನು ಪ್ರದರ್ಶಿಸಿದವು. ಆದರೆ ಅವೆರಡೂ ಒಳ ಒಪ್ಪಂದ ಮಾಡಿಕೊಂಡಿದ್ದವು. ನಾವು ಇಲಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾ ಹೋದರೆ ನಮ್ಮ ಭವಿಷ್ಯದ ಗತಿ ಏನು ಎಂದು ಚಿಂತಿಸಿದವು. ಬೆಕ್ಕಿನ ಪಕ್ಷದಲ್ಲಿರುವ ಇಲಿಗಳನ್ನು ಹಾವು ನುಂಗಬೇಕು, ಆಗ ಬೆಕ್ಕು ಹಾವಿಗೆ ಬೈದಂತೆ ನಟಿಸಬೇಕು, ಹಾವಿನ ಪಕ್ಷದಲ್ಲಿರುವ ಇಲಿಗಳನ್ನು ಬೆಕ್ಕು ತಿಂದರೆ ಹಾವು ಬೆಕ್ಕಿಗೆ ಬೈದಂತೆ ನಟಿಸಬೇಕು ಎಂದು ಒಪ್ಪಂದ ಮಾಡಿಕೊಂಡವು. ಆ ಮೂಲಕ ಹಾವು ಮತ್ತು ಬೆಕ್ಕು ದಷ್ಟ-ಪುಷ್ಟವಾಗಿ ಆರಾಮಾಗಿದ್ದವು. ಎರಡೂ ಪಕ್ಷಗಳಿಗೆ ಸೇರಿದ ಇಲಿಗಳು ಮಾತ್ರ ಬಡಿದಾಡಿಕೊಂಡು ಇದ್ದವು. ಸದ್ಯದ ರಾಜಕೀಯ ಬೆಳವಣಿಗೆಗಳಿಗೆ ಈ ಕಥೆ ಚೆನ್ನಾಗಿ ಒಪ್ಪುತ್ತದೆ ಅನಿಸುತ್ತದೆ. ಪಕ್ಷದ ಕಾರ್ಯಕರ್ತರ ಸ್ಥಿತಿ ಇಲಿಗಳಂತಾಗಿದೆ. ವೇದಿಕೆ ಮೇಲೆ ರಾಜಕೀಯ ನಾಯಕರ ವೀರಾವೇಶ ಕಂಡು, ಜನಸಾಮಾನ್ಯರು ಅದನ್ನು ನಂಬಿ ಪರಸ್ಪರ ಬಡಿದಾಡಿಕೊಂಡು ಸಾಯುತ್ತಾರೆ. ಆದರೆ ನಾಯಕರು ಮಾತ್ರ ದುಷ್ಟಪುಷ್ಟವಾಗಿ ಇರುತ್ತಾರೆ.

ನಾಗರಾಜ್ ಗೊನಲ್, ಶಿಕಾರಿಪುರ

ಅಧಿಕಾರ ಇರುವುದು ಪಾಳೆಗಾರಿಕೆಗಲ್ಲ

25 ವರ್ಷ ತುಂಬಿದ ಭಾರತೀಯ ನಾಗರಿಕರೆಲ್ಲರೂ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರು. ಆದರೆ ಅವಕಾಶಗಳು ಲಭ್ಯವಾಗುವುದು ಕೆಲವರಿಗೆ ಮಾತ್ರ. ಮಿಗಿಲಾಗಿ, ಒಮ್ಮೆ ಚುನಾಯಿತನಾದ ವ್ಯಕ್ತಿಯ ಮೊದಲ ಗುರಿ ಇರುವುದು ಮತ್ತೊಮ್ಮೆ, ಮಗದೊಮ್ಮೆ ಎಂದು ತಾನೇ ಸ್ಪರ್ಧಿಸುವ ಆಕಾಂಕ್ಷೆ ಇಲ್ಲವೇ ತನ್ನ ಕುಟುಂಬದ ಸದಸ್ಯರನ್ನು ಸ್ಪರ್ಧೆಗೆ ಇಳಿಸುವ ಆಲೋಚನೆ. ಇಂಥ ಮನೋಭಾವ ಬದಲಾಗಬೇಕು. ಒಮ್ಮೆ ಮಾತ್ರ ಶಾಸಕ, ಒಮ್ಮೆ ಮಾತ್ರ ಮುಖ್ಯಮಂತ್ರಿ ಎಂದಾದರೆ, ಬಹಳಷ್ಟು ಜನರಿಗೆ ಜನಪ್ರತಿನಿಧಿ ಸ್ಥಾನಗಳು ಲಭ್ಯವಾಗುತ್ತವೆ. ಇಂಥ ನಡೆಯೇ ಜನತಂತ್ರ ವ್ಯವಸ್ಥೆಗೆ ಪೂರಕ ಕೂಡ.

ಅನೇಕ ವರ್ಷಗಳ ಕಾಲ ಒಂದು ಕ್ಷೇತ್ರದಲ್ಲಿ ಒಬ್ಬರೇ ಒಬ್ಬ ರಾಜಕಾರಣಿ ಅಧಿಕಾರದ ಚುಕ್ಕಾಣಿ ಹಿಡಿದರೆ ಅದು ಪಾಳೆಗಾರಿಕೆಯಾಗುತ್ತದೆ. ಆದ್ದರಿಂದ ರಾಜಕೀಯದಲ್ಲಿ ಆಸಕ್ತಿ ಹಾಗೂ ಸಾಮರ್ಥ್ಯ, ಸಾಮಾಜಿಕ ಬೆಳವಣಿಗೆಯ ಬಗ್ಗೆ ಬದ್ಧತೆ ಇರುವ ರಾಜಕಾರಣಿಗಳನ್ನು ಉತ್ತಮ ಜನಪ್ರತಿನಿಧಿಗಳನ್ನಾಗಿ ಬೆಳೆಸುವ ಹಾಗೂ ಅಂಥವರನ್ನು ಆಡಳಿತ ವ್ಯವಸ್ಥೆಯಲ್ಲಿ ಬಳಸಿಕೊಳ್ಳುವ ಕಡೆಗೆ ಚಿಂತನೆ ಅವಶ್ಯ.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಸಚಿವರ ಮಾತಿನ ಕಾಳಜಿ ಅರಿಯೋಣ

‘ಕೇಂದ್ರ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆಯಾದವರು ತುಂಬಾ ಪರಿಣತರಾಗಿದ್ದು, ಉತ್ತಮ ಸ್ಥಾನದಲ್ಲಿರುತ್ತಾರೆ ಎಂದು ಭಾವಿಸಿದ್ದೆ. ಆದರೆ ಈಗ ನೇಮಕವಾಗುವ ಹೆಚ್ಚಿನ ಅಧಿಕಾರಿಗಳು ದರೋಡೆಕೋರರ ಮನಃಸ್ಥಿತಿಯನ್ನು ಹೊಂದಿರುತ್ತಾರೆ’ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವರು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಏ. 11). ಸಚಿವರ ಈ ಹೇಳಿಕೆಗೆ ಅಧಿಕಾರಿಗಳ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ‘ದರೋಡೆಕೋರರು’ ಎಂಬುದಕ್ಕೂ ‘ದರೋಡೆಕೋರರ ಮನಃಸ್ಥಿತಿ’ ಎಂಬುದಕ್ಕೂ ವ್ಯತ್ಯಾಸವಿದೆ. ಎಲ್ಲ ಅಧಿಕಾರಿಗಳೂ ಇದೇ ರೀತಿ ಇರುತ್ತಾರೆ ಎಂದು ಸಚಿವರು ಹೇಳಿಲ್ಲ. ಅವರ ಮಾತನ್ನು ವಾಚ್ಯವಾಗಿ ತೆಗೆದುಕೊಳ್ಳಬಾರದು, ಅಧಿಕಾರಿಗಳಿಂದ ಸಚಿವರಿಗೆ ಆಗಿರಬಹುದಾದ ಯಾವುದೋ ಕಹಿ ಅನುಭವದ ಹಿನ್ನೆಲೆಯಲ್ಲಿ ಈ ಮಾತು ಅವರಿಂದ ಹೊರಬಿದ್ದಿದೆ.

ಸಚಿವರ ಮಾತಿನ ಹಿಂದಿನ ಅವರ ಮನಸ್ಸಿನ ನೋವನ್ನು, ಸಾಮಾಜಿಕ ಕಾಳಜಿಯನ್ನು ಅರ್ಥ ಮಾಡಿಕೊಳ್ಳದೆ ಅವರನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ. ಹಿಂದೆ ಕರ್ನಾಟಕದಲ್ಲಿ ಸಚಿವರೊಬ್ಬರ ಮಾತನ್ನು ಅಪಾರ್ಥ ಮಾಡಿಕೊಂಡು ರಾಜಕಿಯ ವಿಪ್ಲವವೇ ನಡೆದುಹೋಗಿದ್ದನ್ನು ಜ್ಞಾಪಿಸಿಕೊಳ್ಳಬಹುದು. ಇಂದಿನ ನೌಕರಶಾಹಿಯ ವರ್ತನೆ ಸಚಿವರ ಹೇಳಿಕೆಯನ್ನು ನಿರಾಕರಿಸುವಂತೆ ಇದೆಯೇ, ಅಲ್ಲಗಳೆಯುವಂತೆ ಇದೆಯೇ ಎಂಬುದನ್ನು ಆತ್ಮಸಾಕ್ಷಿ ಇರುವ ಪ್ರಜ್ಞಾವಂತ ಪ್ರಜೆಗಳ ತೀರ್ಮಾನಕ್ಕೆ ಬಿಡೋಣ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ತತ್ವ, ಸಿದ್ಧಾಂತಕ್ಕೆ ಬದ್ಧರಾಗದವರು...

‘ದೃಢತೆ ಇಲ್ಲದ ನಾಯಕರಿಂದ ನಿರೀಕ್ಷಿಸುವುದೇನು?’ ಎಂಬ ಅಶೋಕ ಪ. ಹೊನಕೇರಿ ಅವರ ಪತ್ರ (ವಾ.ವಾ., ಏ. 10) ನಿಜಕ್ಕೂ ಎಲ್ಲಾ ಪ್ರಜ್ಞಾವಂತ ಮತದಾರರು ಯೋಚಿಸುವಂತೆ ಮಾಡುತ್ತದೆ. ಒಂದು ಪಕ್ಷದಲ್ಲಿದ್ದು ಎದುರಿನ ಪಕ್ಷವನ್ನು ವಾಚಾಮಗೋಚರವಾಗಿ ತೆಗಳಿ ಜನ್ಮ ಜಾಲಾಡುತ್ತಿದ್ದ ಒಬ್ಬ ನಾಯಕ, ಚುನಾವಣೆಯಲ್ಲಿ ಸ್ಪರ್ಧಿಸಲು ತನ್ನ ಪಕ್ಷದ ಟಿಕೆಟ್ ಸಿಗದೇಹೋದಾಗ ಅನ್ಯ ಪಕ್ಷದತ್ತ ಹೊರಳುವುದು ಹೇಗೆ ಎಂಬುದೇ ಅರ್ಥವಾಗುವುದಿಲ್ಲ.

ನಿನ್ನೆ ಮೊನ್ನೆವರೆಗೂ ಛೀ, ಥೂ ಎಂದು ಉಗಿಯುತ್ತಿದ್ದ ಪಕ್ಷಕ್ಕೇ ಹೀಗೆ ಠಣ್ಣೆಂದು ಜಿಗಿಯುತ್ತಾರೆಂದರೆ ಅವರಿಗೆ ಏನೂ ಅನ್ನಿಸುವುದಿಲ್ಲವೇ? ತನಗೆ ಮತ ನೀಡಿದ ಮತದಾರನ ಭಯ ಇರುವುದಿಲ್ಲವೇ? ಮೊದಲೆಲ್ಲ ಎಲ್ಲೋ ಒಬ್ಬಿಬ್ಬರು ಮಾತ್ರ ಈ ರೀತಿ ಜಿಗಿಯುತ್ತಿದ್ದರು, ಈಗ ಪ್ರತಿದಿನ ಪತ್ರಿಕೆಗಳಲ್ಲಿ ಇಂತಹ ಸುದ್ದಿಗಳೇ ತುಂಬಿರುತ್ತವೆ. ತತ್ವ, ಸಿದ್ಧಾಂತಗಳಿಗೆ ಬದ್ಧರಾಗದ ಇಂತಹ ನಾಯಕರಿಗೆ ಜನ ತಕ್ಕ ಪಾಠ ಕಲಿಸಬೇಕು.

ಎನ್.ಎಂ.ರಾಯಬಾಗಿ, ಬೆಟಗೇರಿ, ಗದಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಂದು ಭಾಷೆ, ಒಂದು ಧರ್ಮ ಹೇರಿಕೆಗೆ ನಲುಗುತ್ತಿದೆ ಮ್ಯಾನ್ಮಾರ್

ದೇಶದ ಎಲ್ಲಾ ಜನಾಂಗಗಳ ಮೇಲೂ ಒಂದೇ ಧರ್ಮ ಮತ್ತು ಭಾಷೆಯನ್ನು ಹೇರಲು ಹೊರಟ ಸೇನಾಡಳಿತದ ವಿರುದ್ಧ ಮ್ಯಾನ್ಮಾರ್‌ನ ಎಲ್ಲಾ ಜನರು ತಿರುಗಿಬಿದ್ದಿದ್ದಾರೆ. ಈ ಹೇರಿಕೆ ಮತ್ತು ಸೇನಾಡಳಿತ ಎರಡನ್ನೂ ಕಿತ್ತೊಗೆಯಬೇಕು ಎಂಬ ಧ್ಯೇಯದೊಂದಿಗೆ 'ಪೀಪಲ್ಸ್ ಡಿಫೆನ್ಸ್ ಫೋರ್ಸ್' ಎಂಬ ಪಡೆಯನ್ನು ಕಟ್ಟಿದ್ದಾರೆ. ಮ್ಯಾನ್ಮಾರ್‌ನ ಸೇನಾಡಳಿತವು ಈ ಹೋರಾಟವನ್ನು ಸಶಸ್ತ್ರ ಕಾರ್ಯಾಚರಣೆಯ ಮೂಲಕ ಎದುರಿಸಲು ಮುಂದಾಗಿದೆ. ಎರಡು ವರ್ಷಗಳಲ್ಲಿ ಇಂತಹ ಕಾರ್ಯಾಚರಣೆಗೆ 3,000ಕ್ಕೂ ಹೆಚ್ಚು ನಾಗರಿಕರು ಬಲಿಯಾಗಿದ್ದಾರೆ

ಪ್ರಜಾವಾಣಿ ವಾರ್ತೆ

ವಾಯವ್ಯ ಮ್ಯಾನ್ಮಾರ್‌ನ ಹಳ್ಳಿಯೊಂದರಲ್ಲಿ ಮಂಗಳವಾರ ನಡೆಯುತ್ತಿದ್ದ ಸಭೆಯ ಮೇಲೆ ಅಲ್ಲಿನ ಸೇನೆಯೇ ವಾಯುದಾಳಿ ನಡೆಸಿದೆ. ಆ ದಾಳಿಯಲ್ಲಿ 30 ಮಕ್ಕಳೂ ಸೇರಿ 100ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಸೇನೆಯ ಈ ಕ್ರಮಕ್ಕೆ ವಿಶ್ವಸಂಸ್ಥೆ, ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗ ಆಕ್ಷೇಪ ವ್ಯಕ್ತಪಡಿಸಿವೆ. 'ಇದು ದೇಶವಿರೋಧಿ ಚಟುವಟಿಕೆಯ ಸಲುವಾಗಿ ನಡೆಯುತ್ತಿದ್ದ ಸಭೆ' ಎಂದು ದಾಳಿಯನ್ನು ಮ್ಯಾನ್ಮಾರ್ ಸೇನೆ ಸಮರ್ಥಿಸಿಕೊಂಡಿದೆ. ಆದರೆ, ಈ ವರ್ಷದ ಆರಂಭದಿಂದ ಈವರೆಗೆ 300ಕ್ಕೂ ಹೆಚ್ಚು ನಾಗರಿಕರು ಸೇನೆಯ ದಾಳಿಗೆ ಬಲಿಯಾಗಿದ್ದಾರೆ ಮತ್ತು ಒಂದು ವರ್ಷದಲ್ಲಿ 30,000ಕ್ಕೂ ಹೆಚ್ಚು ಜನರು ಮ್ಯಾನ್ಮಾರ್ ತೊರೆದಿದ್ದಾರೆ ಎಂಬ ಮಾಹಿತಿ ದಿ ವಾಷಿಂಗ್ಟನ್ ಪೋಸ್ಟ್ ತನ್ನ ವರದಿಯಲ್ಲಿದೆ. ಭಾರತದೊಂದಿಗೆ ಗಡಿ ಹಂಚಿಕೊಂಡಿರುವ ಮ್ಯಾನ್ಮಾರ್‌ನಲ್ಲಿ ಆಂತರಿಕ ಕಲಹ ತೀವ್ರ ಸ್ವರೂಪ ಪಡೆದಿದೆ ಎಂಬುದನ್ನು ಈ ಎಲ್ಲಾ ಬೆಳವಣಿಗೆಗಳು ಹೇಳುತ್ತವೆ.

ಮ್ಯಾನ್ಮಾರ್‌ನಲ್ಲಿನ ಆಂತರಿಕ ಕಲಹ ಇಂದಿನದ್ದಲ್ಲ. ಆಂತರಿಕ ಕಲಹಗಳ ಇತಿಹಾಸ 18ನೇ ಶತಮಾನದವರೆಗೂ ಹೋಗುತ್ತದೆ. ಚೀನಾವು ಬ್ರಿಟನ್‌ನ ಆಳ್ವಿಕೆಯಲ್ಲಿ ಇದ್ದಾಗ, ಅಫೀಮು ಬೆಳೆಯಲು ವಾಯವ್ಯ ಮತ್ತು ಈಶಾನ್ಯ ಮ್ಯಾನ್ಮಾರ್‌ಗ ಗುಡ್ಡಗಾಡು ಪ್ರದೇಶಗಳನ್ನು ಬಳಸಿಕೊಳ್ಳಲಾಗಿತ್ತು. ಚೀನಾವನ್ನು ಬ್ರಿಟನ್ ತೊರೆದ ನಂತರ 19ನೇ ಶತಮಾನದಲ್ಲಿ ಸ್ಥಳೀಯ 'ಅಫೀಮು ದೊರೆ'ಗಳ ಮಧ್ಯೆ ನಡೆದ ಕಲಹಗಳು ರಕ್ತಪಾತಕ್ಕೆ ಕಾರಣವಾಗಿದ್ದವು.

ಮ್ಯಾನ್ಮಾರ್ ಹಲವು ಧರ್ಮಾಚರಣೆ ಇರುವ ಮತ್ತು ಭಿನ್ನ ಜನಾಂಗೀಯ ಗುಂಪುಗಳ ಇರುವ ದೇಶ. ವಾಯವ್ಯದಲ್ಲಿ ಚಿನ್ ಜನಾಂಗದ ಪ್ರಾಬಲ್ಯವಿದ್ದರೆ, ಬ್ರಿಟಿಷ್ ವಸಾಹತುವಿನ ಕಾರಣದಿಂದಾಗಿ ಈಶಾನ್ಯದಲ್ಲಿ ಕ್ರೈಸ್ತ ಧರ್ಮೀಯರ ಪ್ರಾಬಲ್ಯವಿದೆ. ಇನ್ನು ನೈರುತ್ಯದಲ್ಲಿ ರೋಹಿಂಗ್ಯಾ ಮುಸ್ಲಿಮರ ಪ್ರಾಬಲ್ಯವಿದೆ. ಆಗ್ನೇಯ ಮ್ಯಾನ್ಮಾರ್‌ನಲ್ಲಿ ಬಾಮರ್ ಮತ್ತು ಕಾರೆನ್ ಜನಾಂಗೀಯ ಗುಂಪುಗಳ ಪ್ರಾಬಲ್ಯವಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಈ ಎಲ್ಲಾ ಜನಾಂಗೀಯ ಗುಂಪುಗಳ ಮಧ್ಯೆ ಸಂಘರ್ಷ ಇದ್ದೇ ಇತ್ತು. ಈ ಗುಂಪುಗಳು ಪರಸ್ಪರ ವಿರುದ್ಧ ಮತ್ತು ಬ್ರಿಟಿಷ್ ಸೇನೆಯ ವಿರುದ್ಧವೂ ಹೋರಾಡುತ್ತಿದ್ದವು. 1948ರಲ್ಲಿ ಸ್ವಾತಂತ್ರ್ಯ ದೊರೆತ ನಂತರ ಮ್ಯಾನ್ಮಾರ್‌ನಲ್ಲಿ ಸರ್ಕಾರ ರಚನೆಯಾಯಿತು. ದೇಶದ ಅತ್ಯಂತ ದೊಡ್ಡ ಜನಾಂಗೀಯ ಗುಂಪಾದ ಬಾಮರ್ ಜನರೇ ಈ ಸರ್ಕಾರದಲ್ಲಿ ತುಂಬಿದ್ದರು. ಬಾಮರ್ ಜನರು ಬೌದ್ಧ ಧರ್ಮದ ಅನುಯಾಯಿಗಳು ಮತ್ತು ಅವರ ಭಾಷೆ ಬರ್ಮಾಸ್. ಸ್ವಾತಂತ್ರ್ಯದ ನಂತರ ಬಾಮರ್ ಜನರು ಬೇರೆಲ್ಲಾ ಜನಾಂಗೀಯ ಗುಂಪುಗಳ ಮೇಲೆ ಬೌದ್ಧ ಧರ್ಮ ಮತ್ತು ಬರ್ಮಾಸ್ ಭಾಷೆಯನ್ನು ಹೇರಲು ಆರಂಭಿಸಿದರು. ಇದನ್ನು ವಿರೋಧಿಸಿ ದೇಶದ ಆರೂ ಪ್ರಾಂತ್ಯಗಳಲ್ಲಿ ಸಶಸ್ತ್ರ ಹೋರಾಟಗಳು ನಡೆದವು. ಅದನ್ನೇ ನೆಪವನ್ನಾಗಿ ಇರಿಸಿಕೊಂಡು ಬಾಮರ್ ಜನರು 1962ರಲ್ಲಿ ಸೇನಾಡಳಿತವನ್ನು ಜಾರಿಗೆ ತಂದರು. 2011ರವರೆಗೆ ಅಸ್ತಿತ್ವದಲ್ಲಿ ಇದ್ದ ಸೇನಾಡಳಿತದ ಉದ್ದಕ್ಕೂ ಆಂತರಿಕ ಸಂಘರ್ಷ ಇದ್ದೇ ಇತ್ತು.

2015ರಲ್ಲಿ ಮತ್ತೆ ಪ್ರಜಾಪ್ರಭುತ್ವ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಆ ಸರ್ಕಾರವೂ ಬಹುಸಂಖ್ಯಾತ ಬಾಮರ್ ಜನರದ್ದೇ ಆಗಿತ್ತು. ಈ ಸರ್ಕಾರದ ಅವಧಿಯಲ್ಲಿ ಆಂತರಿಕ ಕಲಹಗಳು ನಿಯಂತ್ರಣಕ್ಕೆ ಬಂದವು. ಆದರೆ, ರೋಹಿಂಗ್ಯಾ ಮುಸ್ಲಿಮರನ್ನು ದೇಶದಿಂದ ಹೊರಗಟ್ಟಲು ಸರ್ಕಾರವೇ ಬೆಂಬಲ ಘೋಷಿಸಿತು. 2017ರಿಂದ 2021ರ ಮಧ್ಯೆ 20 ಲಕ್ಷಕ್ಕೂ ಹೆಚ್ಚು ರೋಹಿಂಗ್ಯಾ ಮುಸ್ಲಿಮರು ಮ್ಯಾನ್ಮಾರ್ ತೊರೆದರು. ಆದರೆ, ಈ ಸರ್ಕಾರಿ ಪ್ರಾಯೋಜಿತ ಗಲಭೆಯಲ್ಲಿ ಮೃತಪಟ್ಟವರ ಸಂಖ್ಯೆ ಲಭ್ಯವಿಲ್ಲ. ಇದರ ಬೆನ್ನಲ್ಲೇ ಆಂತರಿಕ ಕಲಹ ಮತ್ತು ಭ್ರಷ್ಟಾಚಾರದ ಕಾರಣವೊಡ್ಡಿ ಸೇನೆಯು, ಪ್ರಜಾಸತ್ತಾತ್ಮಕ ಸರ್ಕಾರವನ್ನು ಉರುಳಿಸಿತು. ಸೇನಾಡಳಿತವನ್ನು ಮರುಸ್ಥಾಪಿಸಿತು.

ಸೇನಾಡಳಿತ ಮರುಜಾರಿಯಾದ ನಂತರ ಎಲ್ಲಾ ಜನಾಂಗೀಯ ಗುಂಪುಗಳ ಮೇಲೆ ಬೌದ್ಧ ಧರ್ಮ ಮತ್ತು ಬರ್ಮಾಸ್ ಭಾಷೆಯನ್ನು ಪಟ್ಟು ಹಿಡಿದು ಹೇರಲಾಗುತ್ತಿದೆ. ಸೇನೆಯ ಈ ನೀತಿಯ ವಿರುದ್ಧ ಬೇರೆಲ್ಲಾ ಜನಾಂಗೀಯ ಗುಂಪುಗಳು ಹೋರಾಟಕ್ಕೆ ಇಳಿದಿವೆ. ಚಿನ್ ಜನರು, ಕ್ರೈಸ್ತ ಧರ್ಮೀಯರು, ರೋಹಿಂಗ್ಯಾ ಮುಸ್ಲಿಮರು, ಕಾರೆನ್ ಜನರು ಸೇನೆ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಇಳಿದಿದ್ದಾರೆ. ಈ ಎಲ್ಲಾ ಜನಾಂಗಗಳ ಜನರ ಬೆಂಬಲ ಪಡೆದಿರುವ 'ಪೀಪಲ್ಸ್ ಡಿಫೆನ್ಸ್ ಫೋರ್ಸ್ –ಪಿಡಿಎಫ್' ಎಂಬ ಪಡೆಯನ್ನು ಸ್ಥಾಪಿಸಲಾಗಿದೆ. 'ಸೇನಾಡಳಿತವನ್ನು ಕಿತ್ತೊಗೆಯುವುದು ಮತ್ತು ಎಲ್ಲರ ಮೇಲೆ ಬೌದ್ಧಧರ್ಮ ಮತ್ತು ಬರ್ಮಾಸ್ ಭಾಷೆ ಹೇರಿಕೆಯನ್ನು ನಿಲ್ಲಿಸುವುದು ನಮ್ಮ ಆದ್ಯ ಗುರಿ' ಎಂದು ಪಿಡಿಎಫ್ ಹೇಳಿಕೊಂಡಿದೆ. ಸೇನಾ ಚಟುವಟಿಕೆಗಳಿಗೆ ತಡೆ ಒಡ್ಡುವ ಕೆಲಸವನ್ನು ಪಿಡಿಎಫ್ ಮಾಡುತ್ತಿದೆ. ಪ್ರತಿಯಾಗಿ ಪಿಡಿಎಫ್‌ನ ನೆಲೆಗಳು ಮತ್ತು ಅದಕ್ಕೆ ಬೆಂಬಲ ಘೋಷಿಸುವ ಗ್ರಾಮಗಳ ಮೇಲೆ ಸೇನೆ ದಾಳಿ ನಡೆಸುತ್ತಲೇ ಇದೆ. 2021ರ ಡಿಸೆಂಬರ್‌ನಿಂದ ಈವರೆಗೆ ಸೇನೆ ಈ ರೀತಿ ನಡೆಸಿದ ದಾಳಿಗಳಿಗೆ 3,200 ನಾಗರಿಕರು ಬಲಿಯಾಗಿದ್ದಾರೆ.




ಮ್ಯಾನ್ಮಾರ್‌ನ ಪಝಿಗಿ ಗ್ರಾಮದಲ್ಲಿ ಸೇನಾ ವಿಮಾನದ ಬಾಂಬ್ ದಾಳಿಯಿಂದ ಗ್ರಾಮಸ್ಥರ ಮೃತದೇಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು–ಎಪಿ/ಪಿಟಿಐ ಚಿತ್ರ

ನಾಗರಿಕರ ಮೇಲೆ ದಾಳಿ

ಯಾಂಗೂನ್ (ಎಎಫ್‌ಪಿ/ರಾಯಿಟರ್ಸ್): ಮ್ಯಾನ್ಮಾರ್‌ನ ಸೇನಾಡಳಿತ ಸರ್ಕಾರವು ತನ್ನದೇ ದೇಶದ ಗ್ರಾಮದ ಮೇಲೆ ನಡೆಸಿದ ದಾಳಿಯಲ್ಲಿ 100ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ವಾಯವ್ಯ ಮ್ಯಾನ್ಮಾರ್‌ನ ಸಗಾಯಿಂಗ್ ರಾಜ್ಯದ ಕನ್ಬಾಲು ಟೌನ್‌ಶಿಪ್ ಸಮೀಪದ ಪಝಿಗಿ ಎಂಬ ಹಳ್ಳಿಯ ಮೇಲೆ ಸೇನಾ ವಿಮಾನ ಹಾಗೂ ಹೆಲಿಕಾಪ್ಟರ್‌ಗಳು ಮಂಗಳವಾರ ಬಾಂಬ್ ದಾಳಿ ನಡೆಸಿವೆ. ಮೃತರಲ್ಲಿ 30ಕ್ಕೂ ಹೆಚ್ಚು ಮಕ್ಕಳು ಸೇರಿವೆ ಎಂದು ಹೇಳಲಾಗಿದೆ. ಸೇನಾ ಕಾರ್ಯಾಚರಣೆಯನ್ನು ಮ್ಯಾನ್ಮಾರ್ ಸರ್ಕಾರವು ಬುಧವಾರ ಖಚಿತಪಡಿಸಿದೆ.

ದೇಶದ ಸೇನೆ ನೇತೃತ್ವದ ಸರ್ಕಾರದ ವಿರೋಧಿಗಳ ಗುಂಪಿನ ಕಾರ್ಯಕ್ರಮವನ್ನು ಗುರಿಯಾಗಿಸಿ ಈ ದಾಳಿ ನಡೆಸಲಾಗಿದೆ. 2021ರಲ್ಲಿ ಸೇನಾ ದಂಗೆ ನಡೆಸಿ ಅಧಿಕಾರಕ್ಕೆ ಬಂದ ಮ್ಯಾನ್ಮಾರ್ ಸೇನಾಡಳಿತವನ್ನು ಎದುರು ಹಾಕಿಕೊಂಡಿರುವ ಸ್ಥಳೀಯ ಜನಾಂಗೀಯ ಸಶಸ್ತ್ರ ಗುಂಪಿನ ಕಚೇರಿ ಉದ್ಘಾಟನಾ ಕಾರ್ಯಕ್ರಮವನ್ನು ಪಝಿಗಿ ಎಂಬ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮಕ್ಕಳು ವೇದಿಕೆ ಮೇಲೆ ನೃತ್ಯ ಪ್ರದರ್ಶಿಸುತ್ತಿದ್ದ ಸಮಯದಲ್ಲಿ ಬಾಂಬ್ ದಾಳಿ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಬಾಂಬ್ ದಾಳಿಯ ಪರಿಣಾಮದಿಂದ, ಮೃತದೇಹಗಳು ಇಡೀ ಪ್ರದೇಶದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಎಂದು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವವವರು ತಿಳಿಸಿದ್ದಾರೆ. ಸಾವಿನ ಸಂಖ್ಯೆ ಎಷ್ಟು ಎಂಬುದು ಖಚಿತಗೊಂಡಿಲ್ಲ.

ಎಲ್ಲ ಪ್ರಾಂತ್ಯಗಳಲ್ಲೂ ಸಂಘರ್ಷ



ವಾಯವ್ಯ ಪ್ರಾಂತ್ಯ

ಈ ಪ್ರಾಂತ್ಯದಲ್ಲಿ ಚಿನ್ ಜನಾಂಗದ ಜನರೇ ಬಹುಸಂಖ್ಯಾತರು. ಚಿನ್, ಸಗಾಯಿಂಗ್, ಕಾಲೆ ಮತ್ತು ಮೊನ್‌ಯ್ವಾ ರಾಜ್ಯಗಳು ಈ ಪ್ರಾಂತ್ಯದಲ್ಲಿವೆ. ಬುಡಕಟ್ಟು ಸಂಸ್ಕೃತಿಯ ಈ ಜನರದ್ದು ಚಿನ್ ಧರ್ಮ ಮತ್ತು ಚಿನ್ ಭಾಷೆ. ಬಾಮರ್ ಜನರ ಬೌದ್ಧ ಧರ್ಮ ಮತ್ತು ಬರ್ಮಾಸ್ ಭಾಷೆ ಹೇರಿಕೆಯ ವಿರುದ್ಧ ಈ ಜನರು 'ಚಿನ್ ನ್ಯಾಷನಲಿಸ್ಟ್ ಫ್ರಂಟ್ (ಸಿಎನ್‌ಎಫ್)' ಎಂಬ ಪಡೆಯನ್ನು ಕಟ್ಟಿಕೊಂಡು ಹೋರಾಡುತ್ತಿದ್ದಾರೆ. ಪ್ರಜಾಪ್ರಭುತ್ವ ಸರ್ಕಾರದ ಸಂದರ್ಭದಲ್ಲಿ ಸಿಎನ್‌ಎಫ್ ತಟಸ್ಥವಾಗಿತ್ತು. 2021ರ ಸೇನಾ ದಂಗೆಯ ನಂತರ ಮತ್ತೆ ಹೋರಾಟಕ್ಕೆ ಇಳಿದಿದೆ. ಈಗ ಪಿಡಿಎಫ್ ಸೇನೆಗೆ ಬೆಂಬಲ ನೀಡಿದೆ. ಪಿಡಿಎಫ್‌ಗೆ ಬೆಂಬಲ ನೀಡಿದ ಕಾರಣಕ್ಕೆ ಸೇನೆಯು ಚಿನ್ ಜನರ ವಸತಿ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿದೆ. ಸೇನೆಯು ಈ ಪ್ರಾಂತ್ಯದಲ್ಲಿ ಹಲವು ಹಳ್ಳಿಗಳನ್ನು ಸಂಪೂರ್ಣವಾಗಿ ಸುಟ್ಟುಹಾಕಿದೆ. ಜನರಿಗೆ ಬೇರೆಡೆಯಿಂದ ಆಹಾರ, ವೈದ್ಯಕೀಯ, ಆರ್ಥಿಕ ನೆರವು ಬರುವುದನ್ನು ಸೇನೆ ಸಂಪೂರ್ಣವಾಗಿ ತಡೆ ಹಿಡಿದಿದೆ ಎಂದು ದಿ ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಮಂಗಳವಾರ ಸೇನೆಯು ದಾಳಿ ನಡೆಸಿದ ಗ್ರಾಮವು ಇದೇ ಪ್ರಾಂತ್ಯದ ಸಗಾಯಿಂಗ್ ರಾಜ್ಯದಲ್ಲಿದೆ. 2021ರಿಂದ ಈ ಒಂದು ಪ್ರಾಂತ್ಯದಲ್ಲೇ 20,000ಕ್ಕೂ ಹೆಚ್ಚು ಜನರು ನೆಲೆ ಕಳೆದುಕೊಂಡಿದ್ದಾರೆ.

ಈಶಾನ್ಯ ಪ್ರಾಂತ್ಯ

ಕಚಿನ್ ಮತ್ತು ಶಾನ್ ರಾಜ್ಯಗಳು ಈ ಪ್ರಾಂತ್ಯದಲ್ಲಿವೆ. ಕಚಿನ್, ಶಾನ್ ಮತ್ತು ತಾಂಗ್ ಇಲ್ಲಿನ ಪ್ರಮುಖ ಜನಾಂಗೀಯ ಗುಂಪುಗಳು. ಈ ಗುಂಪುಗಳು ತಮ್ಮದೇ ಆದ ಭಾಷೆ ಮತ್ತು ಧರ್ಮವನ್ನು ಅನುಸರಿಸುತ್ತವೆ. ಕ್ರೈಸ್ತ ಧರ್ಮದ ಪ್ರಭಾವವಿರುವ ಈ ಪ್ರಾಂತ್ಯದಲ್ಲಿ ಬೌದ್ಧ ಧರ್ಮದ ಹೇರಿಕೆಗೆ ಸಣ್ಣಮಟ್ಟದ ವಿರೋಧವಿತ್ತು. ಆದರೆ, 2021ರ ಸೇನಾ ದಂಗೆಗೂ ಮುನ್ನ ಯಾವುದೇ ರೀತಿಯ ಸಶಸ್ತ್ರ ಹೋರಾಟವಿರಲಿಲ್ಲ. ದಂಗೆಯ ನಂತರ ಸೇನಾಡಳಿತವು ಬೌದ್ಧ ಧರ್ಮ ಮತ್ತು ಬರ್ಮಾಸ್ ಭಾಷೆ ಹೇರಿಕೆಗೆ ಒತ್ತು ನೀಡಿದ್ದರಿಂದ ಇಲ್ಲಿನ ಜನರು ಸಶಸ್ತ್ರ ಹೋರಾಟಕ್ಕೆ ಇಳಿದರು. ಈ ಮೂರೂ ಜನಾಂಗಗಳ ಜನರು ಕಚಿನ್ ಇಂಡಿಪೆಂಡೆಂಡ್ ಆರ್ಗನೈಸೇಷನ್ ಹೆಸರಿನಲ್ಲಿ ಒಟ್ಟಾಗಿದ್ದಾರೆ. ಪಿಡಿಎಫ್ ಜತೆಗೆ ಕೈಜೋಡಿಸಿದ್ದಾರೆ.

ಆಗ್ನೇಯ ಪ್ರಾಂತ್ಯ


ಈ ಪ್ರಾಂತ್ಯದಲ್ಲಿ ಬಾಮರ್ ಮತ್ತು ಕಾರೆನ್ ಜನಾಂಗದ ಜನರ ಪ್ರಾಬಲ್ಯವಿದೆ. ಆದರೆ, ಎರಡೂ ಜನಾಂಗಗಳ ಧರ್ಮ ಮತ್ತು ಭಾಷೆ ಬೇರೆ. ಬಹುಸಂಖ್ಯಾತರಾದ ಬಾಮರ್ ಜನರು ತಮ್ಮ ಬೌದ್ಧ ಧರ್ಮ ಮತ್ತು ಬರ್ಮಾಸ್ ಭಾಷೆಯನ್ನು ಕಾರೆನ್ ಜನರ ಮೇಲೆ ಹೇರಲು ಯತ್ನಿಸುತ್ತಿದ್ದಾರೆ. ಈ ಎರಡೂ ಜನಾಂಗೀಯ ಗುಂಪುಗಳ ನಡುವಣ ಸಂಘರ್ಷ 70 ವರ್ಷಕ್ಕಿಂತ ಹಳೆಯದು. ಆರ್ಥಿಕವಾಗಿ ದುರ್ಬಲವಾದ ಕಾರೆನ್ ಜನರ ಮೇಲೆ ಸೇನಾಡಳಿತದ ದಬ್ಬಾಳಿಕೆ ಹೆಚ್ಚಾಗಿದೆ. 2021ರ ದಂಗೆಯ ನಂತರ ಈ ಜನರನ್ನು, ಹೊರಗಟ್ಟುವ ಕಾರ್ಯಸೂಚಿಯನ್ನು ಸೇನೆ ಜಾರಿಗೆ ತಂದಿದೆ. ಈ ಅವಧಿಯಲ್ಲಿ 10,000ಕ್ಕೂ ಹೆಚ್ಚು ಕಾರೆನ್ ಜನರು ಥಾಯ್ಲೆಂಡ್‌ಗೆ ಓಡಿ ಹೋಗಿದ್ದಾರೆ. ಪಿಡಿಎಫ್ ಈ ಪ್ರಾಂತ್ಯದಲ್ಲೂ ಸಕ್ರಿಯವಾಗಿದ್ದು, ಸೇನಾಡಳಿತದ ವಿರುದ್ಧ ಹೋರಾಟವನ್ನು ಸಂಘಟಿಸುತ್ತಿದೆ.

ಮಧ್ಯ ಮತ್ತು ದಕ್ಷಿಣ ಪ್ರಾಂತ್ಯಗಳು

ಈ ಎರಡೂ ಪ್ರಾಂತ್ಯಗಳಲ್ಲಿ ಬಾಮರ್ ಜನರದ್ದೇ ಪ್ರಾಬಲ್ಯ. ಬೇರೆ ಜನಾಂಗೀಯ ಗುಂಪುಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಲ್ಪಸಂಖ್ಯಾತರು. ವಸಾಹತುಪೂರ್ವ 'ಬರ್ಮಾ'ದಲ್ಲಿ ಈ ಪ್ರಾಂತ್ಯಗಳು ಆಡಳಿತ ಕೇಂದ್ರವಾಗಿದ್ದವು. ಈಚಿನವರೆಗೂ ಇಲ್ಲಿ ಸಂಘರ್ಷ ಇರಲೇ ಇಲ್ಲ. ಆದರೆ ಒಂದು ದಶಕದಿಂದ ಈಚೆಗೆ ಇಲ್ಲಿಯೂ ಸಂಘರ್ಷ ಆರಂಭವಾಗಿದೆ. ಈ ಪ್ರದೇಶದಲ್ಲಿ ರೈತ ಸಮುದಾಯದ್ದು ಬಹುಸಂಖ್ಯೆ. ಸರ್ಕಾರವು ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪರಮಾಧಿಕಾರ ಹೊಂದಿದೆ. ಇದು ಇಲ್ಲಿನ ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಈಗ ಸೇನಾಡಳಿತದ ವಿರುದ್ಧ ಎಲ್ಲಾ ಪ್ರಾಂತ್ಯಗಳ ಜನಾಂಗೀಯ ಗುಂಪುಗಳನ್ನು ಒಗ್ಗೂಡಿಸಿರುವ ಪಿಡಿಎಫ್ ಜನ್ಮತಳೆದದ್ದು ಇದೇ ಪ್ರಾಂತ್ಯಗಳಲ್ಲಿ.

ರಖೀನೆ ಪ್ರಾಂತ್ಯ

ರೋಹಿಂಗ್ಯಾ ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರಾಂತ್ಯವಿದು. ಸೇನೆ ಮತ್ತು ಪ್ರಜಾಪ್ರಭುತ್ವ ಸರ್ಕಾರಗಳೆರಡೂ ಈ ಜನರನ್ನು ಮ್ಯಾನ್ಮಾರ್‌ನಿಂದ ಹೊರಗಟ್ಟುವ ಕಾರ್ಯಸೂಚಿಯನ್ನು ಹೊಂದಿದ್ದವು. ಸೇನಾಡಳಿತದ ಅವಧಿಯಲ್ಲೇ ಈ ಜನರನ್ನು ಗುಳೆ ಎಬ್ಬಿಸಿ, ಶಿಬಿರಗಳಲ್ಲಿ ಕೂಡಿ ಹಾಕಲಾಗುತ್ತಿತ್ತು. ಆ ಜನರು ಅಲ್ಲಿಯೇ ದುಡಿದು, ಪಡಿತರ ಪಡೆದುಕೊಂಡು ಬದುಕಬೇಕಿತ್ತು. 2015ರಲ್ಲಿ ಪ್ರಜಾಪ್ರಭುತ್ವ ಸರ್ಕಾರ ಬಂದ ನಂತರ, ರೋಹಿಂಗ್ಯಾ ಮುಸ್ಲಿಮರ ಮೇಲಿನ ದಾಳಿ ಹೆಚ್ಚಾಯಿತು. ಒಂದೆಡೆ ಸೇನೆ, ಮತ್ತೊಂದೆಡೆ ಬಾಮರ್ ಜನಾಂಗದ ಜನರು ರೋಹಿಂಗ್ಯಾ ಮುಸ್ಲಿಮರ ಮನೆಗಳನ್ನು ಸುಟ್ಟರು. 2017ರ ವೇಳೆಗೆ ಇಂತಹ ದಾಳಿಗಳು ತೀವ್ರ ಸ್ವರೂಪ ಪಡೆದಿತ್ತು. ಆ ಅವಧಿಯಲ್ಲಿ 20 ಲಕ್ಷಕ್ಕೂ ಹೆಚ್ಚು ಜನರು ಮ್ಯಾನ್ಮಾರ್ ತೊರೆದರು. ಪಕ್ಕದ ಬಾಂಗ್ಲಾದೇಶ, ಭಾರತಕ್ಕೆ ಗುಳೆ ಹೋದರು. ಈಗ ಸೇನಾಡಳಿತದ ವಿರುದ್ಧ ರೋಹಿಂಗ್ಯಾ ಮುಸ್ಲಿಮರು ಒಟ್ಟಾಗಿದ್ದಾರೆ. ಪಿಡಿಎಫ್ ಸೇನೆಯ ಜತೆ ಸೇರಿ, ಸೇನೆಯ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಇಳಿದಿದ್ದಾರೆ.



ಆಧಾರ: ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸ್ಟ್ರಾಟೆಜಿಕ್ ಸ್ಟಡೀಸ್ ಅಧ್ಯಯನ ವರದಿಗಳು, ದಿ ವಾಷಿಂಗ್ಟನ್ ಪೋಸ್ಟ್, ದಿ ನ್ಯೂಯಾರ್ಕ್ ಟೈಮ್ಸ್, ರಾಯಿಟರ್ಸ್, ಬಿಬಿಸಿ, ಅಮ್ನೆಸ್ಟಿ ಇಂಟರ್‌ನ್ಯಾಷನಲ್

ಸಿನಿ ಬಿಟ್ಸ್

ಪ್ರೇಮ–ಆ್ಯಕ್ಷನ್ ಬೆಸುಗೆಯ 'ರಭಸ'

ನಾಯಕ ವಿರೇನ್ ಕೇಶವ್ 'ಕಾಕ್ಟೈಲ್' ಚಿತ್ರದ ಬಳಿಕ ಈಗ 'ರಭಸ' ಎಂಬ ಮತ್ತೊಂದು ಚಿತ್ರದೊಂದಿಗೆ ಬರುತ್ತಿದ್ದಾರೆ. ಡಾ.ಶಿವಪ್ಪ ಈ ಚಿತ್ರದ ನಿರ್ಮಾಪಕರು. ರಾಜ್‌ಚೈತನ್ಯ ನಿರ್ದೇಶನ ಮಾಡುತ್ತಿದ್ದಾರೆ.

'ಕಾಕ್ಟೈಲ್' ಚಿತ್ರದಲ್ಲಿ ಭರವಸೆ ಮೂಡಿಸಿದ್ದ ವಿರೇನ್, ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ನಾಯಕನಟ ಪ್ರಶಸ್ತಿ ಪಡೆದುಕೊಂಡಿದ್ದರು. 'ರಭಸ' ಚಿತ್ರವು ಸಂಪೂರ್ಣ ಆ್ಯಕ್ಷನ್‌ನೊಂದಿಗೆ ಮುದ್ದಾದ ಪ್ರೇಮಕಥೆ ಹೊಂದಿದೆ ಎಂದು ಚಿತ್ರತಂಡ ಹೇಳಿದೆ. ನಾಯಕಿ, ತಾಂತ್ರಿಕ ವರ್ಗದ ಆಯ್ಕೆ ನಡೆಯುತ್ತಿದೆ. ದೊಡ್ಡ ನಟರು ಚಿತ್ರದಲ್ಲಿರಲಿದ್ದಾರೆ. ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ಕೊಡಗು, ನೇಪಾಳ, ಬ್ಯಾಂಕಾಕ್ ಹಾಗೂ ಗೋವಾದ ಸುಂದರ ತಾಣಗಳಲ್ಲಿ ಏಪ್ರಿಲ್-ಮೇ ತಿಂಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿರುವುದಾಗಿ ಡಾ.ಶಿವಪ್ಪ ಮಾಹಿತಿ ಹಂಚಿಕೊಂಡಿದ್ದಾರೆ.



ವಿರೇನ್ ಕೇಶವ್

ಯೋಗಿ 50ನೇ ಚಿತ್ರ 'ರೋಜಿ'

'ದುನಿಯಾ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶ ಮಾಡಿದ್ದ ಯೋಗಿ, ವಿಭಿನ್ನ ಪಾತ್ರಗಳ ಆಯ್ಕೆ ಮತ್ತು ನಟನೆಯಿಂದ ಗುರುತಿಸಿಕೊಂಡವರು. ಲೂಸ್ ಮಾದನಾಗಿ ಜನಪ್ರಿಯರಾದ ಅವರ 50ನೇ ಚಿತ್ರ 'ರೋಜಿ'ಗೆ ಇತ್ತೀಚೆಗೆ ಚಾಲನೆ ದೊರೆತಿದೆ. ಡಾಲಿ ಧನಂಜಯ ನೂತನ ಚಿತ್ರದ ಶೀರ್ಷಿಕೆ ಅನಾವರಣ ಮಾಡಿ ಗೆಳೆಯನಿಗೆ ಶುಭ ಹಾರೈಸಿದರು.

'ಯೋಗಿ ನನ್ನ ಆತ್ಮೀಯ ಗೆಳೆಯ. ಯೋಗಿ ಅಭಿನಯದ 50ನೇ ಸಿನಿಮಾದ ಚಿತ್ರೀಕರಣಕ್ಕೆ ಚಾಲನೆ ನೀಡಲು ಖುಷಿಯಾಗುತ್ತಿದೆ. ಶೂನ್ಯ ಕೂಡ ನಮ್ಮ ಸಂಸ್ಥೆಯ ನಿರ್ಮಾಣದ ಚಿತ್ರ ನಿರ್ದೇಶನ ಮಾಡಿದ್ದರು. ಈ ಚಿತ್ರ ಭರ್ಜರಿ ಯಶಸ್ಸು ಕಾಣಲಿ' ಎಂದು ಡಾಲಿ ಹಾರೈಸಿದರು.



ಯೋಗಿಯ 50ನೇ ಚಿತ್ರಕ್ಕೆ ಚಾಲನೆ ನೀಡಿದ ಡಾಲಿ ಧನಂಜಯ್

'ಹೆಡ್ ಬುಷ್' ಚಿತ್ರವನ್ನು ನಿರ್ದೇಶಿಸಿದ್ದ ಶೂನ್ಯ, ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಡಿ.ವೈ.ರಾಜೇಶ್ ಹಾಗೂ ಡಿ.ವೈ.ವಿನೋದ್ ನಿರ್ಮಾಪಕರು.

'ಇದು ನನ್ನ ಐವತ್ತನೇ ಚಿತ್ರ. ಚಿತ್ರದಲ್ಲಿ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ಹಿಂದೆ ಮಾಡಿರುವ ಪಾತ್ರಗಳಿಗಿಂತ ವಿಭಿನ್ನ ಪಾತ್ರ ಎನ್ನಬಹುದು. ಶೂನ್ಯ ಕಥೆಯನ್ನು ಚೆನ್ನಾಗಿ ಮಾಡಿಕೊಂಡಿದ್ದಾರೆ' ಎಂದು ನಾಯಕ ಯೋಗಿ ಹೇಳಿದರು.

'ಚಿತ್ರರಂಗದವರಿಗೆ ಚಿತ್ರಮಂದಿರ ದೇವಸ್ಥಾನವಿದ್ದಂತೆ. ಹಾಗಾಗಿ ಇಲ್ಲಿಯೇ ಹೊಸ ಸಿನಿಮಾ ಕೆಲಸ ಆರಂಭಿಸಿದ್ದೇವೆ. ಮೇ ತಿಂಗಳಲ್ಲಿ ಚಿತ್ರೀಕರಣ ಆರಂಭವಾಗಲಿದೆ' ಎಂದು ನಿರ್ದೇಶಕ ಶೂನ್ಯ ತಿಳಿಸಿದರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಏಪ್ರಿಲ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಬಹುಳ ಅಷ್ಟಮಿ ಗಂ. 25-35, ನಕ್ಷತ್ರ: ಪೂರ್ವಾಷಾಢ ಗಂ. 10-43 ಯೋಗ: ಶಿವ ಗಂ. 12-33, ಕರಣ: ಬಾಲವ ಗಂ. 14-41, ಮೀನ ಮಾಸದ 29 ನೇ ದಿನ, ಮಳೆನಕ್ಷತ್ರ: ರೇವತಿ 4, ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-23 ಸೂರ್ಯಾಸ್ತ : 06-40

ಮುಸ್ಲಿಂ ದಿನಾಂಕ : 21 ರಂಜಾನ್

ದಿನ ವಿಶೇಷ : ಷಹದತ್-ಎ-ಹಜರತ್ ಅಲಿ (ಮುಸ್ಲಿಂ)

ಅದೃಷ್ಟ ಸಂಖ್ಯೆ : 10, 7

ಮೇಷ: ಅವಘಡವನ್ನು ಸರಿಪಡಿಸಿಕೊಂಡು ಮರೆಯಲು ಹೆಚ್ಚಿನ ಸಮಯ ಹಿಡಿಯಬಹುದು. ಯಾತ್ರಿಕರಿಗೆ ದೇವರ ಕೃಪೆಯಿಂದಾಗಿ ನೀವು ಹೋದ ಕಡೆ ಎಲ್ಲಾ ಒಳ್ಳೆಯ ವ್ಯವಸ್ಥೆ ಪಡೆಯುವಿರಿ.

ವೃಷಭ: ಸುಂದರ ದಿನದ ಉಪಸಂಹಾರಕ್ಕೆ ಬಂದಾಗ ಈ ದಿನ ಮರುಕಳಿಸುವುದಿಲ್ಲವೆಂಬ ತಿಳಿನೋವು ಉಂಟಾಗಬಹುದು. ಸಾರ್ವಜನಿಕರ ಸ್ವತ್ತು ಬಳಸುವಾಗ ಸ್ವಂತದ್ದೆನ್ನುವಂತೆ ಬಳಸಿ ಹಾಳು ಮಾಡಬೇಡಿ.

ಮಿಥುನ: ಹಲವು ದಿನಗಳಿಂದ ಪರ ಊರಿನ ಪ್ರಯಾಣ ಹೆಚ್ಚಿನ ಆಯಾಸ ಉಂಟುಮಾಡುವುದು. ವೃತ್ತಿ ವಿಷಯಗಳಲ್ಲಿ ಬಯಸದೇ ಇರುವಂಥ ಎದುರಾಗುತ್ತದೆ. ಬಂದಂತಹ ಅವಕಾಶ ತಪ್ಪಿಸಿಕೊಳ್ಳಬೇಡಿ.

ಕರ್ಕಾಟಕ: ಉತ್ತಮ ಸೌಕರ್ಯ ಸವಲತ್ತನ್ನು ಮನೆಯಿಂದ ಹೊರಗೆ ಹುಡುಕುವಂತಹ ಪ್ರಯತ್ನ ಮಾಡುವಿರಿ. ವಿವಾಹ ವಿಚಾರದ ನಿರ್ಧಾರಗಳೆಲ್ಲ ಅಡ್ಡಗೋಡೆಯ ಮೇಲಿನ ದೀಪದಂತೆ ಇರುವುದು ಅಸಮಧಾನವಾಗುತ್ತದೆ.

ಸಿಂಹ: ಮೈಮುರಿದು ಕೆಲಸ ಮಾಡುವ ಬದ್ಧತೆ ಯಾವುದೇ ಕಾರಣಕ್ಕೂ ನಿಲ್ಲಿಸಬೇಡಿ. ಸಂಕೀರ್ಣ ಸಂದರ್ಭಗಳಲ್ಲಿ ವಿವಿಧ ವಿಷಯಗಳನ್ನು ಒಟ್ಟಿಗೆ ನೆನೆಸಿಕೊಳ್ಳಬೇಕಾಗಬಹುದು. ಮನೆಗೆ ಅತಿಥಿಯ ಆಗಮನವಾಗುವುದು.

ಕನ್ಯಾ: ತಾಮಸ ಪ್ರವೃತ್ತಿಯ ಗುಣಗಳನ್ನು ಸಾತ್ವಿಕರ ಎದುರು ಪ್ರದರ್ಶಿಸಬೇಡಿ. ಸುಮುಹೂರ್ತದಲ್ಲಿ ನಡೆದ ಕಾರ್ಯಕ್ರಮವು ಉತ್ತಮ ಫಲಗಳನ್ನು ನೀಡುವುದರಲ್ಲಿ ಸಂಶಯವಿಲ್ಲ. ಮೃತ್ಯುವಿನ ದರ್ಶನ ಆದಂತಾಗಬಹುದು.

ತುಲಾ: ಯಾವುದೋ ಒಂದು ಸಂದರ್ಭವನ್ನು ನೋಡಿ ಸುಪ್ತವಾಗಿದ್ದ ಮಾತೃತ್ವದ ಭಾವನೆ ಜಾಗೃತವಾಗುತ್ತದೆ. ವೈಯಕ್ತಿಕ ತೃಪ್ತಿಯನ್ನೆ ಧ್ಯೇಯೋದ್ದೇಶವೆಂದು ತಿಳಿದ ನೀವು ಸಮಾಜಮುಖಿ ಆಗಬೇಕಾಗುತ್ತದೆ.

ವೃಶ್ಚಿಕ: ಕೊಡುವುದಕ್ಕಿಂತ ಹೆಚ್ಚಿನ ಸ್ವಾತಂತ್ರ್ಯವನ್ನು ಮಕ್ಕಳು ಬಯಸುವುದು ತೀರ ಕೋಪವನ್ನು ಉಂಟುಮಾಡಬಹುದು. ಗೃಹೋಪಕರಣದ ತಯಾರಕರಿಗೆ ಉತ್ತಮವಾದ ಅವಕಾಶಗಳು ಲಭಿಸಲಿವೆ.

ಧನು: ಕೊನೆಯ ಕ್ಷಣದವರೆಗೂ ನಿಮ್ಮ ಜೊತೆಯನ್ನು ಕೊಡುವಂತಹ ಸ್ನೇಹಿತರನ್ನು ಸಂಪಾದನೆ ಮಾಡುವಿರಿ. ಮನೋರೋಗದಿಂದ ಬಳಲುತ್ತಿರುವವರು ಆದಷ್ಟು ಬೇಗ ನಿಮ್ಮ ಚಿಕಿತ್ಸೆ ಪಡೆದುಕೊಳ್ಳಿರಿ.

ಮಕರ: ವೈವಾಹಿಕ ಜೀವನದಲ್ಲಿ ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ವಾರ್ಷಿಕವಾಗಿ ಆಚರಣೆ ಮಾಡುವ ದೇವತಾ ಕಾರ್ಯಗಳತ್ತ ಗಮನ ನೀಡಿ.

ಕುಂಭ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆ ಬಹಿರಂಗಗೊಂಡು ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಕಲಾವಿದರಾದ ಕತೆ- ಕವನಗಳ ಬರವಣಿಗೆಯಲ್ಲಿ ಅಥವಾ ಪುಸ್ತಕಗಳ ಅಧ್ಯಯನದಲ್ಲಿ ಸಮಯ ಕಳೆಯುವಿರಿ.

ಮೀನ: ಪಾರಂಪರಿಕ ವೃತ್ತಿ ಮುಂದುವರಿಸುವವರಿಗೆ ಶುಭಫಲ ಪ್ರಾಪ್ತಿ. ರಾಜಕೀಯ ವಿದ್ಯಮಾನಗಳಿಂದ ಓಡಾಟ ಅಧಿಕಗೊಳ್ಳುವುದು. ರಕ್ತ ಸಂಬಂಧಿ ಕಾಯಿಲೆಯನ್ನು ಹೊಂದಿದವರು ರಕ್ತ ಪರೀಕ್ಷೆ ಮಾಡಿಸುವುದು ಒಳ್ಳೆಯದು.

ಬೆರಗಿನ ಬೆಳಕು

ಗುರುರಾಜ ಕರಜಗಿ



ನೂತನ, ಪುರಾತನ ಪ್ರತಿಬಿಂಬ

ದಿವ್ಯ ಚರಿತಂಗಳ ಪ್ರತ್ಯುಕ್ತಿ ನರಚರಿತೆ |
ಕಾವ್ಯವಿಜ್ಞಾನಗಳ್ ನಿಗಮಾನುಸರಗಳ್ ||
ನವ್ಯಸಂಪದವಾರ್ಷಸಂಪದುದ್ಧೃತವಿಂತು |
ಸವ್ಯಪೇಕ್ಷಗಳುಭಯ- ಮಂಕುತಿಮ್ಮ || 861 ||

ಪದ-ಅರ್ಥ: ಪ್ರತ್ಯುಕ್ತಿ = ಪ್ರತಿಬಿಂಬ, ನಿಗಮಾನುಸರ್‌ಗಳ್ = ನಿಗಮ (ವೇದ) + ಅನುಸರಗಳ್ (ಅನುಸಾರಿಯಾಗಿರುವವು), ನವ್ಯಸಂಪದವಾರ್ಷಸಂಪದುದ್ಧೃತವಿಂತು = ನವ್ಯ + ಸಂಪದವು + ಆರ್ಷ(ಋಷಿಪರಂಪರೆಯ) + ಸಂಪತ್ + ಉದ್ಧೃತಂ(ಬೆಳವಣಿಗೆ) + ಇಂತು, ಸವ್ಯಪೇಕ್ಷಗಳುಭಯ = ಎರಡೂ ಪರಸ್ಪರ ಅಪೇಕ್ಷಿಗಳು.

ವಾಚ್ಯಾರ್ಥ: ಮನುಷ್ಯರ ಚರಿತ್ರೆ ಹಿಂದೆ ಆಗಿ ಹೋದ ಮಹಾನ್ ವ್ಯಕ್ತಿಗಳ ಚರಿತ್ರೆಯ ಪ್ರತಿಬಿಂಬ. ಕಾವ್ಯ ವಿಜ್ಞಾನಗಳು ಕೂಡ ವೇದಗಳನ್ನು ಅನುಸರಿಸಿ ಬಂದವುಗಳು. ಇಂದು ಹೊಸದೆಂದು ತೋರುವುದು ಹಿಂದಿನ ಆರ್ಷ ಪರಂಪರೆಯಿಂದ ಬಂದದ್ದು. ಹೀಗೆ, ಭೂತ, ಭವಿಷ್ಯಗಳು ಅನ್ಯೋನ್ಯ ಅಪೇಕ್ಷಿಗಳು.

ವಿವರಣೆ: ಇಂದಿನ ಸಾಧಕರಲ್ಲಿ ನಾವು ಕೆಲವರನ್ನು ತುಂಬ ಮೆಚ್ಚಿಕೊಳ್ಳುತ್ತೇವೆ. ಅವರನ್ನು ಮಾದರಿ ಎಂದು ಸ್ವೀಕರಿಸುತ್ತೇವೆ. ಯಾಕೆ? ಅವರ ರೂಪ ಲಕ್ಷಣಗಳಿಂದಲೇ? ಅವರ ನಡತೆಯಿಂದಲೇ? ಅವರ ನಾಯಕತ್ವ ಗುಣಗಳಿಂದಲೇ? ಬಹುಶಃ ಇವೆಲ್ಲವೂ ಮತ್ತು ಇನ್ನಷ್ಟು ಗುಣಗಳೂ ಇದ್ದಾವು. ರಾಮನ ಸತ್ಯ ಸಂಧತೆ, ಬುದ್ಧನ ಕರುಣೆ, ಮಹಾವೀರನ ಅಪರಿಗ್ರಹತ್ವ, ಭಗೀರಥನ ಪ್ರಯತ್ನಶೀಲತೆ ಇವೆಲ್ಲ ದಿವ್ಯಚರಿತ್ರೆಗಳ ಭಾಗಗಳು. ಅವರೆಲ್ಲ ನಮಗೆ ಪ್ರಾತಃ ಸ್ಮರಣೀಯರಾದದ್ದು ಆ ವಿಶೇಷ ಗುಣಗಳಿಂದ. ಕಳೆದ ಮತ್ತು ಈ ಶತಮಾನದಲ್ಲೂ ಅದೇ ಗುಣಗಳನ್ನು ಪ್ರದರ್ಶಿಸಿದವರು ಉಂಟಲ್ಲ? ಮಹಾತ್ಮಾ ಗಾಂಧಿಯವರ ಸತ್ಯನಿಷ್ಠೆ, ಮದರ್ ಥೆರೆಸಾರ ಕರುಣೆ, ವಿನೋಬಾ ಭಾವೆರವರ ಅಪರಿಗ್ರಹತ್ವ, ವಿಶ್ವೇಶ್ವರಯ್ಯನವರ ಪ್ರಯತ್ನಶೀಲತೆ ನಮಗೆ ಮಾರ್ಗದರ್ಶಿಯಾಗಿಲ್ಲವೆ? ಅಂದು ಜ್ಞಾನದಾಸೋಹವನ್ನು ನೀಡಿ ಸಮಾಜ ಪರಿವರ್ತನೆಗೆ ಕಾರಣವಾದ ಬಸವಣ್ಣ ಇದ್ದರೆ ಇಂದು ನಮ್ಮ ಮುಂದೆ ತಮ್ಮ ಮೃದು ಮಾತುಗಳಿಂದ ಅಂಥದೇ ಕಾರ್ಯ ಮಾಡಿದ ಪೂಜ್ಯ ಸಿದ್ಧೇಶ್ವರ ಮಹಾಸ್ವಾಮಿಗಳಿರಲಿಲ್ಲವೆ? ಅದಕ್ಕೇ ಕಗ್ಗ ಹೇಳುತ್ತದೆ, ಇಂದಿನ ಮನುಷ್ಯ ಚರಿತ್ರೆ ಹಿಂದಿನ ದಿವ್ಯಚರಿತ್ರೆಗಳ ಪ್ರತಿಬಿಂಬ. ಕಾಲಕಾಲಕ್ಕೆ ಅಂಥ ವ್ಯಕ್ತಿಗಳು ಬರುತ್ತಲೇ ಇರುತ್ತಾರೆ, ಹಿಂದಿನ ಚರಿತ್ರೆಗಳ ಪುನರಾವರ್ತನೆಯಾಗುತ್ತಲೇ ಇರುತ್ತದೆ. ಅಂತೆಯೇ, ನಮ್ಮ ಹೊಸ ಕಾವ್ಯ, ವಿಜ್ಞಾನಗಳು, ಹಿಂದಿನ ವೇದಗಳ, ಜ್ಞಾನಮೂಲಗಳ ಛಾಯೆಗಳು. ಅಬ್ರಾಹಂ ಮ್ಯಾಸ್ಲೋ ಹೇಳಿದ ಅವಶ್ಯಕತೆಗಳ ಮೆಟ್ಟಿಲುಗಳಾದ ಭೌತಿಕ ಅಗತ್ಯತೆಗಳು, ರಕ್ಷಣೆ, ಪ್ರೀತಿ, ಗೌರವ ಮತ್ತು ಆತ್ಮತೃಪ್ತಿಗಳು, ಹಿಂದಿನ ತೈತ್ತರೀಯ ಉಪನಿಷತ್ತಿನ ಪಂಚಕೋಶಗಳಾದ ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶದ ನೆರಳುಗಳಂತೆ ತೋರುತ್ತವೆ. ಇಂದಿನ ಮಹಾಕಾವ್ಯಗಳಲ್ಲಿ ಹಿಂದಿನ ಕಾವ್ಯಗಳ ಮೌಲ್ಯಗಳ ರಸ ಒಸರುತ್ತದೆ. ನಮ್ಮ ಇಂದಿನ ವಿಜ್ಞಾನದಲ್ಲಿ ಪುರಾತನಕಾಲದ ವೈಜ್ಞಾನಿಕ ಚಿಂತನೆಗಳ ಸುಳಿವು ದೊರಕುತ್ತದೆ. ಅದನ್ನೇ ಕಗ್ಗ ಸುಂದರವಾಗಿ ಇಂದಿನ ನವೀನ ಸಂಪದಗಳು ಆರ್ಷೇಯ ಪರಂಪರೆಯಲ್ಲಿದ್ದ ಸಂಪತ್ತಿನ ಬೆಳವಣಿಗೆಗಳು ಎನ್ನುತ್ತದೆ. ಆದ್ದರಿಂದ ನೂತನಗಳು ಮತ್ತು ಪುರಾತನಗಳು ಒಂದನ್ನೊಂದು ಅಪೇಕ್ಷಿಸುವವು ಮತ್ತು ಅವಲಂಬಿತವಾದವು.

ಪದಬಂಧ 5287


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮರ್ಯಾದೆಯುಳ್ಳ ಆತ್ಮಗೌರವ (4)
3. ಕಿಡಿಯನ್ನು ಹಚ್ಚಿದ್ದಾನಲ್ಲಾ ಈ ತುಂಟ? (4)
5. ಈಕೆ ನೃತ್ಯ ಮಾಡುವವಳು (3)
6. ಅತಿಯಾದ ಬಯಕೆ (3)
8. ಕೈ ಕೊನೆಗಿಟ್ಟಾಗಿನ ಮಿಶ್ರಣ (3)
9. ಅಗಲುವಿಕೆಯನ್ನು ಹೀಗೆನ್ನಿ (3)
10. ಜಗಳಕ್ಕೊಂದು ಪರ್ಯಾಯ ಪದ (3)
12. ಕುಣಿಯುತ್ತಾ ಹಾಕಿರುವ ಜೀರುಗಂಟು (3)
14. ಬರ ಆವರಿಸಿದಾಗ ಮೃತದೇಹ ಕಾಣಿಸಿದೆಯಲ್ಲಾ (4)
15. ಶುರುವಿನಲ್ಲೇ ಪಡೆದುಕೊಂಡಿರುವ ಲಂಚ (4)

ಮೇಲಿಂದ ಕೆಳಕ್ಕೆ

1. ನಿರಂತರವಾದ್ದನ್ನು ಈ ರೀತಿಯೂ ಹೇಳಬಹುದು (4)
2. ನಯವಾಗಿ ಹೊಳೆಯುವ ಅಕ್ಷಿ (3)
3. ವಾತಾಯನ ಇಲ್ಲಿದೆ (3)
4. ಯುದ್ಧಕ್ಕೆ ಹೆದರುವವ ತಿರುಗಿದ್ದಾನಲ್ಲಾ? (4)
7. ಕೈಯಿಂದಲೇ ಪ್ರಾರಂಭಗೊಂಡಿರುವ ಉತ್ಸವ (3)
8. ಕಬ್ಬಿಣದ ಭಾರೀ ಪೆಟ್ಟಿಗೆ (3)
9. ಹಾಸ್ಯಗಾರ ಇಲ್ಲಿದ್ದಾನೆ (4)
11. ಕತ್ತು ಕೊನೆಗಿಟ್ಟು ರೂಪಿಸಿದ ಸಂಚು (4)
12. ವಠಾರದವರ ಹತ್ತಿರವಿರುವ ಕೊಡಲಿ (3)
13. ಮಣ್ಣು ಬೆರೆತ ನೀರು (3)



5286ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ರಜತೋತ್ಸವ
4.ಪಾತಕ 5.ನಡುಕ
7.ಮುದ 10.ತೋಪು
11.ವಲ್ಮೀಕ 12.ರೆತಾ
13.ಟಕಾ 15.ಕಮ್ಮತ
18.ಮದನ 19.ಮನರಂಜನೆ

ಮೇಲಿಂದ ಕೆಳಕ್ಕೆ:
1.ಸಂತೋಷ 2.ರಕಮು
3.ವನ 4.ಪಾರಿತೋಷಕ
6.ಕರತಾಡನ 8.ದವಸ
9.ಸಂಕಟ 14.ಕಾಮನೆ
16.ತಮ 17.ಆರಂಬ

ಸುಡೊಕು 5673

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5672 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು 235



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,722
ಇಂದಿನ ಅಂತ್ಯ	17,812
▲	90
ದಿನದ ಗರಿಷ್ಠ	17,825

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1700 (1720)
ಸೋಯಾ (ರಿಫೈನ್ಡ್)	₹1040 (1045)
ಸೂರ್ಯಕಾಂತಿ (ರಿಫೈನ್ಡ್)	₹1060 (1070)
ಪಾಮೋಲಿನ್	₹955 (970)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಕೆ.ಜಿ)	₹278-555
ದ್ವಿತಳಿ (ಕೆ.ಜಿ)	₹261-632

ಮಹೀಂದ್ರ ಮಾಜಿ ಅಧ್ಯಕ್ಷ ಕೇಶವ್ ಮಹೀಂದ್ರ ನಿಧನ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ಕೇಶವ್ ಮಹೀಂದ್ರ (99) ಅವರು ಬುಧವಾರ ನಿಧನರಾಗಿದ್ದಾರೆ.



ಕೇಶವ್ ಮಹೀಂದ್ರ

1923ರ ಅಕ್ಟೋಬರ್ 9ರಂದು ಶಿಮ್ಲಾದಲ್ಲಿ ಜನಿಸಿದ ಅವರು ಅಮೆರಿಕದ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. 1947ರಲ್ಲಿ ಮಹೀಂದ್ರ ಕಂಪನಿ ಸೇರಿದ ಅವರು, 1963ರಲ್ಲಿ ಅಧ್ಯಕ್ಷರಾದರು. 48 ವರ್ಷಗಳವರೆಗೆ ಕಂಪನಿಯನ್ನು ಮುನ್ನಡೆಸಿದರು. 2012ರಲ್ಲಿ ಸೋದರಳಿಯ ಆನಂದ್ ಮಹೀಂದ್ರ ಅವರಿಗೆ ಅಧ್ಯಕ್ಷ ಸ್ಥಾನವನ್ನು ಹಸ್ತಾಂತರಿಸಿದರು. ಆ ಬಳಿಕ ಕಂಪನಿಯ ನಿರ್ದೇಶಕರಾಗಿ 64 ವರ್ಷಗಳವರೆಗೆ ಇದ್ದರು.

ಖಾಸಗಿ ಮತ್ತು ಸಾರ್ವಜನಿಕ ವಲಯದಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ. ಭಾರತೀಯ ವಾಹನ ತಯಾರಕರ ಒಕ್ಕೂಟ ಮತ್ತು ಬಾಂಬೆ ಛೇಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ ಅಧ್ಯಕ್ಷರಾಗಿದ್ದರು. ಹುಡ್ಕೊದ ಸ್ಥಾಪಕ ಅಧ್ಯಕ್ಷರಾಗಿದ್ದರು. ಸೇಲ್, ಟಾಟಾ ಸ್ಟೀಲ್, ಟಾಟಾ ಕೆಮಿಕಲ್ಸ್, ಇಂಡಿಯನ್ ಹೋಟೆಲ್ಸ್, ಐಸಿಐಸಿಐ, ಎಚ್‌ಡಿಎಫ್‌ಸಿ ಆಡಳಿತ ಮಂಡಳಿಯಲ್ಲಿ ಕಾರ್ಯನಿರ್ವಹಿಸಿದ್ದರು.

ಆಟೊಮೊಬೈಲ್ ತಯಾರಿಕಾ ಕಂಪನಿಯನ್ನು ಐ.ಟಿ., ರಿಯಲ್ ಎಸ್ಟೇಟ್, ಹಣಕಾಸು ಸೇವೆಗಳು ಮತ್ತು ಆತಿಥ್ಯ ವಲಯದಂತಹ ಇತರ ವಹಿವಾಟುಗಳಿಗೆ ವಿಸ್ತರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಮಿಟ್ಸುಬಿಷಿ, ಇಂಟರ್‌ನ್ಯಾಷನಲ್ ಹಾರ್ವೆಸ್ಟರ್ ಸೇರಿದಂತೆ ಹಲವು ಜಾಗತಿಕ ಕಂಪನಿಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.

ಹಣದುಬ್ಬರ ಶೇ 5.66ಕ್ಕೆ ಇಳಿಕೆ

ಆಹಾರ ವಸ್ತುಗಳ ದರ ಇಳಿಕೆ: 15 ತಿಂಗಳ ಕನಿಷ್ಠ ಮಟ್ಟಕ್ಕೆ ಚಿಲ್ಲರೆ ಹಣದುಬ್ಬರ


ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 5.66ಕ್ಕೆ ಇಳಿಕೆ ಆಗಿದೆ. 15 ತಿಂಗಳ ಕನಿಷ್ಠ ಮಟ್ಟ ಇದಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಶೇ 6ರ ಮಿತಿಗಿಂತಲೂ ಕೆಳಕ್ಕೆ ಇಳಿಕೆ ಆಗಿದೆ. ಜನವರಿ ಮತ್ತು ಫೆಬ್ರುವರಿ ತಿಂಗಳಿನಲ್ಲಿ ಹಣದುಬ್ಬರವು ಶೇ 6 ಮಟ್ಟವನ್ನು ಮೀರಿತ್ತು.

ಆಹಾರ ವಸ್ತುಗಳ ದರ ಇಳಿಕೆ ಆಗಿರುವುದರಿಂದ ಚಿಲ್ಲರೆ ಹಣದುಬ್ಬರ ಇಳಿಕೆ ಕಾಣಲು ಕಾರಣ ಎಂದು ಸರ್ಕಾರ ಹೇಳಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು 2023ರ ಫೆಬ್ರುವರಿಯಲ್ಲಿ ಶೇ 6.44ರಷ್ಟು ಇತ್ತು. 2022ರ ಮಾರ್ಚ್‌ನಲ್ಲಿ ಶೇ 6.95ರಷ್ಟು ಇತ್ತು.

ಆಹಾರ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ 5.95ರಷ್ಟು ಇದ್ದಿದ್ದು ಮಾರ್ಚ್‌ನಲ್ಲಿ ಶೇ 4.79ಕ್ಕೆ ಇಳಿಕೆ ಕಂಡಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 7.68ರಷ್ಟು ಇತ್ತು.



ಏಕದಳಧಾನ್ಯ, ಹಾಲು ಮತ್ತು ಹಣ್ಣು ದರದಲ್ಲಿ ಭಾರಿ ಹೆಚ್ಚಳ ಆಗಿದ್ದರಿಂದ 2022ರ ಡಿಸೆಂಬರ್‌ನಲ್ಲಿ ಶೇ 5.7ರಷ್ಟು ಇದ್ದ ಚಿಲ್ಲರೆ ಹಣದುಬ್ಬರವು 2023ರ ಫೆಬ್ರುವರಿಯಲ್ಲಿ ಶೇ 6.4ಕ್ಕೆ ಏರಿಕೆ ಕಂಡಿತು.

‘ಹಣದುಬ್ಬರ ಇಳಿಕೆ ಕಂಡಿರುವುದು ಭಾರತದ ಆರ್ಥಿಕತೆಗೆ ಸಕಾರಾತ್ಮಕ ಬೆಳವಣಿಗೆ ಆಗಿದೆ. ಹಣದುಬ್ಬರದ ಒತ್ತಡ ಕಡಿಮೆ ಆಗುತ್ತಿರುವುದರಿಂದ ಗ್ರಾಹಕರು ಮತ್ತು ಉದ್ಯಮಗಳಿಗೆ ಪ್ರಯೋಜನ ಆಗಲಿದೆ’ ಎಂದು ಕಮಾಡಿಟಿ ಪಾರ್ಟಿಸಿಪೆಂಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ನರೇಂದರ್ ವಾಧ್ವಾ ಹೇಳಿದ್ದಾರೆ.

2023–24ನೇ ಹಣಕಾಸು ವರ್ಷಕ್ಕೆ ಚಿಲ್ಲರೆ ಹಣದುಬ್ಬರವು ಶೇ 5.2ರಷ್ಟು ಆಗುವ ಅಂದಾಜನ್ನು ಆರ್‌ಬಿಐ ಮಾಡಿದೆ.

ಕೈಗಾರಿಕಾ ಉತ್ಪಾದನೆ ಹೆಚ್ಚಳ

ದೇಶದ ಕೈಗಾರಿಕಾ ಉತ್ಪಾದನೆಯು ಫೆಬ್ರುವರಿಯಲ್ಲಿ ಶೇ 5.6ಕ್ಕೆ ಏರಿಕೆ ಕಂಡಿದೆ. ಜನವರಿಯಲ್ಲಿ ಇದ್ದ ಶೇ 5.5ಕ್ಕೆ ಹೋಲಿಸಿದರೆ ಅಲ್ಪ ಏರಿಕೆ ಕಂಡಿದೆ.

ವಿದ್ಯುತ್, ಗಣಿ ಮತ್ತು ತಯಾರಿಕಾ ವಲಯಗಳ ಉತ್ತಮ ಬೆಳವಣಿಗೆಯಿಂದಾಗಿ ಕೈಗಾರಿಕಾ ಉತ್ಪಾದನೆ ಹೆಚ್ಚಾಗಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದ (ಐಐಪಿ) ಆಧಾರದ ಮೇಲೆ ಲೆಕ್ಕಾ ಹಾಕುವ ವಲಯದ ಬೆಳವಣಿಗೆಯು 2022ರ ಫೆಬ್ರುವರಿಯಲ್ಲಿ ಶೇ 1.2ರಷ್ಟು ಇತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ತಯಾರಿಕಾ ವಲಯದ ಬೆಳವಣಿಗೆಯು 2023ರ ಫೆಬ್ರುವರಿಯಲ್ಲಿ ಶೇ 5.3ರಷ್ಟು ಆಗಿದೆ. ಕಳೆದ ವರ್ಷದ ಫೆಬ್ರುವರಿಯಲ್ಲಿ ಶೇ 0.2ರಷ್ಟು ಇತ್ತು. ಗಣಿ ವಲಯ ಶೇ 4.6, ವಿದ್ಯುತ್ ವಲಯ ಶೇ 8.2ರಷ್ಟು ಬೆಳವಣಿಗೆ ಕಂಡಿದೆ.

2022–23ರ ಏಪ್ರಿಲ್–ಫೆಬ್ರುವರಿ ಅವಧಿಯಲ್ಲಿ ಐಐಪಿ ಶೇ 5.5ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಅವಧಿಯಲ್ಲಿ ಶೇ 12.5ರಷ್ಟು ಬೆಳವಣಿಗೆ ಕಂಡಿತ್ತು.



ಮುಂಬೈ ಧಾರಣೆ

ಶೇಂಗಾ

12-4-2023

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1710 (1730)
ಒಂದು ವಾರದ ಡೆಲಿವರಿ	1705 (1725)
ಸೋಯಾ ಕಚ್ಚಾ	937 (945)
ಪಾಮ್ ವಾರದ ಡೆಲಿವರಿ	953 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	920 (930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,600 (60,100)
ಬೆಳ್ಳಿ ಕೆ.ಜಿ
75,200 (74,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೊಗರಿ ಬೇಳೆ ದಾಸ್ತಾನು: ಮಾಹಿತಿ ನೀಡದವರ ವಿರುದ್ಧ ಕ್ರಮಕ್ಕೆ ಸೂಚನೆ

ನವದೆಹಲಿ (ಪಿಟಿಐ): ತೊಗರಿ ಬೇಳೆ ದಾಸ್ತನು ಬಗ್ಗೆ ಸಂಪೂರ್ಣ ಮಾಹಿತಿ ನೀಡದೇ ಇರುವ ವ್ಯಾಪಾರಿಗಳು, ಮಿಲ್‌ಗಳು, ಆಮದುದಾರರು ಮತ್ತು ದಾಸ್ತಾನುದಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ.

ತೊಗರಿ, ಉದ್ದಿನ ಬೇಳೆ ಬೆಳೆಯುವ ಮತ್ತು ಬಳಕೆ ಮಾಡುವ ಪ್ರಮುಖ ರಾಜ್ಯಗಳಲ್ಲಿ ಇರುವ ದಾಸ್ತಾನಿನ ಕುರಿತು ಮಾಹಿತಿ ಪಡೆಯಲು ಗ್ರಾಹಕ ವ್ಯವಹಾರಗಳ ಸಚಿವಾಲಯವು ಸಭೆ ನಡೆಸಿತು. ಕೆಲವು ರಾಜ್ಯಗಳಲ್ಲಿ ತೊಗರಿ ಬೇಳೆ ದಾಸ್ತಾನು ಪ್ರಮಾಣವು ತಯಾರಿಕೆ ಮತ್ತು ಬಳಕೆಗೆ ಹೋಲಿಸಿದರೆ ಕಡಿಮೆ ಇರುವಂತೆ ಕಂಡುಬಂದಿದೆ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.



ವಿವಿಧ ಸಂಸ್ಥೆಗಳು ಹೊಂದಿರುವ ದಾಸ್ತಾನಿನ ಪರಿಶೀಲನೆ ನಡೆಸುವಂತೆ ಮತ್ತು ದಾಸ್ತಾನಿನ ಮಾಹಿತಿ ಮುಚ್ಚಿಡುವವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ರಾಜ್ಯಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಚಿವಾಲಯು ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ, ಆಂಧ್ರಪ್ರದೇಶ, ದೆಹಲಿ, ಗುಜರಾತ್, ಮಧ್ಯ ಪ್ರದೇಶ, ರಾಜಸ್ಥಾನ, ತಮಿಳುನಾಡು ಮತ್ತು ಉತ್ತರ ಪ್ರದೇಶದ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ತೊಗರಿ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ವಿವಿಧ ಮಾರುಕಟ್ಟೆ ವ್ಯಾಪಾರಿಗಳು, ಮಿಲ್‌ಗಳು ಮತ್ತು ದಾಸ್ತಾನು ನಿರ್ವಹಣೆ ಮಾಡುವವರಿಂದ ಖುದ್ದಾಗಿ ಮಾಹಿತಿಗಳನ್ನು ಪಡೆಯಲು ಗ್ರಾಹಕ ವ್ಯವಹಾರಗಳ ಇಲಾಖೆಯು 12 ಹಿರಿಯ ಅಧಿಕಾರಿಗಳನ್ನು ನಿಯೋಜಿಸಿದೆ.

ಕೃಷಿ ಸಚಿವಾಲಯದ ಎರಡನೇ ಅಂದಾಜಿನ ಪ್ರಕಾರ, 2022–23ನೇ ಬೆಳೆ ವರ್ಷದಲ್ಲಿ (ಜುಲೈ–ಜೂನ್) ತೊಗರಿ ಉತ್ಪಾದನೆ 3.66 ಕೋಟಿ ಆಗುವ ಅಂದಾಜು ಮಾಡಲಾಗಿದೆ. ಹಿಂದಿನ ಅವಧಿಯಲ್ಲಿ 4.22 ಕೋಟಿ ಟನ್ ಆಗಿತ್ತು.

ಸುದ್ದಿ 2 ನಿಮಿಷ

ಟಿಸಿಎಸ್ ಲಾಭ ಶೇ 14ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ದೇಶದ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟಾಟಾ ಕನ್ಸಲ್ಟನ್ಸಿ ಸರ್ವಿಸಸ್ (ಟಿಸಿಎಸ್) 2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹11,392 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹9,959 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 14.8ರಷ್ಟು ಹೆಚ್ಚಾಗಿದೆ.

ಕಂಪನಿಯ ವರಮಾನ ₹50,591 ಕೋಟಿಯಿಂದ ₹59,162 ಕೋಟಿಗೆ ಶೇ 16.9 ರಷ್ಟು ಹೆಚ್ಚಾಗಿದೆ. ಕಾರ್ಯಾಚರಣಾ ಗಳಿಕೆ ಶೇ 24.1 ರಿಂದ ಶೇ 24.5ಕ್ಕೆ ಅಲ್ಪ ಏರಿಕೆ ಕಂಡಿದೆ ಎಂದು ಕಂಪನಿ ತಿಳಿಸಿದೆ.



ಕಂಪನಿ ತೊರೆಯುತ್ತಿರುವವರ ಪ್ರಮಾಣ ಶೇ 20.1ರಷ್ಟು ಇದ್ದು, ಹಿಂದಿನ ತ್ರೈಮಾಸಿಕಕ್ಕಿಂತ ಉತ್ತಮವಾಗಿದೆ ಎಂದು ಹೇಳಿದೆ.

ಹಣಕಾಸು ವರ್ಷದಲ್ಲಿ ಕಂಪನಿಯ ವರಮಾನ ಶೇ 17.6ರಷ್ಟು ಹೆಚ್ಚಾಗಿ 2.25 ಲಕ್ಷ ಕೋಟಿಗೆ ತಲುಪಿದೆ. ನಿವ್ವಳ ವರಮಾನ ಶೇ 10ರಷ್ಟು ಹೆಚ್ಚಾಗಿ ₹42,147 ಕೋಟಿಗೆ ಏರಿಕೆ ಆಗಿದೆ.

2022–23ನೇ ಹಣಕಾಸು ವರ್ಷದ ಬೆಳವಣಿಗೆಯು ಅತ್ಯಂತ ತೃಪ್ತಿಕರವಾಗಿದೆ ಎಂದು ನಿರ್ಗಮಿತ ಸಿಇಒ ರಾಜೇಶ್ ಗೋಪಿನಾಥನ್ ಹೇಳಿದ್ದಾರೆ.

ನಿಯೋಜಿತ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಕೆ. ಕೃತಿವಾಸನ್ ಅವರು ಜೂನ್ 1ರಂದು ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದ ಜಿಡಿಪಿ ಬೆಳವಣಿಗೆ ಅಂದಾಜು ತಗ್ಗಿಸಿದ ಐಎಂಎಫ್

ವಾಷಿಂಗ್ಟನ್ (ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) 2022–23ನೇ ಹಣಕಾಸು ವರ್ಷಕ್ಕೆ ಭಾರತದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇ 5.9ಕ್ಕೆ ತಗ್ಗಿಸಿದೆ. ಜಿಡಿಪಿಯು ಶೇ 6.1ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಹಿಂದೆ ಹೇಳಿತ್ತು.

2023–24ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 5.9ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅದು ಹೇಳಿದೆ. ಈ ಮೊದಲು ಶೇ 6.8ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿತ್ತು. ಬೆಳವಣಿಗೆ ಅಂದಾಜನ್ನು ತಗ್ಗಿಸಿದ್ದರೂ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ದೇಶವಾಗಿಯೇ ಭಾರತ ಇರಲಿದೆ ಎಂದು ವಿಶ್ವ ಆರ್ಥಿಕ ಮುನ್ನೋಟದಲ್ಲಿ ತಿಳಿಸಿದೆ.

ಭಾರತದ ಆರ್ಥಿಕ ಬೆಳವಣಿಗೆಯ ಬಗ್ಗೆ ಐಎಂಎಫ್ ಮಾಡಿರುವ ಅಂದಾಜು ಆರ್‌ಬಿಐ ಮಾಡಿರುವುದಕ್ಕಿಂತಲೂ ಕಡಿಮೆ ಇದೆ. 2022–23ರಲ್ಲಿ ಜಿಡಿಪಿ ಶೇ 7ರಷ್ಟು ಮತ್ತು 2023–24ರಲ್ಲಿ ಶೇ 6.4ರಷ್ಟು ಬೆಳವಣಿಗೆ ಕಾಣಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.

ಕೇಂದ್ರ ಸರ್ಕಾರವು 2022–23ನೇ ಹಣಕಾಸು ವರ್ಷಕ್ಕೆ ಜಿಡಿಪಿ ಬೆಳವಣಿಗೆ ದರವನ್ನು ಇನ್ನಷ್ಟೇ ಬಿಡುಗಡೆ ಮಾಡಬೇಕಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹಳೆಚಾಲಿ	36099-38899	ರಾಶಿ	31869-45899
ಕೋಕ	12500-25000	ಹೊಸಚಾಲಿ	34199-36429	ಸರಕು	51129-80896
ಹೊಸತು	27500-38000	**ಕಾರ್ಕಳ**		**ಶಿರಸಿ**	
ಹಳತು	48000-53000	ಹೊಸತು	30000-38000	ಬೆಟ್ಟೆ	32661-40999
ಕುಮಟಾ		ಹಳತು	40000-53000	ಬಿಳಿಗೋಟು	23699-32400
ಚಿಪ್ಪು	28509-31589	**ಶಿವಮೊಗ್ಗ**		ಚಾಲಿ	33009-36791
ಕೋಕ	19000-30009	ಬೆಟ್ಟೆ	43500-52282	ಕೆಂಪುಗೋಟು	26328-34680
ಫ್ಯಾಕ್ಟರಿ	12019-21400	ಗೊರಬಲು	28000-34159	ರಾಶಿ	39019-44799

ಕರ್ನಾಟಕ ಬ್ಯಾಂಕ್ ಮೂಲಕ ಕಸ್ಟಮ್ಸ್ ತೆರಿಗೆ ಪಾವತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾಂಕ್ ಮೂಲಕ ಭಾರತೀಯ ಕಸ್ಟಮ್ಸ್ ತೆರಿಗೆ ಪಾವತಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ.

ಸಿಬಿಡಿಟಿ ಹಾಗೂ ಸಿಬಿಐಸಿ ಪರವಾಗಿ ಪ್ರತ್ಯಕ್ಷ ತೆರಿಗೆ ಹಾಗೂ ಪರೋಕ್ಷ ತೆರಿಗೆ ಪಾವತಿಗೆ ಸಿಜಿಎ (ಕಂಟ್ರೋಲರ್ ಜನರಲ್ ಆಫ್ ಅಕೌಂಟ್ಸ್) ಹಾಗೂ ಕೇಂದ್ರ ಹಣಕಾಸು ಸಚಿವಾಲಯ ಶಿಫಾರಸು ಮಾಡಿದೆ ಎಂದು ಕರ್ನಾಟಕ ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಐಸಿಇಗೇಟ್ ಪೋರ್ಟಲ್‌ನಲ್ಲಿ ಪರೋಕ್ಷ ತೆರಿಗೆ ಹಾಗೂ ಕಸ್ಟಮ್ಸ್ ನಲ್ಲಿ (ಸಿಬಿಐಸಿ) ವಾಣಿಜ್ಯ, ಸರಕು ಸಾಗಣೆ ಹಾಗೂ ಇತರ ವ್ಯವಹಾರಸ್ಥರಿಗೆ ಆನ್‌ಲೈನ್ ಮೂಲಕ ಪಾವತಿಗೆ ಅವಕಾಶ ಇದೆ. ಸಿಬಿಐಸಿ ಈಗ ಎಲೆಕ್ಟ್ರಾನಿಕ್ ಕ್ಯಾಶ್ ಲೆಡ್ಜರ್ (ಇಸಿಎಲ್) ಎಂಬ ಹೊಸ ವಿಧಾನವನ್ನು ಪರಿಚಯಿಸಿದ್ದು, ತೆರಿಗೆ ಹಾಗೂ ತೆರಿಗೆಯಲ್ಲದ ರಸೀದಿಗಳನ್ನು ಸಿಬಿಐಸಿ ಪರವಾಗಿ ಬಹು ಆಯ್ಕೆಯಲ್ಲಿ ಮಾಡಬಹುದು. ಕರ್ನಾಟಕ ಬ್ಯಾಂಕ್ ಕೂಡಾ ಈ ಅವಕಾಶವನ್ನು ಗ್ರಾಹಕರಿಗೆ ನೀಡಿದೆ.

‘ಎಪ್ರಿಲ್ 1ರಿಂದ ಈ ಸೌಲಭ್ಯ ದೊರಕುತ್ತಿದ್ದು ಕರ್ನಾಟಕ ಬ್ಯಾಂಕ್ ಗ್ರಾಹಕರಿಗೆ ಈ ನೂತನ ಸೌಲಭ್ಯ ಒದಗಿಸಲು ಹಣಕಾಸು ಇಲಾಖೆಯ ಪ್ರಿನ್ಸಿಪಲ್ ಚೀಫ್ ಕಂಟ್ರೋಲರ್ ಆಫ್ ಅಕೌಂಟ್ಸ್ ಹಾಗೂ ಸಿಬಿಐಸಿ ಅವರಿಂದ ಅನುಮತಿ ಪಡೆದ ದೇಶದ ಕೆಲವೇ ಬ್ಯಾಂಕ್‌ಗಳ ಪೈಕಿ ಒಂದು. ಬ್ಯಾಂಕಿನ ಕೆಬಿಎಲ್ ನೆಕ್ಸ್ಟ್ ಡಿಜಿಟಲ್ ಟ್ರಾನ್ಸ್‌ಫಾರ್ಮೇಶನ್ ಪ್ರಾಜೆಕ್ಟ್ ಮೂಲಕ ಗ್ರಾಹಕರಿಗೆ ನೀಡಿದ ಇನ್ನೊಂದು ಡಿಜಿಟಲ್ ಉಪಕ್ರಮ ಇದಾಗಿದೆ’ ಎಂದು ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಓ ಮಹಾಬಲೇಶ್ವರ ಎಂ.ಎಸ್. ಅವರು ಹೇಳಿದ್ದಾರೆ.

ಚಿನ್ನದ ದರ ₹330 ಏರಿಕೆ

ನವದೆಹಲಿ (ಪಿಟಿಐ): ಚಿಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ, ಬೆಳ್ಳಿ ದರ ಹೆಚ್ಚಾಗಿದೆ. ಚಿನ್ನದ ದರ 10 ಗ್ರಾಂಗೆ ₹330ರಷ್ಟು ಹೆಚ್ಚಾಗಿ ₹61,080ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹840ರಷ್ಟು ಏರಿಕೆ ಕಂಡು ₹75,780ಕ್ಕೆ ತಲುಪಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 2,011 ಡಾಲರ್ ಮತ್ತು ಬೆಳ್ಳಿ ದರ ಔನ್ಸ್‌ಗೆ 25.17 ಡಾಲರ್‌ನಂತೆ ಮಾರಾಟ ಆಗಿದೆ.

ಷೇರುಪೇಟೆ: 8ನೇ ದಿನವೂ ಗಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ವಹಿವಾಟು ಸತತ 8ನೇ ದಿನವೂ ಸಕಾರಾತ್ಮಕವಾಗಿ ಅಂತ್ಯಗೊಂಡಿತು.

ಐ.ಟಿ., ಆರೋಗ್ಯಸೇವೆ ಮತ್ತು ವಾಹನ ವಲಯದ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದರ ಜೊತೆಗೆ ವಿದೇಶಿ ಬಂಡವಾಳ ಒಳಹರಿವು ಬುಧವಾರ ವಹಿವಾಟಿನಲ್ಲಿ ಸೂಚ್ಯಂಕಗಳ ಏರಿಕೆಗೆ ನೆರವಾದವು.

ರೂಪಾಯಿ ಮೌಲ್ಯ ಹೆಚ್ಚಳ ಮತ್ತು ಯುರೋಪ್ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟು ಸಹ ಷೇರುಪೇಟೆಗೆ ಬೆಂಬಲ ನೀಡಿವೆ ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 235 ಅಂಶ ಹೆಚ್ಚಾಗಿ 60,392 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 90 ಅಂಶ ಹೆಚ್ಚಾಗಿ 17,812 ಅಂಶಗಳಿಗೆ ತಲುಪಿತು. ವಲಯವಾರು ಆರೋಗ್ಯಸೇವೆ ಶೇ 2.22, ಐ.ಟಿ. ಶೇ 1.04ರಷ್ಟು ಏರಿಕೆ ಕಂಡಿತು.



ಎಫ್‌ಎಂಸಿಜಿ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮತ್ತು ರಿಯಾಲ್ಟಿ ಷೇರುಗಳು ಲಾಭ ಗಳಿಕೆ ವಹಿವಾಟಿಗೆ ಒಳಗಾಗಿ ಇಳಿಕೆ ಕಂಡವು. ದೀವೀಸ್ ಮತ್ತು ಲೋರಸ್ ಕಂಪನಿಗಳ ರಫ್ತು ವಹಿವಾಟು ಉತ್ತಮವಾಗಿರುವುದರಿಂದ ಔಷದ ವಲಯದ ಷೇರುಗಳು ಗಳಿಕೆ ಕಂಡವು. ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಗಳು ಉತ್ತಮ ಗಳಿಕೆ ಕಂಡುಕೊಳ್ಳುವ ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಈ ತಿಂಗಳಿನಲ್ಲಿ ₹2,800 ಕೋಟಿ ಹೂಡಿಕೆ ಮಾಡಿರುವುದು ದೇಶಿ ಷೇರುಪೇಟೆಗಳ ಗಳಿಕೆಗೆ ನೆರವಾಯಿತು ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ದಾರ್ಥ್ ಖೇಮ್ಕಾ ಹೇಳಿದ್ದಾರೆ.

ಬಿಬಿಸಿ ಸಂದರ್ಶನದಲ್ಲಿ ಇಲಾನ್ ಮಸ್ಕ್ ಮಾತು

ಟ್ವಿಟರ್ ಮಾಲೀಕತ್ವ ಯಾತನೆದಾಯಕ

ಲಂಡನ್ (ಎಪಿ): ಟ್ವಿಟರ್ ಸಂಸ್ಥೆಯನ್ನು ಮುನ್ನಡೆಸುವುದು ಸ್ವಲ್ಪಮಟ್ಟಿಗೆ ಯಾತನೆದಾಯಕ ಎಂದು ಟ್ವಿಟರ್ ಸಿಇಒ, ಉದ್ಯಮಿ ಇಲಾನ್ ಮಸ್ಕ್ ಅವರು ಬಿಬಿಸಿಗೆ ಹೇಳಿದ್ದಾರೆ.

ಬಿಬಿಸಿಗೆ ಮಂಗಳವಾರ ಸಂದರ್ಶನ ನೀಡಿರುವ ಅವರು ಸಾಮಾಜಿಕ ಜಾಲತಾಣ ವೇದಿಕೆಯ ಮಾಲೀಕತ್ವ, ಉದ್ಯೋಗ ಕಡಿತ, ಸುಳ್ಳು ಮಾಹಿತಿ ಮತ್ತು ಅವರ ಕಾರ್ಯಶೈಲಿ ಕುರಿತು ಮಾತನಾಡಿದ್ದಾರೆ.

ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದ ಕಚೇರಿಯಲ್ಲಿ ಅವರು ಈ ಸಂದರ್ಶನ ನೀಡಿದ್ದಾರೆ. ಟ್ವಿಟರ್ ನಿರ್ವಹಣೆ ಬೇಸರದ ಕೆಲಸವಲ್ಲ ಆದರೆ ಇದು ರೋಲರ್‌ಕೋಸ್ಟರ್ (ಒಂದು ರೀತಿಯ ಸಾಹಸಿ ಸವಾರಿ) ಪ್ರಯಾಣ ಎಂದು ಹೇಳಿದ್ದಾರೆ.



ಎಲಾನ್ ಮಸ್ಕ್

₹3.6 ಲಕ್ಷ ಕೋಟಿ ನೀಡಿ ಟ್ವಿಟರ್‌ಅನ್ನು ಮಸ್ಕ್ ಅವರು ಕೊಂಡುಕೊಂಡ ಬಳಿಕ ಭಾರಿ ಸಂಖ್ಯೆಯಲ್ಲಿ ಉದ್ಯೋಗ ಕಡಿತ ಮಾಡಲಾಯಿತು.

ಈ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಸುಮಾರು 1,500 ಉದ್ಯೋಗಗಳನ್ನು ಕಡಿತಗೊಳಿಸಲಾಯಿತು. ಆದರೆ ಈ ಕ್ರಮ ಕೈಗೊಳ್ಳಲೇಬೇಕಿತ್ತು. ವೆಚ್ಚ ಕಡಿಮೆ ಮಾಡದಿದ್ದರೆ ಸಂಸ್ಥೆಯು ದಿವಾಳಿಯಾಗುತ್ತಿತ್ತು. ಸಂಸ್ಥೆ ಸಂಪೂರ್ಣವಾಗಿ ದಿವಾಳಿಯಾಗಿದ್ದರೆ ಯಾರಿಗೂ ಉದ್ಯೋಗ ನೀಡಲಾಗುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ.

ಸಂಸ್ಥೆಯನ್ನು ಕೊಂಡುಕೊಂಡು ಪರಿತಪಿಸಿದ್ದು ಇದೆಯೇ ಎಂದು ಪತ್ರಕರ್ತ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಮಾಡಲೇಬೇಕಾದ್ದನ್ನು ಮಾಡಬೇಕು’ ಎಂದಿದ್ದಾರೆ.

ಟ್ವಿಟರ್‌ಅನ್ನು ನಾನು ಸ್ವಾಧೀನಪಡಿಸಿಕೊಂಡ ಬಳಿಕ ಸಂಸ್ಥೆಯಿಂದ ದೂರಾಗಿದ್ದ ಜಾಹೀರಾತುದಾರರು ಈಗ ಪುನಃ ಟ್ವಿಟರ್‌ನತ್ತ ಬಂದಿದ್ದಾರೆ ಎಂದ ಅವರು ಈ ಕುರಿತು ಹೆಚ್ಚಿನ ಮಾಹಿತಿ ನೀಡಲಿಲ್ಲ. ಜೊತೆಗೆ, ಕೆಲವೊಮ್ಮೆ ತಾವು ಕಚೇರಿಯಲ್ಲೇ ಮಲಗುವುದಾಗಿಯೂ ತಿಳಿಸಿದ್ದಾರೆ.

‘ಸಿಖ್ ವಿರೋಧಿ ಹಿಂಸಾಚಾರ ನರಮೇಧವೆಂದು ಪರಿಗಣಿಸಿ’

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ 1984ರ ಸಿಖ್ ವಿರೋಧಿ ಹಿಂಸಾಚಾರವನ್ನು ಖಂಡಿಸಬೇಕು ಹಾಗೂ ಆ ದುಷ್ಕೃತ್ಯವನ್ನು ನರಮೇಧ ಎಂಬುದಾಗಿ ಪರಿಗಣಿಸಬೇಕು ಎಂದು ಕ್ಯಾಲಿಫೋರ್ನಿಯಾ ರಾಜ್ಯ ಅಸೆಂಬ್ಲಿಯು ಅಮೆರಿಕ ಸಂಸತ್ ಅನ್ನು ಒತ್ತಾಯಿಸುವ ನಿರ್ಣಯ ಅಂಗೀಕರಿಸಿದೆ.

ಶಾಸನಸಭೆಯ ಮೊದಲ ಚುನಾಯಿತ ಸಿಖ್ ಸದಸ್ಯೆ ಜಸ್ಮೀತ್ ಕೌರ್ ಬೈನ್ಸ್ ಅವರು ಮಾರ್ಚ್ 22 ರಂದು ಈ ನಿರ್ಣಯ ಮಂಡಿಸಿದರು ಮತ್ತು ಸೋಮವಾರ ಇದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಗಲಭೆಯ ದೈಹಿಕ ಮತ್ತು ಮಾನಸಿಕ ಆಘಾತದಿಂದ ಅಮೆರಿಕದಲ್ಲಿರುವ ಸಿಖ್ ಸಮುದಾಯ ಚೇತರಿಸಿಕೊಂಡಿಲ್ಲ. ಸಿಖ್ ವಿರೋಧಿ ಹಿಂಸಾಚಾರವನ್ನು ನರಮೇಧ ಎಂಬುದಾಗಿ ಪರಿಗಣಿಸಬೇಕು ಎಂದು ನಿರ್ಣಯದಲ್ಲಿ ಒತ್ತಾಯಿಸಲಾಗಿದೆ.

ನರಮೇಧ ನಡೆದ ಸಂದರ್ಭದಲ್ಲಿ ವಿಧವೆಯರಾದ ಹಲವು ಮಹಿಳೆಯರು ಈಗಲೂ ನವದೆಹಲಿಯ ಕಾಲೊನಿಯೊಂದರಲ್ಲಿ ವಾಸ ಮಾಡುತ್ತಿದ್ದಾರೆ. ಅವರ ಮೇಲೆ ಹಲ್ಲೆ, ಅತ್ಯಾಚಾರ ನಡೆದಿತ್ತು ಮತ್ತು ಅವರಿಗೆ ಚಿತ್ರಹಿಂಸೆ ನೀಡಲಾಗಿತ್ತು. ಈ ಮಹಿಳೆಯರು ಅವರ ಕುಟುಂಬಗಳ ವಿರುದ್ಧ ನಡೆದ ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದರು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಅವರು ಈಗಲೂ ಒತ್ತಾಯಿಸುತ್ತಿದ್ದಾರೆ ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಸಾಲದ ಹೊರೆ: ನಿರ್ಮಲಾ, ಗೀತಾ ಗೋಪಿನಾಥನ್ ಚರ್ಚೆ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಪ್ರವಾಸದಲ್ಲಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಉಪ ವ್ಯವಸ್ಥಾಪಕ ನಿರ್ದೇಶಕಿ ಗೀತಾ ಗೋಪಿನಾಥ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಸಾಲದ ಹೊರೆ ಸೇರಿದಂತೆ ಆರ್ಥಿಕತೆಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಅವರು ಚರ್ಚಿಸಿದರು ಎಂದು ಹಣಕಾಸು ಸಚಿವಾಲಯ ಟ್ವೀಟ್ ಮಾಡಿದೆ.

‘ಚೀನಾದಲ್ಲಿ ಎಚ್3ಎನ್8 ಹಕ್ಕಿಜ್ವರ: ಮೊದಲ ಸಾವು’

ಬೀಜಿಂಗ್: ‘ಎಚ್3ಎನ್8 ಅಪರೂಪದ ಹಕ್ಕಿಜ್ವರದಿಂದಾಗಿ ಚೀನಾದಲ್ಲಿ ಮಹಿಳೆಯೊಬ್ಬರು ಸಾವಿಗೀಡಾದ ಮೊದಲ ಪ್ರಕರಣ ವರದಿಯಾಗಿದೆ’ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ತಿಳಿಸಿದೆ. ‘ಸಾವಿಗೀಡಾದ ಮಹಿಳೆ ಗುವಾಂಗ್‌ಡಾಂಗ್‌ನ ದಕ್ಷಿಣ-ಪ್ರಾಂತ್ಯದ ನಿವಾಸಿಯಾಗಿದ್ದರು. ಏವಿಯನ್ ಇನ್‌ಫ್ಲುಯೆಂಜಾದ ಉಪತಳಿ ಎಚ್3ಎನ್8 ಹಕ್ಕಿಜ್ವರ ಸೋಂಕು ಕಾಣಿಸಿಕೊಂಡ ಮೂರನೇ ವ್ಯಕ್ತಿ ಇವರಾಗಿದ್ದರು. ಮಹಿಳೆಯು ಕೋಳಿಸಾಕಣೆಯ ಕೇಂದ್ರದ ಸಂಪರ್ಕಕ್ಕೆ ಬಂದಿರುವ ಸಾಧ್ಯತೆ ಇದೆ’ಎಂದೂ ಹೇಳಿದೆ.

ಉಗಾಂಡ: ಎನ್‌ಎಫ್‌ಎಸ್‌ಯು ಕ್ಯಾಂಪಸ್ ಉದ್ಘಾಟನೆ

ಕಂಪಾಲ (ಪಿಟಿಐ): ಭಾರತದ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯದ (ಎನ್‌ಎಫ್‌ಎಸ್‌ಯು) ಮೊದಲನೇ ಸಾಗರೋತ್ತರ ಕ್ಯಾಂಪಸ್ ಅನ್ನು ಉಗಾಂಡದ ಜಿಂಜಾದಲ್ಲಿ ತೆರೆಯಲಾಗಿದೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಉಪಸ್ಥಿತಿಯಲ್ಲಿ ಈ ಕ್ಯಾಂಪಸ್‌ನ ಉದ್ಘಾಟನೆ ನಡೆಯಿತು.

‘ಎರಡೂ ದೇಶಗಳು ಹೆಮ್ಮೆಪಡುವ ದಿನ ಇದು’ ಎಂದು ಉದ್ಘಾಟನಾ ಸಮಾರಂಭದಲ್ಲಿ ಜೈಶಂಕರ್ ಹೇಳಿದರು.

ಭಾರತ ಮೂಲದ ಸ್ಟಾರ್ಟ್‌ಅಪ್ ಕಾರ್ಯನಿರ್ವಾಹಕರಿಗೆ ಶಿಕ್ಷೆ

ನ್ಯೂಯಾರ್ಕ್ (ಪಿಟಿಐ): ಕಂಪನಿಯ ಗ್ರಾಹಕರು, ಸಾಲದಾತರು ಮತ್ತು ಹೂಡಿಕೆದಾರರನ್ನು ಗುರಿಯಾಗಿಸಿಕೊಂಡು ₹ 8,190 ಕೋಟಿ ವಂಚನೆ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಚಿಕಾಗೋ ಮೂಲದ ಸ್ಟಾರ್ಟ್ ಅಪ್‌ನ ಭಾರತ ಸಂಜಾತ ಇಬ್ಬರು ಕಾರ್ಯನಿರ್ವಾಹಕರಿಗೆ ಸ್ಥಳೀಯ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

ಆರೋಗ್ಯ ಮತ್ತು ತಂತ್ರಜ್ಞಾನ ಸಂಸ್ಥೆ ನಡೆಸುತ್ತಿರುವ ಮಾಜಿ ಸಿಇಒ ರಿಷಿ ಷಾ, ಮಾಜಿ ಅಧ್ಯಕ್ಷೆ ಶಾರದಾ ಅಗರವಾಲ್ ಹಾಗೂ ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಬ್ರಾಡ್ ಪರ್ಡಿ ತಪ್ಪಿತಸ್ಥರು ಎಂದು ಹತ್ತು ವಾರಗಳ ವಿಚಾರಣೆ ನಂತರ ನ್ಯಾಯಮೂರ್ತಿ ಮಂಗಳವಾರ ತೀರ್ಪು ನೀಡಿದ್ದಾರೆ.

ಗೆಹಲೋತ್ ವಿರುದ್ಧ ನಿರಶನ: ರಾಜಸ್ಥಾನ ಉಸ್ತುವಾರಿ ರಂಧಾವ ಪ್ರತಿಕ್ರಿಯೆ

‘ಪೈಲಟ್ ವಿಚಾರ ಸರಿ, ಮಾರ್ಗ ಒಪ್ಪಲ್ಲ’

ನವದೆಹಲಿ: ‘ಪಕ್ಷದ ಮುಖಂಡ ಸಚಿನ್ ಪೈಲಟ್ ಭ್ರಷ್ಟಾಚಾರ ವಿಷಯ ಕೈಗೆತ್ತಿಕೊಂಡು ಹೋರಾಟ ನಡೆಸಿದ್ದಕ್ಕೆ ನನ್ನ ಸಮ್ಮತಿ ಇದೆ. ಆದರೆ, ಅವರು ನಡೆಸಿದ ಹೋರಾಟದ ರೀತಿ ಸರಿ ಇರಲಿಲ್ಲ’ ಎಂದು ಎಐಸಿಸಿಯ ರಾಜಸ್ಥಾನ ಉಸ್ತುವಾರಿ ಸುಖ್ಜಿಂದರ್ ಸಿಂಗ್ ರಂಧಾವ ಬುಧವಾರ ಹೇಳಿದರು.

ಭ್ರಷ್ಟಾಚಾರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ, ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಅವರು ತಮ್ಮದೇ ಸರ್ಕಾರದ ವಿರುದ್ಧ ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಿದ್ದಕ್ಕೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

ಪೈಲಟ್ ವಿರುದ್ಧ ಪಕ್ಷದ ಹೈಕಮಾಂಡ್ ಯಾವ ಕ್ರಮ ಕೈಗೊಳ್ಳಲಿದೆ ಎಂಬ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ, ರಾಜ್ಯ ಉಸ್ತುವಾರಿಯಿಂದ ಈ ಹೇಳಿಕೆ ಹೊರಬಿದ್ದಿದೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭ್ರಷ್ಟಾಚಾರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರವನ್ನು ಪೈಲಟ್ ಅವರು ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಿತ್ತು. ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆ ವೇಳೆ ಈ ಕುರಿತು ಮಾತನಾಡಬೇಕಿತ್ತು. ಮುಖ್ಯಮಂತ್ರಿಗಳು ಉತ್ತರ ನೀಡುತ್ತಿದ್ದರು’ ಎಂ.

‘1986ರಿಂದಲೂ ಪೈಲಟ್ ಕುಟುಂಬದೊಂದಿಗೆ ಒಡನಾಟ ಹೊಂದಿರುವ ನಾನು, ಹಲವು ಬಾರಿ ಅವರನ್ನು ಭೇಟಿ ಮಾಡಿದ್ದೇನೆ. ಹೀಗಾಗಿ, ಅಧಿವೇಶನದಲ್ಲಿ ಪ್ರಸ್ತಾಪ ಮಾಡಿರದಿದ್ದಲ್ಲಿ, ಅವರು ನನ್ನೊಂದಿಗೆ ಈ ವಿಷಯವನ್ನು ಚರ್ಚಿಸಬೇಕಿತ್ತು’ ಎಂದರು.



ದೆಹಲಿ ಕಂಟೋನ್ಮೆಂಟ್–ಅಜ್ಮೆರ್ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ವರ್ಚುವಲ್ ಆಗಿ ಬುಧವಾರ ಚಾಲನೆ ನೀಡಿದರು. —ಪಿಟಿಐ ಚಿತ್ರ

ಸಚಿನ್ ಉಪವಾಸ ಸತ್ಯಾಗ್ರಹ ನಡೆಸಿದ್ದು ಸೇರಿದಂತೆ ಎಲ್ಲ ವಿದ್ಯಮಾನಗಳ ಕುರಿತು ಪರಿಶೀಲನೆ ನಡೆಸಿ, ಹೈಕಮಾಂಡ್‌ಗೆ ಸಮಗ್ರ ವರದಿ ಸಲ್ಲಿಸುತ್ತೇನೆ

ಸುಖ್ಜಿಂದರ್ ಸಿಂಗ್ ರಂಧಾವ,
ಎಐಸಿಸಿಯ ರಾಜಸ್ಥಾನ ಉಸ್ತುವಾರಿ

‘ಇತ್ತೀಚೆಗೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಭ್ರಷ್ಟಾಚಾರ ಕುರಿತ ಹಲವು ವಿಚಾರಗಳನ್ನು ಪೈಲಟ್ ಪ್ರಸ್ತಾಪಿಸಿದ್ದರು. ಅವರ ಈ ನಡೆ ಪಕ್ಷದ ಪರವಾಗಿರಲಿಲ್ಲ ಎಂಬುದು ನನ್ನ ಭಾವನೆ’ ಎಂದರು.

ಭೇಟಿ–ಚರ್ಚೆ: ಇದಕ್ಕೂ ಮುನ್ನ, ರಂಧಾವ ಅವರು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ, ಪೈಲಟ್ ಕೈಗೊಂಡಿದ್ದ ಉಪವಾಸ ಸತ್ಯಾಗ್ರಹ ಸೇರಿದಂತೆ ರಾಜಸ್ಥಾನದಲ್ಲಿನ ರಾಜಕೀಯ ಬಿಕ್ಕಟ್ಟು ಕುರಿತು ಮಾಹಿತಿ ನೀಡಿದರು.

‘ರಾಜಸ್ಥಾನ ಎಸಿಬಿ ನಡೆಸಿದಷ್ಟು ದಾಳಿ ಬೇರೆಲ್ಲೂ ನಡೆದಿಲ್ಲ’

ಜೈಪುರ: ‘ಹಲವು ಭ್ರಷ್ಟ ಅಧಿಕಾರಿಗಳ ಮೇಲೆ ರಾಜಸ್ಥಾನ ಭ್ರಷ್ಟಾಚಾರ ನಿಗ್ರಹ ಸಂಸ್ಥೆ (ಎಸಿಬಿ) ದಾಳಿ ನಡೆಸಿದೆ. ಭ್ರಷ್ಟಾಚಾರದಲ್ಲಿ ತೊಡಗಿರುವವರ ವಿರುದ್ಧ ಇಷ್ಟೊಂದು ಪ್ರಮಾಣದಲ್ಲಿ ದಾಳಿಗಳು ಎಲ್ಲಿಯೂ ನಡೆದಿಲ್ಲ’ ಎನ್ನುವ ಮೂಲಕ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ತಮ್ಮದೇ ಪಕ್ಷದ ನಾಯಕ ಸಚಿನ್ ಪೈಲಟ್ ಅವರಿಗೆ ಬುಧವಾರ ತಿರುಗೇಟು ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಣದುಬ್ಬರವನ್ನು ಕಡಿಮೆ ಮಾಡುವುದೇ ನಮ್ಮ ಗುರಿ. ಈ ವಿಷಯದ ಬಗ್ಗೆಯೇ ನಮ್ಮ ಗಮನ ಕೇಂದ್ರೀಕೃತವಾಗಿದ್ದು, ಇದರಿಂದ ವಿಮುಖವಾಗುವ ಪ್ರಶ್ನೆಯೇ ಇಲ್ಲ’ ಎಂದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ತಮ್ಮದೇ ಸರ್ಕಾರದ ವಿರುದ್ಧ ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಮಂಗಳವಾರ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಗೆಹಲೋತ್ ಮೇಲಿನಂತೆ ಉತ್ತರಿಸಿದರು.

ಗೆಹಲೋತ್ ಹೊಗಳಿದ ಮೋದಿ

ಪ್ರಧಾನಿ ಮೋದಿ ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೈಲ್ವೆ ಯೋಜನೆಗಳ ಕುರಿತು ಇಂಥ ಹೇಳಿಕೆ ನೀಡಿರುವುದು ದುರದೃಷ್ಟಕರ

ಅಶೋಕ್ ಗೆಹಲೋತ್,
ರಾಜಸ್ಥಾನ ಮುಖ್ಯಮಂತ್ರಿ

ಜೈಪುರ: ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸ್ವಪಕ್ಷೀಯರು ನಡೆಸಿದ ಪ್ರತಿಭಟನೆಯಿಂದ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿರುವಾಗ, ಅವರನ್ನು ‘ಗೆಳೆಯ’ ಎಂದು ಕರೆಯುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಎಲ್ಲರ ಹುಬ್ಬೇರುವಂತೆ ಮಾಡಿದರು.

ದೆಹಲಿ ಕಂಟೋನ್ಮೆಂಟ್–ಅಜ್ಮೇರ್ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ವರ್ಚುವಲ್ ಮೂಲಕ ಹಸಿರು ನಿಶಾನೆ ತೋರಿದ ನಂತರ ಪ್ರಧಾನಿ ಮಾತನಾಡಿದರು. ಈ ರೈಲು, ಗುರುಗ್ರಾಮ, ಅಲ್ವಾರ್ ಹಾಗೂ ಜೈಪುರದಲ್ಲಿ ನಿಲುಗಡೆಯಾಗಲಿದೆ.

‘ಈಗ ರಾಜಕೀಯ ಸಂಘರ್ಷ ನಡೆಯುತ್ತಿದೆ. ಗೆಹಲೋತ್ ಅವರೂ ಸದ್ಯ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದಾರೆ. ಆದರೆ, ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಹಸಿರು ನಿಶಾನೆ ತೋರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಅವರು ಅಭಿವೃದ್ಧಿ ಕಾರ್ಯಗಳನ್ನು ಬೆಂಬಲಿಸಿದ್ದಾರೆ. ಇದಕ್ಕಾಗಿ ಅವರಿಗೆ ವಿಶೇಷ ಕೃತಜ್ಞತೆ ಸಲ್ಲಿಸುತ್ತೇನೆ’ ಎಂದು ಮೋದಿ ಹೇಳಿದರು.

ಕಳೆದ ಐದು ತಿಂಗಳ ಅವಧಿಯಲ್ಲಿ ಎರಡನೇ ಬಾರಿ ಗೆಹಲೋತ್ ಅವರನ್ನು ಮೋದಿ ಹೊಗಳಿದಂತಾಗಿದೆ.

ಇದಕ್ಕೂ ಮುನ್ನ ಮಾತನಾಡಿದ್ದ ಮುಖ್ಯಮಂತ್ರಿ ಗೆಹಲೋತ್ ಅವರು, ರಾಜ್ಯದ ರೈಲ್ವೆ ಬೇಡಿಕೆಗಳನ್ನು ಪ್ರಸ್ತಾಪಿಸಿದ್ದರು. ಸ್ವಾತಂತ್ರ್ಯ ನಂತರ ಇದೇ ಮೊದಲ ಬಾರಿಗೆ ರಾಜ್ಯದವರೊಬ್ಬರು ಕೇಂದ್ರ ರೈಲ್ವೆ ಸಚಿವರಾಗಿದ್ದಾರೆ ಎಂದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಮೋದಿ, ‘ಗೆಹಲೋತ್ ಅವರು ನನ್ನಲ್ಲಿ ನಂಬಿಕೆ ಇರಿಸಿದ್ದು, ಈ ನಂಬಿಕೆಯೇ ನಮ್ಮ ಸ್ನೇಹಕ್ಕೆ ಶಕ್ತಿ ತುಂಬುತ್ತದೆ. ಇದಕ್ಕಾಗಿ ನಿಮಗೆ ಧನ್ಯವಾದಗಳು’ ಎಂದರು.

‘ಫ್ಯಾಕ್ಟ್ ಚೆಕಿಂಗ್’ ಘಟಕ ಸ್ಥಾಪನೆ ನಿರ್ಧಾರಕ್ಕೆ ವಿರೋಧ

ಐ.ಟಿ ನಿಯಮಗಳ ತಿದ್ದುಪಡಿ ಹಿಂಪಡೆಯಲು ಐಎನ್‌ಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿಸೂತ್ರಗಳ ಸಂಹಿತೆ) ನಿಯಮಗಳಿಗೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರದ ಕ್ರಮಕ್ಕೆ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ (ಐಎನ್‌ಎಸ್) ಕಳವಳ ವ್ಯಕ್ತಪಡಿಸಿದೆ.

ಈ ತಿದ್ದುಪಡಿಯು, ಯಾವ ಸುದ್ದಿ ನಕಲಿ, ಯಾವುದು ಅಲ್ಲ ಎಂಬುದನ್ನು ನಿರ್ಧರಿಸುವ ಸಂಪೂರ್ಣ ಅಧಿಕಾರವನ್ನು ಸರ್ಕಾರಕ್ಕೆ ಅಥವಾ ಸರ್ಕಾರದಿಂದ ನಿಯೋಜಿತ ಸಂಸ್ಥೆಗೆ ನೀಡುತ್ತದೆ ಎಂದು ಐಎನ್‌ಎಸ್ ಬುಧವಾರ ಬಿಡುಗಡೆ ಮಾಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಐ.ಟಿ ನಿಯಮಗಳಿಗೆ ತಿದ್ದುಪಡಿ ತಂದಿರುವ ಕುರಿತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಏಪ್ರಿಲ್ 6ರಂದು ಅಧಿಸೂಚನೆ ಹೊರಡಿಸಿದೆ.

‘ಸುದ್ದಿಯೊಂದು ನಕಲಿ ಅಥವಾ ನಿಜ ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ಸರ್ಕಾರ ಅಥವಾ ನಿಯೋಜಿತ ಸಂಸ್ಥೆಗೆ ನೀಡುವ ಮುನ್ನ ಸಂಬಂಧಪಟ್ಟ ಪಕ್ಷಗಾರರ ಅಹವಾಲು ಆಲಿಸಿಲ್ಲ. ಹೀಗಾಗಿ, ಇಂಥ ಕ್ರಮವು ದಬ್ಬಾಳಿಕೆ ಎನಿಸಲಿದ್ದು, ಸಹಜ ನ್ಯಾಯ ತತ್ವಗಳ ಉಲ್ಲಂಘನೆಯಾಗಲಿದೆ. ದೂರುದಾರರನ್ನೇ ನ್ಯಾಯ ನಿರ್ಣಯ ಮಾಡುವ ಸ್ಥಾನದಲ್ಲಿ ಕೂರಿಸುವುದಕ್ಕೆ ದಾರಿ ಮಾಡಿಕೊಡುತ್ತದೆ’ ಎಂದು ಐಎನ್‌ಎಸ್ ಹೇಳಿದೆ.

ಸಚಿವಾಲಯವು ಅಧಿಸೂಚನೆಯೊಂದನ್ನು ಪ್ರಕಟಿಸುವ ಮೂಲಕ ‘ಫ್ಯಾಕ್ಟ್ ಚೆಕಿಂಗ್’ ಘಟಕವನ್ನು ಸ್ಥಾಪಿಸಲು ಈ ತಿದ್ದುಪಡಿ ಅವಕಾಶ ನೀಡುತ್ತದೆ. ಆದರೆ, ಈ ‘ಫ್ಯಾಕ್ಟ್ ಚೆಕಿಂಗ್’ ಘಟಕದ ಕಾರ್ಯವೈಖರಿ, ಅದರ ಮೇಲ್ವಿಚಾರಣೆ ವಿಧಾನದ ಬಗ್ಗೆ ತಿದ್ದುಪಡಿ ಮಾಡಲಾದ ನಿಯಮಗಳಲ್ಲಿ ನಿರ್ದಿಷ್ಟ ವಿವರಣೆಗಳಿಲ್ಲ ಎಂದೂ ಅಸಮಾಧಾನ ವ್ಯಕ್ತಪಡಿಸಿದೆ.

‘ಫ್ಯಾಕ್ಟ್ ಚೆಕಿಂಗ್’ ಘಟಕಕ್ಕೆ ಇರುವ ಅಧಿಕಾರ ವ್ಯಾಪ್ತಿ ಏನು? ಮೇಲ್ಮನವಿ ಸಲ್ಲಿಸಲು ಅವಕಾಶ ಇದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ಇದು ಮಾಧ್ಯಮಗಳನ್ನು ಪೂರ್ವಪರಿಶೀಲನೆಗೆ (ಸೆನ್ಸಾರ್‌ಶಿಪ್) ಒಳಪಡಿಸುವುದಕ್ಕೆ ಸಮವಾಗುವುದು ಎಂದೂ ಐಎನ್‌ಎಸ್ ಅಭಿಪ್ರಾಯಪಟ್ಟಿದೆ.

ಮಾಧ್ಯಮ ವಲಯದಿಂದ ವ್ಯಾಪಕ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ, ಜನವರಿಯಲ್ಲಿ ಪ್ರಕಟಿಸಿದ್ದ ತಿದ್ದುಪಡಿಗಳನ್ನು ಸಚಿವಾಲಯ ಹಿಂಪಡೆದಿತ್ತು. ತಿದ್ದುಪಡಿ ಕುರಿತು ಮಾಧ್ಯಮ ಕಂಪನಿಗಳು ಹಾಗೂ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸುವುದಾಗಿಯೂ ಆಗ ಭರವಸೆ ನೀಡಿತ್ತು. ಆದರೆ, ಇಂಥ ಯಾವುದೇ ಸಮಾಲೋಚನೆ ನಡೆಸದಿರುವುದು ವಿಷಾದಕರ ಎಂದು ಹೇಳಿದೆ.

ಏಪ್ರಿಲ್ 6ರಂದು ಪ್ರಕಟಿಸಲಾಗಿರುವ ತಿದ್ದುಪಡಿ ನಿಯಮಗಳಿಗೂ, ಕರಡುವಿನಲ್ಲಿದ್ದ ತಿದ್ದುಪಡಿಗಳಿಗೂ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ ಎಂದೂ ಕಳವಳ ವ್ಯಕ್ತಪಡಿಸಿದೆ. ಸಂವಿಧಾನದಲ್ಲಿ ವಿವರಿಸಿರುವಂತೆ, ಸಹಜ ನ್ಯಾಯ ತತ್ವಗಳನ್ನು ಎತ್ತಿ ಹಿಡಿಯುವ, ವಾಕ್ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಖಾತರಿಪಡಿಸುವ ದೃಷ್ಟಿಯಿಂದ, ಸರ್ಕಾರವು ಕೂಡಲೇ ಈ ಅಧಿಸೂಚನೆಯನ್ನು ಹಿಂಪಡೆಯಬೇಕು ಎಂದು ಐಎನ್‌ಎಸ್ ಆಗ್ರಹಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ಕಿಡಿ

‘ಒಂದು ದೇಶ, ಒಂದು ಹಾಲು’ ಅವಕಾಶವಿಲ್ಲ’

ನವದೆಹಲಿ (ಪಿಟಿಐ): ಅಮೂಲ್ ಮತ್ತು ನಂದಿನಿ ನಡುವೆ ಬಲವಂತದ ಸಹಕಾರವನ್ನು ಕೇಂದ್ರ ಸರ್ಕಾರ ಬಯಸುತ್ತಿದೆ. ಆದರೆ, ಬಿಜೆಪಿಯ ‘ಒಂದು ದೇಶ, ಒಂದು ಹಾಲು’ ಎಂಬ ಘೋಷಣೆಗೆ ಅವಕಾಶ ನೀಡುವುದಿಲ್ಲ ಎಂದು ಕಾಂಗ್ರೆಸ್ ಬುಧವಾರ ಕುಟುಕಿದೆ.

ಇದು ರಾಜ್ಯಗಳಲ್ಲಿನ ಡೇರಿ ಸಹಕಾರಿ ಸಂಸ್ಥೆಗಳನ್ನು ನಿಯಂತ್ರಿಸುವ ‘ನಾಚಿಕೆಗೇಡಿನ ಕ್ರಮ’ ಎಂದು ಹೇಳಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಸಹಕಾರಿ ಸಂಸ್ಥೆಗಳ ನಿಯಂತ್ರಣವನ್ನು ಕೇಂದ್ರೀಕರಿಸುವ ಬಿಜೆಪಿಯ ಪ್ರಯತ್ನಗಳನ್ನು ಪಕ್ಷ ಬಲವಾಗಿ ವಿರೋಧಿಸುತ್ತದೆ ಎಂದು ಹೇಳಿದರು.

ಕರ್ನಾಟಕದಲ್ಲಿ ಈಗ ವಿಧಾನಸಭಾ ಚುನಾವಣೆಯ ಭರಾಟೆ ಇದ್ದು, ಹಾಲಿನ ವಿಷಯವೂ ಚರ್ಚೆಯ ಕೇಂದ್ರಬಿಂದುಗಳಲ್ಲಿ ಒಂದಾಗಿದೆ. ಇದೇ ವಿಷಯವಾಗಿ ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದ್ದು,


ಜೈರಾಮ್ ರಮೇಶ್

ಕೆಎಂಎಫ್ ₹ 21,000 ಕೋಟಿ ವಹಿವಾಟು ನಡೆಸುತ್ತಿದ್ದು ನಂದಿನಿ ಬ್ರಾಂಡ್ ಅನ್ನು ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್ (ಅಮೂಲ್) ಜೊತೆ ವಿಲೀನಗೊಳಿಸಬಹುದು ಎಂದು ಆತಂಕ ವ್ಯಕ್ತಪಡಿಸಿದೆ. ಆದರೆ, ಈ ಆರೋಪವನ್ನು ಬಿಜೆಪಿ ಬಲವಾಗಿ ತಿರಸ್ಕರಿಸಿದೆ.

ಕರ್ನಾಟಕದ ಚುನಾವಣಾ ಪ್ರಚಾರದಲ್ಲಿ ಹಾಗೂ ದೇಶದಾದ್ಯಂತ ರಾಜಕೀಯ ಚಟುವಟಿಕೆಗಳಲ್ಲಿ ಈ ನಡೆಗಳ ಹಿಂದಿನ ಕೆಟ್ಟ ಕಾರ್ಯಸೂಚಿ ಬಗ್ಗೆ ಕಾಂಗ್ರೆಸ್ ಜನರಿಗೆ ತಿಳಿಸುತ್ತದೆ ಮತ್ತು ಸಾಧ್ಯವಿರುವ ಎಲ್ಲಾ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಅವುಗಳನ್ನು ವಿರೋಧಿಸುತ್ತದೆ ಎಂದು ಹೇಳಿದರು.

ಸಂವಿಧಾನವು ಸಹಕಾರಿ ಸಂಘಗಳನ್ನು ರಾಜ್ಯ ವಿಷಯವಾಗಿ ಸ್ಪಷ್ಟವಾಗಿ ಗುರುತಿಸುತ್ತದೆ. ಆದರೆ, ಸಹಕಾರ ಸಚಿವ ಅಮಿತ್ ಶಾ ಹಾಗೂ ಅವರು ಪ್ರತಿನಿಧಿಸುವ ಬಿಜೆಪಿಯಿಂದ ಸಂವಿಧಾನವನ್ನೇ ನಿರ್ಲಕ್ಷಿಸಲಾಗುತ್ತಿದೆ ಎಂದು ದೂರಿದರು.

ಕೆಎಂಎಫ್ 14,000 ಸಹಕಾರಿ ಸಂಘಗಳ ಒಕ್ಕೂಟವಾಗಿದ್ದು, ಅದರ 24 ಲಕ್ಷ ಸದಸ್ಯರು ದಿನಕ್ಕೆ ₹ 17 ಕೋಟಿ ಗಳಿಸುತ್ತಾರೆ ಎಂದರು.

ಇದೇ ವೇಳೆ ಕರ್ನಾಟಕ ಕಾಂಗ್ರೆಸ್ ಸಹ ನಂದಿನಿ ಹೋರಾಟದ ಜತೆಗೆ ಕರ್ನಾಟಕ ಮೂಲದ ಬ್ಯಾಂಕ್‌ಗಳ ವಿಲೀನದ ಬಗ್ಗೆಯೂ ಮತದಾರರಿಗೆ ತಿಳಿಸಲಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ಕೆಎಂಎಫ್ ಮೆಗಾ ಡೇರಿ ಉದ್ಘಾಟನೆ ವೇಳೆ ಅಮಿತ್ ಶಾ, ‘ಅಮೂಲ್ ಮತ್ತು ನಂದಿನಿ ನಡುವಿನ ಸಹಕಾರವು ಡೇರಿ ಕ್ಷೇತ್ರದಲ್ಲಿ ಅದ್ಭುತ ಮಾಡಬಹುದು’ ಎಂದು ಹೇಳಿದ್ದರು.

ರಾಹುಲ್ ಖುದ್ದು ಹಾಜರಿಗೆ ಕೋರ್ಟ್ ಸೂಚನೆ

ಪಟ್ನಾ (ಪಿಟಿಐ): ‘ಮೋದಿ’ ಉಪನಾಮದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿದ ಪ್ರಕರಣ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಬಿಹಾರದ ಪಟ್ನಾ ಕೋರ್ಟ್ ಇದೇ 25ರಂದು ಖುದ್ದು ಹಾಜರಾಗಲು ಬುಧವಾರ ಸೂಚನೆ ನೀಡಿದೆ.


ರಾಹುಲ್ ಗಾಂಧಿ

ಬಿಜೆಪಿಯ ರಾಜ್ಯಸಭೆ ಸದಸ್ಯ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ಅವರು ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಜನಪ್ರತಿನಿಧಿಗಳ ನ್ಯಾಯಾಲಯ ಏಪ್ರಿಲ್ 12ರಂದು ರಾಹುಲ್ ಗಾಂಧಿ ಅವರ ಖುದ್ದು ಹಾಜರಾತಿಗೆ ಕಳೆದ ಮಾರ್ಚ್ 18ರಂದು ಆದೇಶ ಹೊರಡಿಸಿತ್ತು. ಆದರೆ, ಬುಧವಾರದ ವಿಚಾರಣೆಯಲ್ಲಿ ರಾಹುಲ್ ಗಾಂಧಿ ಅವರ ವಕೀಲರು, ಇಡೀ ತಂಡ ಸೂರತ್ ಕೋರ್ಟ್ ಆದೇಶದ ಪ್ರಕರಣದಲ್ಲಿ ನಿರತರಾಗಿದ್ದಾರೆ. ಇದರಿಂದ ಖುದ್ದು ಹಾಜರಾತಿಗೆ ಸಮಯಾವಕಾಶ ನೀಡುವಂತೆ ಮನವಿ ಮಾಡಿದರು.

ವಕೀಲರ ಕೋರಿಕೆ ಮಾನ್ಯ ಮಾಡಿದ ನ್ಯಾಯಾಧೀಶರು, ಏ.25ರಂದು ನಡೆಯಲಿರುವ ಪ್ರಕರಣದ ಮುಂದಿನ ವಿಚಾರಣೆಗೆ ರಾಹುಲ್ ಗಾಂಧಿ ಖುದ್ದು ಹಾಜರಿರಬೇಕು ಎಂದು ಅವರ ವಕೀಲರಿಗೆ ಸೂಚಿಸಿದರು.

ದೂರುದಾರರ ಹೇಳಿಕೆಗಳನ್ನು ದಾಖಲಿಸಲಾಗಿದೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲ ಪುರಾವೆಗಳು ಮತ್ತು ರಾಹುಲ್ ಗಾಂಧಿಯವರ ಹೇಳಿಕೆಯನ್ನು ಮಾತ್ರ ದಾಖಲಿಸಬೇಕಾಗಿದೆ ಎಂದು ಪ್ರಾಸಿಕ್ಯೂಷನ್ ವಕೀಲರಾದ ಪ್ರಿಯಾ ಗುಪ್ತಾ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಮಾನವೀಯ ನೆರವು: ಮೋದಿಗೆ ಝೆಲೆನ್‌ಸ್ಕಿ ಪತ್ರ

ನವದೆಹಲಿ (ಪಿಟಿಐ): ಯುದ್ಧ ಪೀಡಿತ ಉಕ್ರೇನ್‌ಗೆ ಔಷಧ, ವೈದ್ಯಕೀಯ ಉಪಕರಣಗಳು ಸೇರಿ ಮತ್ತಷ್ಟು ಮಾನವೀಯ ನೆರವು ನೀಡುವಂತೆ ಕೋರಿ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಪತ್ರವನ್ನು ಉಕ್ರೇನ್‌ನ ಮೊದಲ ಉಪ ವಿದೇಶಾಂಗ ಸಚಿವೆ ಎಮಿನ್ ಡಿಝಪರೋವ ಅವರು ಮಂಗಳವಾರ ನಡೆದ ಸಭೆಯಲ್ಲಿ ವಿದೇಶಾಂಗ ವ್ಯವಹಾರ ಮತ್ತು ಸಂಸ್ಕೃತಿ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಅವರಿಗೆ ಹಸ್ತಾಂತರಿಸಿದರು.

ಎಮಿನ್ ಅವರು ಕೈಗೊಂಡಿದ್ದ ಮೂರು ದಿನಗಳ ಭಾರತ ಪ್ರವಾಸ ಬುಧವಾರ ಮುಕ್ತಾಯವಾಯಿತು. ಭಾರತದ ಜೊತೆ ದೃಢವಾದ ಮತ್ತು ನಿಕಟ ಸಂಬಂಧ ಬೆಳೆಸುವ ಇಂಗಿತವನ್ನು ಉಕ್ರೇನ್ ಹೊಂದಿದೆ ಎಂದು ಎಮಿನ್ ಅವರು ಈ ವೇಳೆ ತಿಳಿಸಿದ್ದಾರೆ.

ಉಭಯದೇಶಗಳ ವಿದೇಶಾಂಗ ಸಚಿವಾಲಯಗಳ ಮುಂದಿನ ಸುತ್ತಿನ ಸಭೆಯನ್ನು ಉಕ್ರೇನ್‌ನಲ್ಲಿ, ಎರಡೂ ದೇಶಗಳಿಗೆ ಅನುಕೂಲವಾಗುಂತಹ ದಿನದಂದು ಏರ್ಪಡಿಸಲಾಗುವುದು ಎಂದು ಸಚಿವಾಲಯ ಮಾಹಿತಿ ನೀಡಿದೆ.

ಮತಾಂತರದ ನಂತರವೂ ಕಳಚದ ಕಳಂಕ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಈ ವರ್ಷದ ಜುಲೈಗೆ ವಿಚಾರಣೆ ಮುಂದೂಡಿಕೆ
- 19 ವರ್ಷಗಳಿಂದ ಬಾಕಿ ಉಳಿದಿರುವ ಅರ್ಜಿಗಳು
- ನ್ಯಾಯಮೂರ್ತಿ ರಂಗನಾಥ ಮಿಶ್ರಾ ಆಯೋಗದ ವರದಿ ಸ್ವೀಕರಿಸದ ಸರ್ಕಾರ

ನವದೆಹಲಿ: ‘ಸಾಮಾಜಿಕ ಕಳಂಕ ಹಾಗೂ ಧಾರ್ಮಿಕ ಕಳಂಕ, ಎರಡು ಭಿನ್ನ ವಿಷಯಗಳು. ವ್ಯಕ್ತಿಯ ಮೇಲಿನ ಸಾಮಾಜಿಕ ಕಳಂಕವು ಮತಾಂತರದ ನಂತರವೂ ಮುಂದುವರಿಯಬಹುದು’ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ಮುಸ್ಲಿಂ ಹಾಗೂ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿರುವ ದಲಿತರನ್ನೂ ಪರಿಶಿಷ್ಟ ಜಾತಿ ಪಟ್ಟಿಗೆ ಸೇರ್ಪಡೆ ಮಾಡುವಂತೆ ನ್ಯಾಯಮೂರ್ತಿ ರಂಗನಾಥ ಮಿಶ್ರಾ ಆಯೋಗವು ಶಿಫಾರಸು ಮಾಡಿತ್ತು. ಈ ವರದಿ ದೋಷಪೂರಿತವಾಗಿದೆ ಎಂದು ಹೇಳಿ ಕೇಂದ್ರ ಸರ್ಕಾರ ಇದನ್ನು ತಿರಸ್ಕರಿಸಿತ್ತು.

ಸರ್ಕಾರದ ಈ ನಿಲುವನ್ನು ಪ್ರಶ್ನಿಸಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಇವುಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ, ‘ಮತಾಂತರಗೊಂಡಿರುವ ದಲಿತರಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಸಂಬಂಧಿಸಿದ ಸಾಂವಿಧಾನಿಕ ವಿಚಾರಗಳನ್ನು ಪರಿಗಣಿಸುವಾಗ ನ್ಯಾಯಾಲಯ ಕಣ್ಣುಮುಚ್ಚಿಕೊಂಡಿರಲು ಆಗುವುದಿಲ್ಲ’ ಎಂದು ಹೇಳಿದೆ.

ಕೇಂದ್ರ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್, ‘ಮಿಶ್ರಾ ಆಯೋಗವು ಕ್ಷೇತ್ರ ಅಧ್ಯಯನ ಕೈಗೊಳ್ಳದೆ ಹಾಗೂ ತುಲನಾತ್ಮಕ ವಿಶ್ಲೇಷಣೆ ನಡೆಸದೆಯೇ ವರದಿ ಸಿದ್ಧಪಡಿಸಿ 2007ರಲ್ಲಿ ಸಲ್ಲಿಸಿತ್ತು. ಹೀಗಾಗಿಯೇ ಅದನ್ನು ಸ್ವೀಕರಿಸಿಲ್ಲ’ ಎಂದು ಕೇಂದ್ರದ ನಿಲುವನ್ನು ಸಮರ್ಥಿಕೊಂಡರು.

‘ಕೇಂದ್ರ ಸರ್ಕಾರವು ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅವರ ನೇತೃತ್ವದಲ್ಲಿ 2022ರ ಅಕ್ಟೋಬರ್‌ನಲ್ಲಿ ಆಯೋಗವೊಂದನ್ನು ನೇಮಿಸಿದೆ. ಅದರ ವರದಿ ಬರುವವರೆಗೂ ನ್ಯಾಯಾಲಯ ಕಾಯಬೇಕು’ ಎಂದೂ ನಟರಾಜ್ ಅವರು ನ್ಯಾಯಮೂರ್ತಿಗಳಾದ ಅಸನುದ್ದಿನ್ ಅಮಾನುಲ್ಲಾ ಮತ್ತು ಅರವಿಂದ ಕುಮಾರ್ ಅವರಿದ್ದ ನ್ಯಾಯಪೀಠಕ್ಕೆ ತಿಳಿಸಿದರು.

‘ನಾಳೆ ಬೇರೆಯದ್ದೇ ಆದ



ರಾಜಕೀಯ ವ್ಯವಸ್ಥೆ ಅಸ್ತಿತ್ವಕ್ಕೆ ಬರಬಹುದು. ಈ ತನಿಖಾ ಆಯೋಗದ ವರದಿಯನ್ನು ನಾವು ಸ್ವೀಕರಿಸುವುದಿಲ್ಲ ಎಂದು ಆಗ ಅವರೂ ಹೇಳಬಹುದು’ ಎಂದು ನ್ಯಾಯಪೀಠ ತಿಳಿಸಿತು.

ಅರ್ಜಿದಾರರೊಬ್ಬರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲ ಪ್ರಶಾಂತ್ ಭೂಷಣ್, ‘ರಾಷ್ಟ್ರಪತಿಯವರ ಆದೇಶದಿಂದ ಸಮುದಾಯಗಳನ್ನು ಹೊರಗಿಡುವುದು ಅಸಾಂವಿಧಾನಿಕ ಹಾಗೂ ತಾರತಮ್ಯದ ನಿಲುವು’ ಎಂದು ವಾದಿಸಿದರು.

‘ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿಯು ಇಸ್ಲಾಂ ಅಥವಾ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು ಕೂಡ ಆತ ಪರಿಶಿಷ್ಟ ಜಾತಿಯ ಹಣೆಪಟ್ಟಿ ಹೊಂದಿರುತ್ತಾನೆ’ ಎಂಬ ಅರ್ಜಿದಾರರ ವಾದವನ್ನು ಉಲ್ಲೇಖಿಸಿದ ಪ್ರಶಾಂತ್ ಭೂಷಣ್, ‘ಮತಾಂತರಗೊಂಡರೆ ಅವರು ತಮ್ಮ ಜಾತಿಯ ಗುರುತನ್ನು ಕಳೆದುಕೊಳ್ಳುತ್ತಾರೆ ಎಂದು ನ್ಯಾಯಾಲಯ ಹೇಳುವುದು ಸರಿಯಲ್ಲ. ಅವರು ಏತಕ್ಕಾಗಿ ಮತಾಂತರಗೊಂಡಿದ್ದಾರೆ ಎಂಬ ಮಹತ್ವದ ಅಂಶದ ಬಗ್ಗೆ ನ್ಯಾಯಾಲಯವು ಪರಾಮರ್ಶೆಯನ್ನೇ ನಡೆಸಿಲ್ಲ’ ಎಂದೂ ಹೇಳಿದರು.

ಅಸ್ಪೃಶ್ಯತೆಯ ಕಾಯ್ದೆಯನ್ನು ಉಲ್ಲೇಖಿಸಿದ ನ್ಯಾಯಪೀಠ, ‘ವ್ಯಕ್ತಿಯೊಬ್ಬರು ವಿವಿಧ ಕಾರಣಗಳಿಗಾಗಿ ಮತಾಂತರಗೊಂಡಿರಬಹುದು. ಹೀಗಿದ್ದರೂ ಸಾಮಾಜಿಕ ಕಳಂಕ ಮುಂದುವರಿಯುತ್ತದೆ. ಈ ಕಾರಣಕ್ಕಾಗಿಯೇ ಪರಿಶಿಷ್ಟ ಜಾತಿಯವರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಮತಾಂತರಗೊಂಡಿರುವ ದಲಿತರಿಗೂ ಮೀಸಲಾತಿ ಕಲ್ಪಿಸಬೇಕೆಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳು 19 ವರ್ಷಗಳಿಂದಲೂ ಬಾಕಿ ಉಳಿದಿವೆ. ಹೀಗಾಗಿ ಈ ವಿಚಾರವನ್ನು ಲಘುವಾಗಿ ಪರಿಗಣಿಸಲಾಗುವುದಿಲ್ಲ’ ಎಂದು ತಿಳಿಸಿತು.

‘ಆಯೋಗಗಳನ್ನು ನೇಮಿಸುವುದು, ವರದಿ ಪಡೆಯುವುದು ಮುಂದುವರಿಯುತ್ತಲೇ ಇರುತ್ತದೆ. ಇಡೀ ಪ್ರಕ್ರಿಯೆಯನ್ನು ಹೊಸದಾಗಿ ಕೈಗೊಂಡರೆ ನೊಂದವರಿಗೆ ನ್ಯಾಯ ದೊರೆಯುವುದಿಲ್ಲ. ಹೀಗಾಗಿ ಈ ವಿಚಾರವನ್ನು ಕೊನೆ ಇಲ್ಲದ ಕಸರತ್ತು ಎಂದು ಬಿಂಬಿಸಲು ಅರ್ಜಿದಾರರು ಮುಂದಾಗಬಹುದು’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠವು ವಿಚಾರಣೆಯನ್ನು ಈ ವರ್ಷದ ಜುಲೈಗೆ ಮುಂದೂಡಿದೆ.

ಜಗನ್ ಆಗರ್ಭ ಶ್ರೀಮಂತ; ಮಮತಾ ಕಡಿಮೆ ಆಸ್ತಿ ಒಡತಿ

29 ಸಿ.ಎಂಗಳು ಕೋಟ್ಯಧಿಪತಿಗಳು: ಎಡಿಆರ್


ಜಗನ್


ಮಮತಾ ಬ್ಯಾನರ್ಜಿ

ನವದೆಹಲಿ (ಪಿಟಿಐ): ದೇಶದ 30 ಮುಖ್ಯಮಂತ್ರಿಗಳ ಪೈಕಿ 29 ಮುಖ್ಯಮಂತ್ರಿಗಳು ಕೋಟ್ಯಧಿಪತಿಗಳು. ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ದೇಶದಲ್ಲೇ ಅತಿ ಸಿರಿವಂತ ಮುಖ್ಯಮಂತ್ರಿಯಾದರೆ, ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಅತೀ ಕಡಿಮೆ ಮೊತ್ತದ ಆಸ್ತಿ ಹೊಂದಿರುವ ಮುಖ್ಯಮಂತ್ರಿ ಎನಿಸಿದ್ದಾರೆ.

ಇವರು ಸಲ್ಲಿಸಿರುವ ಚುನಾವಣಾ ಅಫಿಡವಿಟ್‌ಗಳನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ಎಲೆಕ್ಷನ್ ವಾಚ್ (ಎನ್‌ಇಡಬ್ಲ್ಯು) ಜಂಟಿ ವಿಶ್ಲೇಷಣೆ ನಡೆಸಿದ ನಂತರ ಈ ಮಾಹಿತಿ ಬಹಿರಂಗಪಡಿಸಿವೆ.

ಅತಿ ಹೆಚ್ಚು ಸಿರಿವಂತ ಪ್ರಮುಖ 3 ಸಿ.ಎಂಗಳು	
ವೈ.ಎಸ್. ಜಗನ್ ಮೋಹನ್ ರೆಡ್ಡಿ, ಆಂಧ್ರಪ್ರದೇಶ	ಒಟ್ಟು ಆಸ್ತಿ ₹510 ಕೋಟಿ
ಪೆಮಾ ಖಂಡು, ಅರುಣಾಚಲ ಪ್ರದೇಶ	₹163 ಕೋಟಿ
ನವೀನ್ ಪಟ್ನಾಯಕ್, ಒಡಿಶಾ	₹63 ಕೋಟಿ
ಅತಿ ಕಡಿಮೆ ಆಸ್ತಿವಂತ 3 ಸಿ.ಎಂಗಳು	
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ	₹15 ಲಕ್ಷ
ಪಿಣರಾಯಿ ವಿಜಯನ್, ಕೇರಳ	₹1 ಕೋಟಿ
ಮನೋಹರ್ ಲಾಲ್, ಹರಿಯಾಣ	₹1 ಕೋಟಿ

29 ಮಂದಿ ಕೋಟ್ಯಧಿಪತಿ ಮುಖ್ಯಮಂತ್ರಿಗಳು ಸರಾಸರಿ ತಲಾ ಆಸ್ತಿ ₹33.96 ಕೋಟಿ ಆಗಿದೆ. ಇದರಲ್ಲಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಲಾ ₹3 ಕೋಟಿಗೂ ಹೆಚ್ಚಿನ ಮೌಲ್ಯದ ಆಸ್ತಿ ಹೊಂದಿದ್ದಾರೆ ಎಂದು ಎಡಿಆರ್ ವರದಿಯಲ್ಲಿ ಹೇಳಿದೆ.

30 ಮಂದಿ ಮುಖ್ಯಮಂತ್ರಿಗಳಲ್ಲಿ 13 ಮುಖ್ಯಮಂತ್ರಿಗಳ ಮೇಲೆ ಗಂಭೀರ ಅಪರಾಧ ಪ್ರಕರಣಗಳಿವೆ. ಈ ಮುಖ್ಯಮಂತ್ರಿಗಳು ಚುನಾವಣಾ ಅಫಿಡವಿಟ್‌ನಲ್ಲಿ ಸಲ್ಲಿಸಿರುವ ಮಾಹಿತಿ ಪ್ರಕಾರ ಅವರ ಮೇಲೆ ಕೊಲೆ, ಕೊಲೆ ಯತ್ನ, ಅಪಹರಣ ಮತ್ತು ಕ್ರಿಮಿನಲ್ ಬೆದರಿಕೆಯಂತಹ ಗಂಭೀರ ಅಪರಾಧ ಪ್ರಕರಣಗಳಿವೆ.

ಗಂಭೀರ ಕ್ರಿಮಿನಲ್ ಪ್ರಕರಣಗಳು ಜಾಮೀನು ರಹಿತ ಅಪರಾಧಗಳಾಗಿದ್ದು, ಐದು ವರ್ಷಗಳಿಗೂ ಹೆಚ್ಚಿನ ಜೈಲು ಶಿಕ್ಷೆ ವಿಧಿಸುವಂತಹವು ಎಂದು ವರದಿ ತಿಳಿಸಿದೆ.

ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ ಮತ್ತು ಪುದುಚೆರಿ ಹಾಗೂ 28 ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಿದ್ದು, ಜಮ್ಮು ಮತ್ತು ಕಾಶ್ಮೀರ ಸದ್ಯ ಮುಖ್ಯಮಂತ್ರಿ ಹೊಂದಿರದ ಏಕೈಕ ಕೇಂದ್ರಾಡಳಿತ ಪ್ರದೇಶವಾಗಿದೆ.

ಬಟಿಂಡಾ: ರಾಜ್ಯದ ಇಬ್ಬರು ಯೋಧರು ಸೇರಿ ನಾಲ್ವರ ಹತ್ಯೆ

ಒಂದನೇ ಪುಟದಿಂದ..

‘ನಸುಕಿನ 4.30ರ ವೇಳೆಗೆ ದಾಳಿ ನಡೆದಿದೆ. ಆಗ ಮೃತ ಸೈನಿಕರು ಫಿರಂಗಿ ಘಟಕದಲ್ಲಿನ ಅಧಿಕಾರಿಗಳ ಭೋಜನಾಲಯದ ಬಳಿ ಇರುವ ತಮ್ಮ ಬ್ಯಾರೆಕ್‌ನಲ್ಲಿ ನಿದ್ರಿಸುತ್ತಿದ್ದರು. ಘಟನೆ ಕುರಿತು ಎಲ್ಲಾ ಆಯಾಮಗಳಿಂದಲೂ ಮಾಹಿತಿ ಕಲೆಹಾಕಲಾಗಿದೆ. ಇದು ಭಯೋತ್ಪಾದಕರ ದಾಳಿಯಲ್ಲ ಎಂಬುದು ಸದ್ಯಕ್ಕೆ ಖಾತರಿಯಾಗಿದೆ’ ಎಂದು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಘಟನೆ ಬಗ್ಗೆ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಸಂಪೂರ್ಣ ವಿವರ ನೀಡಿದ್ದಾರೆ.

‘ಗುಂಡುಗಳಿಂದ ತುಂಬಿದ್ದ ಇನ್ಸಾಸ್ (ಐಎನ್‌ಎಸ್‌ಎಎಸ್) ರೈಫಲ್ ಎರಡು ದಿನಗಳ ಹಿಂದೆ ಕಾಣೆಯಾಗಿತ್ತು. ಇದನ್ನು ಬಳಸಿ ದಾಳಿ ನಡೆಸಿರುವ ಸಾಧ್ಯತೆ ಇದೆ. ತನಿಖಾ ತಂಡವೊಂದು ಇನ್ಸಾಸ್ ರೈಫಲ್ ಹಾಗೂ ಗುಂಡುಗಳನ್ನು ಪತ್ತೆ ಹಚ್ಚಿದೆ. ಪಂಜಾಬ್ ಪೊಲೀಸರ ಜೊತೆಗೆ ವಿಚಾರಣಾ ನ್ಯಾಯಾಲಯವು (ಸಿಒಐ) ಘಟನೆ ಕುರಿತು ತನಿಖೆ ಕೈಗೊಳ್ಳಲಿದೆ’ ಎಂದು ಸೇನಾ ಮೂಲಗಳು ತಿಳಿಸಿವೆ.

‘ಗುಂಡಿನ ದಾಳಿ ಬಳಿಕ ಶ್ವೇತ ವರ್ಣದ ಕುರ್ತಾ ಹಾಗೂ ಪೈಜಾಮ ಧರಿಸಿದ್ದ ಇಬ್ಬರು ಮುಸುಕುಧಾರಿ ವ್ಯಕ್ತಿಗಳು ಬ್ಯಾರೆಕ್‌ನಿಂದ ಹೊರಬರುತ್ತಿದ್ದುದನ್ನು ಸೈನಿಕರೊಬ್ಬರು ನೋಡಿದ್ದಾರೆ. ಈ ಪೈಕಿ ಒಬ್ಬಾತ ಇನ್ಸಾಸ್ ರೈಫಲ್ ಹಿಡಿದಿದ್ದ. ಮತ್ತೊಬ್ಬನ ಕೈಯಲ್ಲಿ ಕೊಡಲಿ ಇತ್ತು ಎಂಬುದಾಗಿ ಅವರು ಹೇಳಿಕೆ ನೀಡಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಸೈನಿಕನನ್ನು ಕಂಡೊಡನೆಯೇ ದುಷ್ಕರ್ಮಿಗಳು ಬ್ಯಾರೆಕ್ ಸಮೀಪದಲ್ಲಿರುವ ಅರಣ್ಯ ಪ್ರದೇಶದತ್ತ ಓಡಿ ಹೋಗಿದ್ದಾರೆ. ಗುಂಡಿನ ಸದ್ದು ಕೇಳಿದೊಡನೆಯೇ ಇಬ್ಬರು ಸೇನಾ ಅಧಿಕಾರಿಗಳು ಬ್ಯಾರೆಕ್‌ನತ್ತ ಧಾವಿಸಿದ್ದರು. ಒಳಗೆ ಹೋಗಿ ನೋಡಿದಾಗ ಸಾಗರ್ ಹಾಗೂ ಯೋಗೇಶ್ ಅವರ ಮೃತದೇಹಗಳು ರಕ್ತದ ಮಡುವಿನಲ್ಲಿ ಬಿದ್ದಿದ್ದವು. ಮತ್ತೊಂದು ಕೋಣೆಯಲ್ಲಿ ಸಂತೋಷ್ ಹಾಗೂ ಕಮಲೇಶ್ ಮೃತದೇಹಗಳು ಪತ್ತೆಯಾಗಿದ್ದವು. ಅವುಗಳ ಮೇಲೆ ಗುಂಡಿನ ಗುರುತುಗಳಿದ್ದವು’ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

ಘಟನೆ ಬಗ್ಗೆ ಮೃತ ಯೋಧರ ಕುಟುಂಬದವರಿಗೆ ಮಾಹಿತಿ ನೀಡಲಾಗಿದೆ. ಬಟಿಂಡಾವು ದೇಶದ ಅತಿ ದೊಡ್ಡ ಸೇನಾ ನೆಲೆಗಳಲ್ಲಿ ಒಂದಾಗಿದೆ.

ಬಿಸಿಲಿಗೆ ಬಂಡೆಯಲ್ಲಿ ಬಿರುಕು

ಕರ್ನೂಲು (ಪಿಟಿಐ): ಅತಿಯಾದ ಬಿಸಿಲಿನ ಕಾರಣಕ್ಕಾಗಿ ಇಲ್ಲಿನ ಗೋನೆಗಂಡ್ಲ ಗ್ರಾಮದಲ್ಲಿ ನೂರಾರು ಮನೆಗಳ ನಡುವೆ ಎತ್ತರದ ಜಾಗದಲ್ಲಿ ಇರುವ ದೊಡ್ಡ ಗಾತ್ರದ ಬಂಡೆಯಲ್ಲಿ ಬಿರುಕು ಕಾಣಿಸಿಕೊಂಡಿದೆ. ಈ ಕಾರಣಕ್ಕಾಗಿ ಈ ಪ್ರದೇಶದಲ್ಲಿ ವಾಸಿಸುವ 150 ಕುಟುಂಬಗಳನ್ನು ಸ್ಥಳಾಂತರ ಮಾಡಲಾಗಿದೆ.

‘ಬಂಡೆಯಲ್ಲಿ ಮಂಗಳವಾರ ಬಿರುಕು ಕಾಣಿಸಿಕೊಂಡಿದೆ. ಆದರೆ, ಅದೃಷ್ಟವಶಾತ್ ಬುಧವಾರದವರೆಗೂ ಈ ಬಿರುಕು ಇನ್ನಷ್ಟು ದೊಡ್ಡದಾಗಿಲ್ಲ. ಬಿರುಕು ದೊಡ್ಡದಾಗಿ ಬಂಡೆ ಹೊಡೆದು ಹೋಗಿ ಕೆಳಗೆ ಬೀಳುವ ಆತಂಕ ಎದುರಾಗಿತ್ತು. ರಾಜ್ಯ ವಿಪತ್ತು ಸ್ಪಂದನಾ ಪಡೆಯ (ಎಸ್‌ಡಿಆರ್‌ಎಫ್) ತಂಡವನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಜಿ.ಸೃಜನಾ ತಿಳಿಸಿದರು.

‘ಒಂದು ವೇಳೆ ಬಂಡೆಗಳು ಚೂರಾದರೆ, ಈ 150 ಕುಟುಂಬಗಳ ಮನೆ ಮೇಲೆ ಬೀಳುವ ಸಾಧ್ಯತೆಗಳಿವೆ. ಆದ್ದರಿಂದ ಬಂಡೆಯ ಹಿಂಭಾಗದಲ್ಲಿ ಇರುವ ಶಾಲೆಯೊಂದರಲ್ಲಿ ಈ ಕುಟುಂಬಗಳಿಗೆ ಆಶ್ರಯ ನೀಡಲಾಗಿದೆ’ ಎಂದು ಹೇಳಿದರು.

ಬಿಸಿಲಿನ ಝಳ ಹೆಚ್ಚಾದ ಕಾರಣಕ್ಕೇ ಬಂಡೆಯಲ್ಲಿ ಬಿರುಕು ಬಂದಿರಬಹುದು ಎನ್ನುವುದು ಜಿಲ್ಲಾಧಿಕಾರಿ ಅವರ ಅಭಿಪ್ರಾಯ. ಆದರೆ, ಮಂಗಳವಾರ ಕರ್ನೂಲಿನಲ್ಲಿ ಹೆಚ್ಚಿನ ತಾಪಮಾನ ದಾಖಲಾಗಿಲ್ಲ ಎನ್ನುತ್ತದೆ ಹವಾಮಾನ ಇಲಾಖೆ.

ಬಿಜೆಪಿ ವಿರುದ್ಧ ‘ಒಗ್ಗಟ್ಟು’: ಮುಂದುವರಿದ ಕಸರತ್ತು

ಒಂದನೇ ಪುಟದಿಂದ...

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎಷ್ಟು ಪಕ್ಷಗಳು ಒಟ್ಟಾಗಿ ಹೋರಾಡಲು ಕೈಜೋಡಿಸಲಿವೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ’ ಎಂದು ಹೇಳಿದರು.

‘ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮೂಡಿಸುವ ಈ ಪ್ರಯತ್ನ ನಿರಂತರ ಪ್ರಕ್ರಿಯೆ. ದೇಶದ ಹಿತದೃಷ್ಟಿಯಿಂದ ವಿರೋಧಪಕ್ಷಗಳು ಹೊಂದಿರಬೇಕಾದ ಮುನ್ನೋಟ ಏನು ಎಂಬುದನ್ನು ನಾವು ರೂಪಿಸುತ್ತೇವೆ’ ಎಂದರು.

‘ದೇಶದಲ್ಲಿ ಈಗ ಸೈದ್ಧಾಂತಿಕ ಹೋರಾಟ ನಡೆಯುತ್ತಿದೆ. ಎಲ್ಲ ವಿರೋಧ ಪಕ್ಷಗಳು ಒಟ್ಟಾಗಿ ಈ ಹೋರಾಟದಲ್ಲಿ ಪಾಲ್ಗೊಳ್ಳುತ್ತೇವೆ. ದೇಶ ಹಾಗೂ ಸಂಸ್ಥೆಗಳ ಮೇಲೆ ನಡೆಯುತ್ತಿರುವ ದಾಳಿಯನ್ನು ಒಗ್ಗಟ್ಟಿನಿಂದ ಎದುರಿಸುತ್ತೇವೆ’ ಎಂದೂ ರಾಹುಲ್ ಗಾಂಧಿ ಅವರು ತಿಳಿಸಿದರು.

ಕಾಂಗ್ರೆಸ್ಸೇತರ ಪಕ್ಷಗಳಿಂದ ವಿಭಿನ್ನ ತಂತ್ರಗಾರಿಕೆ

ನವದೆಹಲಿ: ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಮೂಡಿಸಲು ಕೆಲ ಕಾಂಗ್ರೆಸ್ಸೇತರ ಪಕ್ಷಗಳು ತಮ್ಮದೇ ತಂತ್ರಗಾರಿಕೆ ಮೊರೆ ಹೋಗಿವೆ.

‘ಒಂದು ವೇಳೆ, ವಿರೋಧ ಪಕ್ಷಗಳ ಒಗ್ಗಟ್ಟು ಸಾಧ್ಯವಾಗದಿದ್ದಲ್ಲಿ, ಅಂಥ ಪರಿಕಲ್ಪನೆಯನ್ನು ನಿರರ್ಥಕಗೊಳಿಸುವುದು ಬೇಡ. ಕೇರಳ, ಪಂಜಾಬ್ ಹಾಗೂ ಪಶ್ಚಿಮ ಬಂಗಾಳ ಸೇರಿದಂತೆ ಕೆಲ ರಾಜ್ಯಗಳಲ್ಲಿ ನಮ್ಮೊಳಗೇ ಬಡಿದಾಟ, ಸಂಘರ್ಷಗಳು ಕಂಡುಬರಬಹುದು. ಇವುಗಳನ್ನು ರಾಜ್ಯಗಳ ರಾಜಕಾರಣಕ್ಕೆ ಸೀಮಿತಗೊಳಿಸಿ, ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ವಿರುದ್ಧ ಹೋರಾಡಲು ಮುಂದಾಗಬೇಕು’ ಎಂಬ ಒಪ್ಪಂದಕ್ಕೆ ಕೆಲ ಕಾಂಗ್ರೆಸ್ಸೇತರ ಪಕ್ಷಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಆದರೆ, ಸಮಾಜವಾದಿ ಪಕ್ಷ, ಬಿಎಸ್ಪಿ, ಟಿಎಂಸಿ, ಎಎಪಿ, ವೈಎಸ್‌ಆರ್ ಕಾಂಗ್ರೆಸ್, ಬಿಜೆಡಿ ಪಕ್ಷಗಳು ಕಾಂಗ್ರೆಸ್ ಜೊತೆ ಕೈಜೋಡಿಸಲು ಉತ್ಸುಕತೆ ತೋರುತ್ತಿಲ್ಲ ಎನ್ನಲಾಗಿದೆ.



ಜೋಸ್ ಬಟ್ಲರ್ ಅರ್ಧಶತಕ; ನಾಯಕನಾಗಿ ಆಡಿದ 200ನೇ ಪಂದ್ಯದಲ್ಲಿ ಧೋನಿಗೆ ನಿರಾಸೆ

ರಾಜಸ್ಥಾನ ರಾಯಲ್ಸ್‌ಗೆ ಮಣಿದ ಚೆನ್ನೈ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕನಾಗಿ 200ನೇ ಪಂದ್ಯವನ್ನಾಡಿದ ಮಹೇಂದ್ರ ಸಿಂಗ್ ಧೋನಿ ಅವರಿಗೆ ಗೆಲುವು ದಕ್ಕಲಿಲ್ಲ.

ಧೋನಿ ಮತ್ತು ಜಡೇಜ ಜೊತೆಗೂಡಿ ಕೊನೆಯ ಐದು ಓವರ್‌ಗಳಲ್ಲಿ ವೀರೋಚಿತ ಹೋರಾಟ ತೋರಿದರೂ ಆತಿಥೇಯ ತಂಡ ಗೆಲ್ಲಲು ವಿಫಲವಾಯಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವು ಮೂರು ರನ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿತು.

ಮೊದಲು ಬ್ಯಾಟ್ ಮಾಡಿದ ಸಂಜು ಸ್ಯಾಮ್ಸನ್ ಬಳಗ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 175 ರನ್ ಗಳಿಸಿತು. ಅದಕ್ಕುತ್ತರವಾಗಿ ಚೆನ್ನೈ 20 ಓವರ್‌ಗಳಲ್ಲಿ ಆರು ವಿಕೆಟ್‌ಗೆ 172 ರನ್ ದಾಖಲಿಸಿತು.

ಸವಾಲಿನ ಗುರಿ ಬೆನ್ನತ್ತಿದ್ದ ಚೆನ್ನೈ ತಂಡವು ಆರಂಭಿಕ ಆಟಗಾರ ಋತುರಾಜ್ ಗಾಯಕವಾಡ (8) ಅವರ ವಿಕೆಟ್‌ಅನ್ನು ಬೇಗ ಕಳೆದುಕೊಂಡಿತು. ಡೆವೊನ್ ಕಾನ್ವೆ (50) ಹಾಗೂ ಅಜಿಂಕ್ಯ ರಹಾನೆ (31) ಎರಡನೇ ವಿಕೆಟ್‌ಗೆ 68 ರನ್ ಸೇರಿಸಿ ತಂಡಕ್ಕೆ ಆಸರೆಯಾಗುವ ನಿರೀಕ್ಷೆ ಮೂಡಿಸಿದ್ದರು. ಆದರೆ ಅಜಿಂಕ್ಯ ಅವರು ಆರ್.ಅಶ್ವಿನ್ (25ಕ್ಕೆ 2) ಅವರಿಗೆ ವಿಕೆಟ್ ಒಪ್ಪಿಸಿದ ಬಳಿಕ ತಂಡಕ್ಕೆ ನಿರೀಕ್ಷಿತ ಜೊತೆಯಾಟಗಳು ಮೂಡಿಬರಲಿಲ್ಲ. ಶಿವಂ ದುಬೆ, ಮೊಯೀನ್ ಅಲಿ ಮತ್ತು ಅಂಬಟಿ ರಾಯುಡು ದೊಡ್ಡ ಮೊತ್ತ ಗಳಿಸುವಲ್ಲಿ ವಿಫಲರಾದರು.

ಮುರಿಯದ ಏಳನೇ ವಿಕೆಟ್‌ಗೆ ರವೀಂದ್ರ ಜಡೇಜ (ಔಟಾಗದೆ 25) ಹಾಗೂ ಧೋನಿ (ಔಟಾಗದೆ 32) ಅಬ್ಬರದ ಆಟವಾಡಿದರು. ಇವರಿಬ್ಬರೂ ಕೊನೆಯ ಐದು ಓವರ್‌ಗಳಲ್ಲಿ 59 ರನ್ ದೋಚಿದರು. ಸಂದೀಪ್ ಶರ್ಮಾ ಎಸೆದ ಕೊನೆಯ ಓವರ್‌ನಲ್ಲಿ ಚೆನ್ನೈ ಜಯಕ್ಕೆ 21 ರನ್ ಬೇಕಿತ್ತು. ಧೋನಿ ಎರಡು ಸಿಕ್ಸರ್ ಸಿಡಿಸಿ ತೋಳ್ಬಲ ಪ್ರದರ್ಶಿಸಿದರೂ ಜಯದ ಕನಸು ಕೈಗೂಡಲಿಲ್ಲ.



ಜೋಸ್ ಬಟ್ಲರ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಬಟ್ಲರ್ ಅರ್ಧಶತಕ: ಈ ಬಾರಿಯ ಟೂರ್ನಿಯಲ್ಲಿ ಮೂರನೇ ಅರ್ಧಶತಕ ಗಳಿಸಿದ ಜೋಸ್ ಬಟ್ಲರ್ (52 ರನ್, 36 ಎ., 4X1, 6X3) ಅವರು ರಾಯಲ್ಸ್ ಇನಿಂಗ್ಸ್‌ನಲ್ಲಿ ಗಮನ ಸೆಳೆದರು. ದೇವದತ್ತ ಪಡಿಕ್ಕಲ್, ಆರ್.ಅಶ್ವಿನ್ ಮತ್ತು ಶಿಮ್ರೊನ್ ಹೆಟ್ಮೆಯೆರ್ ಅವರೂ ಸ್ಕೋರ್ ಹೆಚ್ಚಲು ನೆರವಾದರು.

ಚೆನ್ನೈ ಬೌಲರ್‌ಗಳಲ್ಲಿ ಮಿಂಚಿದ ರವೀಂದ್ರ ಜಡೇಜ 21 ರನ್‌ಗಳಿಗೆ ಎರಡು ವಿಕೆಟ್ ಪಡೆದರು. ಮಧ್ಯಮ ವೇಗಿಗಳಾದ ಅಕಾಶ್ ಸಿಂಗ್ ಮತ್ತು ತುಷಾರ್ ದೇಶಪಾಂಡೆ ಅವರೂ ತಲಾ ಎರಡು ವಿಕೆಟ್ ಗಳಿಸಿದರು.

ಬಟ್ಲರ್ ಆಸರೆ: ಟಾಸ್ ಗೆದ್ದ ಧೋನಿ, ಎದುರಾಳಿಗಳನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಯಶಸ್ವಿ ಜೈಸ್ವಾಲ್ (10) ಅವರನ್ನು ರಾಯಲ್ಸ್ ತಂಡ ಬೇಗನೇ ಕಳೆದುಕೊಂಡಿತು. ತುಷಾರ್ ದೇಶಪಾಂಡೆ ಎಸೆತದಲ್ಲಿ ಶಿವಂ ದುಬೆಗೆ ಕ್ಯಾಚಿತ್ತು ಅವರು ನಿರ್ಗಮಿಸಿದರು.

ಬಟ್ಲರ್ ಅವರನ್ನು ಕೂಡಿಕೊಂಡ ದೇವದತ್ತ ಪಡಿಕ್ಕಲ್ (38 ರನ್, 26 ಎ., 4X5) ಇನಿಂಗ್ಸ್‌ಗೆ ಬಲ ನೀಡಿದರು. ಎದುರಾಳಿ ತಂಡದ ಸ್ಪಿನ್ನರ್‌ಗಳನ್ನು ಲೀಲಾಜಾಲವಾಗಿ ಎದುರಿಸಿದ ಈ ಜೋಡಿ ಎರಡನೇ ವಿಕೆಟ್‌ಗೆ 44 ಎಸೆತಗಳಲ್ಲಿ 71 ರನ್ ಸೇರಿಸಿತು. ಬಟ್ಲರ್ ಐಪಿಎಲ್‌ನಲ್ಲಿ 3,000 ರನ್ ಪೂರೈಸಿದ ಸಾಧನೆಯನ್ನೂ ಮಾಡಿದರು.

ರಾಯಲ್ಸ್ ತಂಡ ದೊಡ್ಡ ಮೊತ್ತ ಕಲೆಹಾಕುವ ಸೂಚನೆ ನೀಡಿದ್ದಾಗ, ಜಡೇಜ ಕೈಚಳಕ ಮೆರೆದರು. ಪಡಿಕ್ಕಲ್ ಮತ್ತು ನಾಯಕ ಸ್ಯಾಮ್ಸನ್ (0) ಅವರನ್ನು ಮೂರು ಎಸೆತಗಳ ಅಂತರದಲ್ಲಿ ಪೆವಿಲಿಯನ್‌ಗೆ ಅಟ್ಟಿದರು.

ಆದರೆ ಬ್ಯಾಟಿಂಗ್‌ನಲ್ಲಿ ಬಡ್ತಿ ಪಡೆದು ಬಂದ ಆರ್.ಅಶ್ವಿನ್ (30) ಅವರು ಬಟ್ಲರ್‌ಗೆ ತಕ್ಕ ಸಾಥ್ ನೀಡಿದರಲ್ಲದೆ, ಸ್ಕೋರಿಂಗ್ ವೇಗ ತಗ್ಗದಂತೆ ನೋಡಿಕೊಂಡರು. ಆಕಾಶ್ ಸಿಂಗ್ ಬೌಲಿಂಗ್‌ನಲ್ಲಿ ಅಶ್ವಿನ್ ಸತತ ಎರಡು ಸಿಕ್ಸರ್ ಸಿಡಿಸಿದರು.

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 8 ವಿಕೆಟ್‌ಗೆ 175 (20 ಓವರುಗಳಲ್ಲಿ)

ಜೈಸ್ವಾಲ್ ಸಿ ದುಬೆ ಬಿ ದೇಶಪಾಂಡೆ 10 (8ಎ, 2x4)
ಬಟ್ಲರ್ ಬಿ ಮೊಯೀನ್ 52 (36ಎ, 1x4, 3x6)
ಪಡಿಕ್ಕಲ್ ಸಿ ಕಾನ್ವೆ ಬಿ ಜಡೇಜ 38 (26ಎ, 5x4)
ಸ್ಯಾಮ್ಸನ್ ಬಿ ಜಡೇಜ 0 (2ಎ)
ಅಶ್ವಿನ್ ಸಿ ಮಗಾಲ ಬಿ ಆಕಾಶ್ 30 (22ಎ, 1x2, 2x6)
ಹೆಟ್ಮೆಯರ್ ಔಟಾಗದೇ 30 (18ಎ, 2x4, 2x6)
ಜುರೆಲ್ ಸಿ ದುಬೆ ಬಿ ಆಕಾಶ್ 4 (6ಎ)
ಹೋಲ್ಡರ್ ಸಿ ಕಾನ್ವೆ ಬಿ ದೇಶಪಾಂಡೆ 0 (1ಎ),
ಆ್ಯಡಂ ಜಂಪಾ ರನೌಟ್ (ತೀಕ್ಷಣ/ಧೋನಿ) 1 (1ಎ)

ಇತರೆ: 10 (ವೈಡ್ 10)

ವಿಕೆಟ್ ಪತನ: 1–11 (ಯಶಸ್ವಿ ಜೈಸ್ವಾಲ್; 1.4), 2–88 (ದೇವದತ್ತ ಪಡಿಕ್ಕಲ್, 8.3), 3–88 (ಸಂಜು ಸ್ಯಾಮ್ಸನ್, 8.5), 4–135 (ರವಿಚಂದ್ರನ್ ಅಶ್ವಿನ್, 14.6), 5–142 (ಜೋಸ್ ಬಟ್ಲರ್, 16.2), 6–167 (ಧ್ರುವ್ ಜುರೆಲ್, 18.6), 7–174 (ಜೇಸನ್ ಹೋಲ್ಡರ್, 19.5), 8–175 (ಆ್ಯಡಂ ಜಂಪಾ, 19.6)

ಬೌಲಿಂಗ್: ಆಕಾಶ್ ಸಿಂಗ್ 4–0–40–2, ತುಷಾರ್ ದೇಶಪಾಂಡೆ 4–0–37–2, ಮಹೀಶ್ ತೀಕ್ಷಣ 4–0–42–0, ರವೀಂದ್ರ ಜಡೇಜ 4–0–21–2, ಮೊಯೀನ್ ಅಲಿ 2–0–21–1, ಸಿಸಾಂಡ ಮಗಾಲ 2–0–14–0

ಚೆನ್ನೈ ಸೂಪರ್ ಕಿಂಗ್ಸ್: 6ಕ್ಕೆ 172 (20 ಓವರ್‌ಗಳಲ್ಲಿ)

ಋತುರಾಜ್ ಸಿ ಜೈಸ್ವಾಲ್ ಬಿ ಸಂದೀಪ್ 8 (10 ಎ., 4X1)
ಕಾನ್ವೆ ಸಿ ಜೈಸ್ವಾಲ್ ಬಿ ಚಾಹಲ್ 50 (38 ಎ., 4X6)
ರಹಾನೆ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 31 (19 ಎ., 4X2, 6X1)
ದುಬೆ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 8 (9 ಎ., 4X1)
ಮೊಯೀನ್ ಸಿ ಸಂದೀಪ್ ಬಿ ಜಂಪಾ 7 (10 ಎ)
ರಾಯುಡು ಸಿ ಹೆಟ್ಮೆಯರ್ ಬಿ ಚಾಹಲ್ 1 (2 ಎ)
ಜಡೇಜ ಔಟಾಗದೆ 25 (15 ಎ., 4X1, 6X2)
ಧೋನಿ ಔಟಾಗದೆ 32 (17 ಎ., 4X1, 6X3)

ಇತರೆ: 10 (ಲೆಗ್‌ಬೈ 2, ವೈಡ್ 8)

ವಿಕೆಟ್ ಪತನ: 1–10 (ಋತುರಾಜ್ ಗಾಯಕವಾಡ್; 2.2), 2–78 (ಅಜಿಂಕ್ಯ ರಹಾನೆ; 9.3), 3–92 (ಶಿವಂ ದುಬೆ; 11.4), 4–102 (ಮೊಯೀನ್ ಅಲಿ; 13.5), 5–103 (ಅಂಬಟಿ ರಾಯುಡು; 14.1), 6–113 (ಡೆವೊನ್ ಕಾನ್ವೆ; 14.6)

ಬೌಲಿಂಗ್: ಸಂದೀಪ್ ಶರ್ಮಾ 3–0–30–1, ಕುಲದೀಪ್ ಸೇನ್ 2–0–8–0, ಜೇಸನ್ ಹೋಲ್ಡರ್ 3–0–37–0, ಆ್ಯಡಂ ಜಂಪಾ 4–0–43–1, ಆರ್.ಅಶ್ವಿನ್ 4–0–25–2, ಯಜುವೇಂದ್ರ ಚಾಹಲ್ 4–0–27–2

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 3 ರನ್ ಗೆಲುವು

ಟೈಟನ್ಸ್‌ಗೆ ಪಂಜಾಬ್ ಸವಾಲು

ಉಭಯ ತಂಡಗಳಿಗೆ ಜಯದ ಹಾದಿಗೆ ಮರಳುವ ಗುರಿ

ಮೊಹಾಲಿ (ಪಿಟಿಐ): ರಿಂಕು ಸಿಂಗ್ ಕೊನೆಯ ಓವರ್‌ನಲ್ಲಿ ಕೊಟ್ಟಿದ್ದ ಬಲವಾದ ಪೆಟ್ಟನ್ನು ಮರೆಯುವ ಪ್ರಯತ್ನದಲ್ಲಿರುವ ಗುಜರಾತ್ ಟೈಟನ್ಸ್ ತಂಡ, ಐಪಿಎಲ್ ಟೂರ್ನಿಯ ಪಂದ್ಯದಲ್ಲಿ ಗುರುವಾರ ಪಂಜಾಬ್ ಕಿಂಗ್ಸ್ ತಂಡದ ಸವಾಲು ಎದುರಿಸಲಿದೆ.

ಹಾರ್ದಿಕ್ ಪಾಂಡ್ಯ ನೇತೃತ್ವದ ಟೈಟನ್ಸ್ ತಂಡಕ್ಕೆ ಕಳೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಕೈಯಲ್ಲಿ ಅನಿರೀಕ್ಷಿತ ಸೋಲು ಎದುರಾಗಿತ್ತು. ಸತತ ಐದು ಸಿಕ್ಸರ್‌ಗಳನ್ನು ಸಿಡಿಸಿದ್ದ ಕೆಕೆಆರ್ ತಂಡದ ರಿಂಕು, ಟೈಟನ್ಸ್ ತಂಡದ ಕೈಯಿಂದ ಗೆಲುವನ್ನು ಕಿತ್ತುಕೊಂಡಿದ್ದರು.

ಅಂತಿಮ ಎಸೆತದಲ್ಲಿ ಎದುರಾಗಿದ್ದ ಆ ಸೋಲು ಟೈಟನ್ಸ್ ತಂಡವನ್ನು ಬಹಳ ದಿನಗಳವರೆಗೆ ಕಾಡಬಹುದು. ಆದರೂ ಆ ನಿರಾಶೆಯನ್ನು ಬೇಗನೇ ಮರೆತು ಮುಂದಿನ ಪಂದ್ಯಕ್ಕೆ ಸಜ್ಜಾಗುವ ಸವಾಲು ಆಟಗಾರರ ಮುಂದಿದೆ. ನಾಯಕ ಹಾರ್ದಿಕ್ ವಾಪಸಾಗಿರುವುದು ತಂಡದ ಬಲ ಹೆಚ್ಚಿಸಿದೆ. ಅನಾರೋಗ್ಯದ ಕಾರಣ ಅವರು ಕಳೆದ ಪಂದ್ಯದಲ್ಲಿ ಕಣಕ್ಕಿಳಿದಿರಲಿಲ್ಲ. ಅವರ ಅನುಪಸ್ಥಿತಿಯಲ್ಲಿ ತಂಡವನ್ನು ರಶೀದ್ ಖಾನ್ ಮುನ್ನಡೆಸಿದ್ದರು.

ಹಾಲಿ ಚಾಂಪಿಯನ್ನರು ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಹೊಂದಿದ್ದಾರೆ. ಪಂಜಾಬ್ ಕಿಂಗ್ಸ್ ತಂಡವನ್ನು ಅವರದ್ದೇ ನೆಲದಲ್ಲಿ ಸೋಲಿಸಬೇಕಾದರೆ ಒಗ್ಗಟ್ಟಿನ ಹೋರಾಟ ಅನಿವಾರ್ಯ ಎಂಬುದರ ಅರಿವು ಟೈಟನ್ಸ್‌ಗೆ ಇದೆ.

ಶುಭಮನ್ ಗಿಲ್, ಸಾಯಿ ಸುದರ್ಶನ್ ಮತ್ತು ವಿಜಯ್‌ಶಂಕರ್ ಅವರು ಬ್ಯಾಟಿಂಗ್ ವಿಭಾಗಕ್ಕೆ ಬಲ ತುಂಬಲಿದ್ದಾರೆ. ವಿಜಯ್ ಅವರು ಕೆಕೆಆರ್ ಎದುರಿನ ಪಂದ್ಯದಲ್ಲಿ 24 ಎಸೆತಗಳಲ್ಲಿ 63 ರನ್‌ಗಳ ಬಿರುಗಾಳಿ ಇನಿಂಗ್ಸ್ ಆಡಿದ್ದರು.



ಗುಜರಾತ್ ಟೈಟನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ (ಬಲ) ಹಾಗೂ ಕೋಚ್ ಆಶೀಶ್ ನೆಹ್ರಾ

ಪಂಜಾಬ್ ಕಿಂಗ್ಸ್ ತಂಡ ಕೊನೆಯ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು 8 ವಿಕೆಟ್‌ಗಳಿಂದ ಸೋತಿತ್ತು. ಶಿಖರ್ ಧವನ್ ಬಳಗ ಮೂರು ಪಂದ್ಯಗಳನ್ನು ಆಡಿದ್ದು, ನಾಲ್ಕು ಪಾಯಿಂಟ್ಸ್ ಹೊಂದಿದೆ.

ಮೊಹಮ್ಮದ್ ಶಮಿ, ರಶೀದ್ ಖಾನ್, ಜೋಶ್ ಲಿಟ್ಲ್ ಮತ್ತು ಅಲ್ಜರಿ ಜೋಸೆಫ್ ಅವರನ್ನೊಳಗೊಂಡ ಟೈಟನ್ಸ್ ಬೌಲಿಂಗ್ ದಾಳಿಯ ದಿಕ್ಕು ತಪ್ಪಿಸಬಲ್ಲ ಬ್ಯಾಟರ್‌ಗಳು ಪಂಜಾಬ್ ತಂಡದಲ್ಲಿದ್ದಾರೆ.

ಮೂರು ಪಂದ್ಯಗಳಿಂದ 225 ರನ್ ಕಲೆಹಾಕಿರುವ ಧವನ್ ಅವರಿಂದ ಮತ್ತೊಂದು ಭರ್ಜರಿ ಆಟವನ್ನು ತಂಡವು ನಿರೀಕ್ಷಿಸುತ್ತಿದೆ. ಸನ್‌ರೈಸರ್ಸ್ ಎದುರು ಸೋತಿದ್ದ ಪಂದ್ಯದಲ್ಲೂ ಧವನ್ ಅಜೇಯ 99 ರನ್ ಗಳಿಸಿ ಗಮನ ಸೆಳೆದಿದ್ದರು. ಅದಕ್ಕೂ ಮುನ್ನ ರಾಜಸ್ಥಾನ ರಾಯಲ್ಸ್ ವಿರುದ್ಧ 86 ಹಾಗೂ ನೈಟ್ ರೈಡರ್ಸ್ ಎದುರು 40 ರನ್ ಗಳಿಸಿದ್ದರು.

ಪ್ರಭಸಿಮ್ರನ್ ಸಿಂಗ್, ಸ್ಯಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಜಿತೇಶ್ ಶರ್ಮಾ ಅವರೂ ಸ್ಫೋಟಕ ಆಟವಾಡಬಲ್ಲ ತಾಕತ್ತು ಹೊಂದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	4	3	1	0	6	1.588
ಲಖನೌ	4	3	1	0	6	1.048
ಕೋಲ್ಕತ್ತ	3	2	1	0	4	1.375
ಗುಜರಾತ್	3	2	1	0	4	0.431
ಚೆನ್ನೈ	4	2	2	0	4	0.225
ಪಂಜಾಬ್	3	2	1	0	4	-0.281
ಬೆಂಗಳೂರು	3	1	2	0	2	-0.800
ಮುಂಬೈ	3	1	2	0	2	-0.879
ಹೈದರಾಬಾದ್	3	1	2	0	2	-1.502
ಡೆಲ್ಲಿ	4	0	4	0	0	-1.576

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶಿಖರ್	ಪಂಜಾಬ್	225

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಚಾಹಲ್	ರಾಜಸ್ಥಾನ	10

21ರಿಂದ ಚೆಸ್ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ 2000ರೊಳಗಿನ ಫಿಡೆ ರೇಟಿಂಗ್ ಹೊಂದಿರುವವರ ಚೆಸ್ ಚಾಂಪಿಯನ್‌ಷಿಪ್ ಏಪ್ರಿಲ್ 21ರಿಂದ 23ರವರೆಗೆ ಉಡುಪಿ ಜಿಲ್ಲೆಯ ಕೋಟೇಶ್ವರದಲ್ಲಿ ನಡೆಯಲಿದೆ.

ಫಿಡೆ, ಅಖಿಲ ಭಾರತ ಚೆಸ್ ಫೆಡರೇಷನ್, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಗಳ (ಕೆಎಸ್‌ಸಿಎ) ಆಶ್ರಯದಲ್ಲಿ ಕೋಟೇಶ್ವರದ ಸಹನಾ ಅಕ್ವೆಟಿಕ್ ಮತ್ತು ಸ್ಪೋರ್ಟ್ಸ್ ಕ್ಲಬ್ ಅಂಕದಕಟ್ಟೆ ಹಾಗೂ ಕಾಶ್ವಿ ಚೆಸ್ ಸ್ಕೂಲ್ ಸಹಯೋಗದಲ್ಲಿ ಟೂರ್ನಿ ಆಯೋಜನೆಯಾಗಲಿದೆ. ಟೂರ್ನಿಯ ಒಟ್ಟು ಬಹುಮಾನ ಮೊತ್ತ ₹ 3,40,000. ಮೂರು ದಿನಗಳ ಈ ಕ್ಲಾಸಿಕಲ್ ಟೂರ್ನಿಯಲ್ಲಿ ಅಗ್ರ ನಾಲ್ಕು ಸ್ಥಾನ ಪಡೆಯುವವರು ರಾಷ್ಟ್ರೀಯ ಅಮೆಚೂರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾ ಟಕ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಏಪ್ರಿಲ್ 19 ನೋಂದಾವಣೆಗೆ ಕೊನೆಯ ದಿನ. ಮಾಹಿತಿಗಾಗಿ ನರೇಶ್ ಬಿ. (ಮೊ. ಸಂಖ್ಯೆ 7899969063) ಅವರನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನೋಂದಾವಣೆಗೆ ಲಿಂಕ್: https://docs.google.com/forms/d/e/1FAIpQLScZs3gGTx3yNVZPOGn_QO_JG5nug-pPcaviqDKS7css1FT7Aw/viewform

ಟಿ20 ರ್‍ಯಾಂಕಿಂಗ್: ಅಗ್ರಸ್ಥಾನ ಉಳಿಸಿಕೊಂಡ ಸೂರ್ಯ

ದುಬೈ (ಪಿಟಿಐ): ಭಾರತದ ಸೂರ್ಯಕುಮಾರ್ ಯಾದವ್ ಅವರು ಐಸಿಸಿ ಟಿ20 ಬ್ಯಾಟರ್‌ಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಐಸಿಸಿ ಬುಧವಾರ ಬಿಡುಗಡೆಗೊಳಿಸಿದ ಪಟ್ಟಿಯಲ್ಲಿ ಸೂರ್ಯಕುಮಾರ್, 906 ರೇಟಿಂಗ್ ಪಾಯಿಂಟ್ಸ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ. ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ (811 ರೇಟಿಂಗ್ ಪಾಯಿಂಟ್ಸ್) ಮತ್ತು ಬಾಬರ್ ಆಜಂ (755) ಅವರು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಹೊಂದಿದ್ದಾರೆ.

ದಕ್ಷಿಣ ಆಫ್ರಿಕಾ ತಂಡದ ನಾಯಕ ಏಡನ್ ಮರ್ಕರಂ (748) ಹಾಗೂ ನ್ಯೂಜಿಲೆಂಡ್‌ನ ಡೆವೊನ್ ಕಾನ್ವೆ (745) ಬಳಿಕದ ಸ್ಥಾನದಲ್ಲಿದ್ದಾರೆ. ವಿರಾಟ್ ಕೊಹ್ಲಿ 15ನೇ ಸ್ಥಾನ ಉಳಿಸಿಕೊಂಡಿದ್ದಾರೆ.



ಸೂರ್ಯಕುಮಾರ್ ಯಾದವ್

ಆಸ್ಟ್ರೇಲಿಯಾ ವಿರುದ್ಧದ ಏಕದಿನ ಸರಣಿಯಲ್ಲಿ ವಿಫಲವಾಗಿದ್ದ ಸೂರ್ಯಕುಮಾರ್ ಅವರು ಐಪಿಎಲ್ ಟೂರ್ನಿಯಲ್ಲೂ ಅಬ್ಬರಿಸಿಲ್ಲ. ಮೂರು ಪಂದ್ಯಗಳಲ್ಲಿ ಕ್ರಮವಾಗಿ 15, 1 ಹಾಗೂ ಶೂನ್ಯಕ್ಕೆ ಔಟಾಗಿದ್ದರು.

ಕುಸ್ತಿ: ನಿಶಾಗೆ ಬೆಳ್ಳಿ; ಪ್ರಿಯಾಗೆ ಕಂಚು

ಅಸ್ತಾನ, ಕಜಕಸ್ತಾನ (ಪಿಟಿಐ): ಭಾರತದ ನಿಶಾ ದಹಿಯಾ ಹಾಗೂ ಪ್ರಿಯಾ ಅವರು ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಮಂಗಳವಾರ ರಾತ್ರಿ ನಡೆದ ಮಹಿಳೆಯರ 68 ಕೆಜಿ ಫೈನಲ್ ಬೌಟ್‌ನಲ್ಲಿ ನಿಶಾ 0–10ರಿಂದ ಜಪಾನ್‌ನ ಅಮಿ ಇಶೀ ಎದುರು ಪರಾಭವಗೊಂಡರು.

ನಿಶಾ, ಚಿನ್ನದ ಪದಕದ ಸುತ್ತಿನಲ್ಲಿ ಸುಲಭವಾಗಿ ಸೋಲೊಪ್ಪಿಕೊಂಡರು. 76 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಪ್ರಿಯಾ ಅವರು ಕಂಚಿನ ಪದಕದ ಬೌಟ್‌ನಲ್ಲಿ 2–1ರಿಂದ ಜಪಾನ್‌ನ ಮಿಜುಕಿ ನಗಶಿಮಾ ಅವರನ್ನು ಮಣಿಸಿದರು.



ನಿಶಾ ದಹಿಯಾ

ಫೈನಲ್‌ಗೆ ಅಂತಿಮ್: ಅಂತಿಮ್ ಪಂಘಲ್ ಅವರು ಬುಧವಾರ 53 ಕೆಜಿ ವಿಭಾಗದ ಫೈನಲ್ ತಲುಪಿದರು. ಅನ್ನು ಮಲಿಕ್ (57 ಕೆಜಿ) ಕಂಚಿನ ಪದಕದ ಸುತ್ತು ಪ್ರವೇಶಿಸಿದರು.

ಸೆಮಿಫೈನಲ್ ಬೌಟ್‌ನಲ್ಲಿ ಅಂತಿಮ್ ಅವರಿಗೆ 8–1ರಿಂದ ಉಜ್ಬೆಕಿಸ್ತಾನದ ಅಕ್ಷ್ತಂಗೆ ಕೆನಿಮ್‌ಜಯೆವಾ ಎದುರು ಗೆಲುವು ಒಲಿಯಿತು. ಎಂಟರಘಟ್ಟದಲ್ಲಿ ಅಂತಿಮ್ 6–0ಯಿಂದ ಚೀನಾದ ಲಿ ಡೆಂಗ್ ಎದುರು ಗೆದ್ದಿದ್ದರು. ಚಿನ್ನದ ಪದಕದ ಸುತ್ತಿನಲ್ಲಿ ಅಂತಿಮ್ 2021ರ ವಿಶ್ವ ಚಾಂಪಿಯನ್ ಜಪಾನ್‌ನ ಅಕಾರಿ ಫುಜಿನಾಮಿ ಅವರನ್ನು ಎದುರಿಸುವರು.

ಸೆಮಿಫೈನಲ್‌ನಲ್ಲಿ ಅನ್ನು 1–5ರಿಂದ ಜಪಾನ್‌ನ ನಂಜೊ ಎದುರು ಸೋತರು. ಕಂಚಿನ ಪದಕದ ಸುತ್ತಿನಲ್ಲಿ ಅವರು ಮಂಗೋಲಿಯಾದ ಎರ್ಡೆನೆಸುಡ್ ಬಾಟ್ ಎರ್ಡೆನೆ ಎದುರು ಸ್ಪರ್ಧಿಸಲಿದ್ದಾರೆ.



ಇಯಾನ್ ನೆಪೊಮ್‌ನಿಷಿ (ಎಡ) ಮತ್ತು ಡಿಂಗ್ ಲಿರೆನ್– ಎಎಫ್‌ಪಿ ಚಿತ್ರ

ವಿಶ್ವ ಚೆಸ್: ಮೂರನೇ ಪಂದ್ಯ ಡ್ರಾ

ಅಸ್ತಾನ, ಕಜಕಸ್ತಾನ: ಗ್ರ್ಯಾಂಡ್‌ಮಾಸ್ಟರ್‌ಗಳಾದ ಇಯಾನ್ ನೆಪೊಮ್‌ನಿಷಿ ಮತ್ತು ಡಿಂಗ್ ಲಿರೆನ್ ನಡುವಣ, 17ನೇ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಮೂರನೇ ಪಂದ್ಯ ಬುಧವಾರ 30 ನಡೆಗಳ ನಂತರ ‘ಡ್ರಾ’ ಆಯಿತು.

ಕಪ್ಪು ಕಾಯಿಗಳಲ್ಲಿ ಆಡಿದ ಲಿರೆನ್, ಸೋಮವಾರ ಎರಡನೇ ಪಂದ್ಯದಲ್ಲಿ ಅನುಭವಿಸಿದ ಸೋಲಿನ ಆಘಾತದಿಂದ ಚೇತರಿಸಿಕೊಂಡಂತೆ ಕಂಡರು. ಮೂರು ಗಂಟೆಗಳ ಆಟದ ನಂತರ ಇಬ್ಬರೂ ಪಾಯಿಂಟ್ ಹಂಚಿಕೊಳ್ಳಲು ಒಪ್ಪಿಕೊಂಡರು.

ಚೀನಾದ ಲಿರೆನ್ ಗುರುವಾರ ನಡೆಯಲಿರುವ ನಾಲ್ಕನೇ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಲಿದ್ದಾರೆ.

ಫಿಡೆ ಧ್ವಜದಡಿ ಆಡುತ್ತಿರುವ ರಷ್ಯಾ ಪ್ರಜೆ ನೆಪೊಮ್‌ನಿಷಿ 2–1 ಪಾಯಿಂಟ್‌ಗಳಿಂದ ಮುಂದಿದ್ದಾರೆ. ಮೊದಲ ಪಂದ್ಯ ‘ಡ್ರಾ’ ಆಗಿದ್ದು, ಎರಡನೇ ಪಂದ್ಯದಲ್ಲಿ ನೆಪೊಮ್‌ನಿಷಿ ಜಯಗಳಿಸಿದ್ದರು.

ಮೈಕಲ್ ಜೋರ್ಡನ್ ಶೂಗೆ ₹ 18 ಕೋಟಿ!

ನ್ಯೂಯಾರ್ಕ್ (ರಾಯಿಟರ್ಸ್): ಬ್ಯಾಸ್ಕೆಟ್‌ಬಾಲ್ ದಿಗ್ಗಜ ಅಮೆರಿಕದ ಮೈಕಲ್ ಜೋರ್ಡನ್ ಅವರು 1998ರ ಎನ್‌ಬಿಎ ಟೂರ್ನಿಯ ಫೈನಲ್ ಪಂದ್ಯದಲ್ಲಿ ಧರಿಸಿದ್ದ ಶೂಗಳು ಹರಾಜಿನಲ್ಲಿ ದಾಖಲೆಯ ₹ 18 ಕೋಟಿಗೆ ಮಾರಾಟವಾಗಿವೆ ಎಂದು ನ್ಯೂಯಾರ್ಕ್‌ನ ಸೋದೆಬೀಸ್ ಹರಾಜು ಸಂಸ್ಥೆ ತಿಳಿಸಿದೆ.

ಜೋರ್ಡನ್ ಅವರ ವೃತ್ತಿಜೀವನದ ಕೊನೆಯ ಟೂರ್ನಿ ಅದಾಗಿತ್ತು. ಷಿಕಾಗೊ ಬುಲ್ಸ್ ತಂಡವನ್ನು ಪ್ರತಿನಿಧಿಸಿದ್ದ ಅವರು ಯೂಟಾ ಜಾಝ್ ತಂಡದ ವಿರುದ್ಧದ ಫೈನಲ್‌ನಲ್ಲಿ 37 ಪಾಯಿಂಟ್ಸ್ ಕಲೆಹಾಕಿದ್ದರು. ಪಂದ್ಯವನ್ನು ಬುಲ್ಸ್ 93–88 ಪಾಯಿಂಟ್ಸ್‌ಗಳಿಂದ ಜಯಿಸಿತ್ತು.

ಆ ಪಂದ್ಯದಲ್ಲಿ ಜೋರ್ಡನ್ ಇತರ ಜತೆ ಶೂಗಳನ್ನೂ ಧರಿಸಿದ್ದರು. ಅವರು ಕೊನೆಯದಾಗಿ ಧರಿಸಿದ್ದ ಶೂಗಳನ್ನು ಹರಾಜಿಗೆ ಇಡಲಾಗಿತ್ತು ಎಂದು ಸೋದೆಬೀಸ್ ಹೇಳಿದೆ.



ಮೈಕಲ್ ಜೋರ್ಡನ್ ಧರಿಸಿದ್ದ ಶೂ–ಎಎಫ್‌ಪಿ ಚಿತ್ರ

ಸೋದೆಬೀಸ್ ಸಂಸ್ಥೆ ನಡೆಸಿದ ಹರಾಜಿನಲ್ಲಿ ಶೂಗಳು ಇಷ್ಟೊಂದು ದೊಡ್ಡ ಮೊತ್ತಕ್ಕೆ ಮಾರಾಟವಾಗಿದ್ದು ಇದೇ ಮೊದಲು. ಅಮೆರಿಕದ ಗಾಯಕ ಕಾನ್ಯೆ ವೆಸ್ಟ್ ಅವರ ಶೂಗಳು 2021 ರಲ್ಲಿ ನಡೆದಿದ್ದ ಹರಾಜಿನಲ್ಲಿ ₹ 14.74 ಕೋಟಿ ಮೊತ್ತಕ್ಕೆ ಮಾರಾಟವಾಗಿದ್ದು ಇದುವರೆಗಿನ ದಾಖಲೆಯಾಗಿತ್ತು.

ಜೋರ್ಡನ್ ಅವರು 1998ರ ಫೈನಲ್‌ನಲ್ಲಿ ಧರಿಸಿದ್ದ ಜೆರ್ಸಿ ಕಳೆದ ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಹರಾಜಿನಲ್ಲಿ ₹ 82 ಕೋಟಿ ಮೊತ್ತಕ್ಕೆ ಮಾರಾಟವಾಗಿತ್ತು.

ಫುಟ್‌ಬಾಲ್: ಬಿಎಫ್‌ಸಿಗೆ ಜಯ


ಕೋಯಿಕ್ಕೋಡ್: ಹೊಂದಾಣಿಕೆಯ ಆಟವಾಡಿದ ಬೆಂಗಳೂರು ಎಫ್‌ಸಿ ತಂಡದವರು ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಗೆಲುವು ಸಾಧಿಸಿದರು.

ಇಲ್ಲಿನ ಇಎಂಎಸ್ ಕಾರ್ಪೊರೇಷನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ‘ಎ’ ಗುಂಪಿನ ತನ್ನ ಎರಡನೇ ಪಂದ್ಯದಲ್ಲಿ ಬೆಂಗಳೂರಿನ ತಂಡ 2–0 ಗೋಲುಗಳಿಂದ ರೌಂಡ್‌ಗ್ಲಾಸ್ ಪಂಜಾಬ್ ಎಫ್‌ಸಿ ತಂಡವನ್ನು ಮಣಿಸಿತು.

ಉದಾಂತ ಸಿಂಗ್ 66ನೇ ನಿಮಿಷದಲ್ಲಿ ಮೊದಲ ಗೋಲು ತಂದಿತ್ತರೆ, ಜಾವಿ ಹೆರ್ನಾಂಡೆಜ್ ಅವರು ಸ್ಟಾಪೇಜ್ ಅವಧಿಯಲ್ಲಿ (90+6) ಎರಡನೇ ಗೋಲು ಗಳಿಸಿ ಬಿಎಫ್‌ಸಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಎರಡು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಹೊಂದಿರುವ ಬಿಎಫ್‌ಸಿ ಎರಡನೇ ಸ್ಥಾನದಲ್ಲಿದೆ. ದಿನದ ಮತ್ತೊಂದು ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡವನ್ನು ಮಣಿಸಿದ ಶ್ರೀನಿಧಿ ಡೆಕ್ಕನ್ ಎಫ್‌ಸಿ ಅಗ್ರಸ್ಥಾನದಲ್ಲಿದೆ.

ಬಿಎಫ್‌ಸಿ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಭಾನುವಾರ ಕೇರಳ ಬ್ಲಾಸ್ಟರ್ಸ್ ತಂಡವನ್ನು ಎದುರಿಸಲಿದೆ.



ಋತುಜಾ ಭೋಸ್ಲೆ

ಟೆನಿಸ್: ಭಾರತಕ್ಕೆ ಮತ್ತೊಂದು ಜಯ

ತಾಷ್ಕೆಂಟ್ (ಪಿಟಿಐ): ಬಿಲ್ಲಿ ಜೀನ್ ಕಿಂಗ್ ಕಪ್ ಟೆನಿಸ್ ಏಷ್ಯಾ ಓಷಾನಿಯಾ ಗುಂಪು ಒಂದರ ಸ್ಪರ್ಧೆಯಲ್ಲಿ ಭಾರತ ಮತ್ತೊಂದು ಜಯ ಸಂಪಾದಿಸಿತು. ಬುಧವಾರ ನಡೆದ ಪಂದ್ಯದಲ್ಲಿ 3–0ಯಿಂದ ಆತಿಥೇಯ ಉಜ್ಬೆಕಿಸ್ತಾನ ವಿರುದ್ಧ ಗೆದ್ದಿತು.

ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಭಾರತದ ಋತುಜಾ ಭೋಸ್ಲೆ 5-7, 6-2, 6-4ರಿಂದ ಉಜ್ಬೆಕಿಸ್ತಾನದ ಸಬ್ರಿನಾ ಒಲಿಮ್ಜನೊವಾ ಅವರನ್ನು ಮಣಿಸಿ ಮುನ್ನಡೆ ಒದಗಿಸಿಕೊಟ್ಟರು. ಸಿಂಗಲ್ಸ್ ವಿಭಾಗದ ಎರಡನೇ ಹಣಾಹಣಿಯಲ್ಲಿ ಅಂಕಿತಾ ರೈನಾ ಅವರಿಗೆ 6-4, 6-2ರಿಂದ ಸೆವಿಲ್ ಯುಲ್ದಶೆವಾ ವಿರುದ್ಧ ಜಯ ಒಲಿಯಿತು.

ಡಬಲ್ಸ್‌ನಲ್ಲಿ ಶ್ರೀವಲ್ಲಿ ಭಮಿದಿಪಾಟಿ– ವೈದೇಹಿ ಚೌಧರಿ ಜೋಡಿ 6-1, 6-0ರಿಂದ ಮಪ್ಪು ನಬೊನು ಕರಮೊನೊವಾ– ಒಮಿನಹೊನ್ ವಲಿಹನೊವಾ ಅವರನ್ನು ಮಣಿಸಿ ಕ್ಲೀನ್‌ಸ್ವೀಪ್‌ಗೆ ಕಾರಣರಾದರು.

ಗಾಲ್ಫ್: ಜಂಟಿ ಅಗ್ರಸ್ಥಾನದಲ್ಲಿ ಯಶಸ್


ಚಂಡೀಗಡ (ಪಿಟಿಐ): ಮೈಸೂರಿನ ಯಶಸ್ ಚಂದ್ರ, ಅಮೆರಿಕದ ವರುಣ್ ಚೋಪ್ರಾ, ಗುರುಗ್ರಾಮದ ಟ್ಯಾಪಿ ಫಾಯ್ ಮತ್ತು ಕೋಲ್ಕತ್ತದ ಸಂಜು ಮೊಹಮ್ಮದ್ ಅವರು ಇಲ್ಲಿ ನಡೆಯುತ್ತಿರುವ ಟಾಟಾ ಸ್ಟೀಲ್ ಪಿಜಿಟಿಐ ಆಟಗಾರರ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಜಂಟಿ ಮುನ್ನಡೆಯಲ್ಲಿದ್ದರು. ಚಾಂಪಿಯನ್‌ಷಿಪ್ ಬುಧವಾರ ಆರಂಭವಾಗಿದೆ.

ಕೆಲವರಿಗೆ ಎನ್‌ಸಿಎ ಕಾಯಂ ನಿವಾಸ

ಬೌಲರ್‌ಗಳ ಗಾಯದ ನಿರ್ವಹಣೆ; ರವಿಶಾಸ್ತ್ರಿ ಟೀಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಬೌಲರ್‌ಗಳ ಫಿಟ್‌ನೆಸ್ ಮತ್ತು ಗಾಯದ ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅಸಮಾಧಾನ ಹೊರಹಾಕಿರುವ ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರವಿಶಾಸ್ತ್ರಿ, ‘ಕೆಲವರು ಎನ್‌ಸಿಎಯ ಕಾಯಂ ನಿವಾಸಿಗಳಾಗಿದ್ದಾರೆ’ ಎಂದು ಟೀಕಿಸಿದ್ದಾರೆ.

‘ಕಳೆದ 3–4 ವರ್ಷಗಳಲ್ಲಿ ಒಂದಷ್ಟು ಕ್ರಿಕೆಟಿಗರು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯನ್ನು (ಎನ್‌ಸಿಎ) ತಮ್ಮ ಕಾಯಂ ನಿವಾಸವನ್ನಾಗಿ ಮಾಡಿಕೊಂಡಿದ್ದಾರೆ. ಬಯಸಿದಾಗಲೆಲ್ಲಾ ಅವರಿಗೆ ಎನ್‌ಸಿಎಗೆ ಹೋಗಲು ಅನುಮತಿ ದೊರೆಯುತ್ತದೆ. ಈ ಬೆಳವಣಿಗೆ ಒಳ್ಳೆಯದಲ್ಲ’ ಎಂದು ಇಎಸ್‌ಪಿಎನ್‌ನ ಡಿಜಿಟಲ್ ವಿಡಿಯೊದಲ್ಲಿ ರವಿಶಾಸ್ತ್ರಿ ಅವರು ವ್ಯಂಗ್ಯದ ಧಾಟಿಯಲ್ಲಿ ಹೇಳಿದ್ದಾರೆ.



ರವಿಶಾಸ್ತ್ರಿ

ಬಿಸಿಸಿಐ ಕೇಂದ್ರೀಯ ಗುತ್ತಿಗೆ ಪಟ್ಟಿಯಲ್ಲಿರುವ ಕ್ರಿಕೆಟಿಗರ ಗಾಯದ ನಿರ್ವಹಣೆಯನ್ನು ಎನ್‌ಸಿಎ ಮಾಡುತ್ತದೆ. ಇಲ್ಲಿನ ತಜ್ಞ ವೈದ್ಯರ ತಂಡ ಆಟಗಾರರ ಫಿಟ್‌ನೆಸ್ ಮೇಲೆ ನಿಗಾ ಇಟ್ಟಿರುತ್ತದೆ. ಎನ್‌ಸಿಎ ವೈದ್ಯರ ತಂಡದಿಂದ ‘ಫಿಟ್’ ಎಂಬ ಪ್ರಮಾಣಪತ್ರ ಪಡೆದುಕೊಂಡವರೂ ಮತ್ತೆ ಗಾಯದ ಸಮಸ್ಯೆಗೆ ಒಳಗಾಗುವುದು ಏಕೆ ಎಂದು ಅವರು ಪ್ರಶ್ನಿಸಿದ್ದಾರೆ.

ರವಿಶಾಸ್ತ್ರಿ ಯಾವುದೇ ಬೌಲರ್‌ನ ಹೆಸರು ಉಲ್ಲೇಖಿಸಿಲ್ಲವಾದರೂ, ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ವೇಗದ ಬೌಲರ್ ದೀಪಕ್ ಚಾಹರ್ ಬಗ್ಗೆ ಈ ಮಾತುಗಳನ್ನಾಡಿರುವುದು ಸ್ಪಷ್ಟ.

ಚಾಹರ್ ಅವರು ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಕೇವಲ ಒಂದು ಓವರ್ ಬೌಲ್ ಮಾಡಿದ ಬಳಿಕ ಮಂಡಿರಜ್ಜು ಗಾಯದಿಂದ ಅಂಗಳದಿಂದ ಹೊರನಡೆದಿದ್ದರು. ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ ಮತ್ತು ಪ್ರಸಿದ್ಧ ಕೃಷ್ಣ ಅವರೂ ಗಾಯದಿಂದಾಗಿ ಹಲವು ಸಮಯದಿಂದ ಆಟದಿಂದ ದೂರವುಳಿದಿದ್ದಾರೆ.

‘ಎನ್‌ಸಿಎನಲ್ಲಿ ಆರೈಕೆ ಪಡೆದ ಬಳಿಕವೂ ನಿಮಗೆ ಸತತವಾಗಿ ನಾಲ್ಕು ಪಂದ್ಯಗಳನ್ನು ಆಡಲು ಆಗುವುದಿಲ್ಲ ಎಂದರೆ ಏನಿದರ ಅರ್ಥ? ಮೂರು ಪಂದ್ಯ ಆಡಿದ ಬಳಿಕ ಮತ್ತೆ ಚಿಕಿತ್ಸೆಗಾಗಿ ಎನ್‌ಸಿಎಗೆ ಬರುತ್ತೀರಿ’ ಎಂದು ಹರಿಹಾಯ್ದರು.

‘ಪುನಶ್ಚೇತನಕ್ಕಾಗಿ ಎನ್‌ಸಿಎಗೆ ಹೋದವರು ಪೂರ್ಣ ಫಿಟ್‌ನೆಸ್ ಹೊಂದಿದ ಬಳಿಕವೇ ಮತ್ತೆ ಆಡಲಿಳಿಯಬೇಕು. ಹಣ ಮತ್ತು ಸಮಯ ವ್ಯರ್ಥ ಮಾಡದಿರಿ’ ಎಂದು ಆಟಗಾರರಿಗೆ ಸಲಹೆ ನೀಡಿದರು.

ಸೋನಿ ಸ್ಪೋರ್ಟ್ಸ್–ಯುಇಎಫ್‌ಎ ಒಪ್ಪಂದ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋನಿ ಸ್ಪೋರ್ಟ್ಸ್ ವಾಹಿನಿಯು ಯೂರೋಪಿಯನ್ ಫುಟ್‌ಬಾಲ್ ಸಂಸ್ಥೆಗಳ ಒಕ್ಕೂಟದ (ಯುಇಎಫ್‌ಎ) ಜೊತೆಗಿನ ಒಪ್ಪಂದವನ್ನು 2028ರವರೆಗೆ ವಿಸ್ತರಿಸಿಕೊಂಡಿದೆ.

ಈ ಒಪ್ಪಂದದ ಅನ್ವಯ ಯೂರೋಪಿಯನ್ ರಾಷ್ಟ್ರೀಯ ತಂಡಗಳು ಆಡುವ ಟೂರ್ನಿಗಳ ಟಿವಿ ಮತ್ತು ಡಿಜಿಟಲ್ ಮಾಧ್ಯಮ ಪ್ರಸಾರ ಹಕ್ಕುಗಳನ್ನು ಸೋನಿ ಸ್ಪೋರ್ಟ್ಸ್ ಪಡೆದುಕೊಂಡಿದೆ. 2024 ಮತ್ತು 2028ರ ಯೂರೋ ಕಪ್, ಕ್ವಾಲಿಫೈಯರ್ಸ್ ಮತ್ತು ಸ್ನೇಹಪರ ಪಂದ್ಯಗಳು ಇದರಲ್ಲಿ ಸೇರಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.